ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಚಿಕೆ 8 • ಸಂಪುಟ 3 • ಆಗಸ್ಟ್ 2025 • ಬೆಲೆ ರೂ. 18/–

ಬಿಳುಪು

VENMAI ಕನ್ನಡ ಮಾಸಿಕ

| ಕನ್ನಡ ಮಾಸಿಕ |

ಬಿಡುಗಡೆ
ವಿಶೇಷಾಂಕ

RAMRAJ
mrithu®
TOWELS
SOFT LIKE
Foam
MRITHU PREMIUM
BATH TOWELS
STORE LOCATION
Shop Online at
www.ramrajcotton.in
BAMBOO TOWELS
SIGNATURE TOWELS
TERRY TOWELS
STRIPED & CHECKERED TOWELS
SUPER SOFT & SUPER ABSORBENT
Available at Ramraj Showrooms and All Leading Textile Shops



ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ
ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ತಿಳಿದುಕೊಂಡು
ಎಲ್ಲಾ ಸಮಸ್ಯೆಗಳಿಂದಲೂ ಬಿಡುಗಡೆ ಹೊಂದಲು
ನೆಮ್ಮದಿಯ ಜೀವನ ನಡೆಸಲು ದಾರಿ ತೋರಿಸುವ
ಬಿಡುಗಡೆ
ವಿಶೇಷಾಂಕ
ಎನ್ನುವ ಈ ಸುಮಧುರ ಸಂಚಿಕೆಯನ್ನು
ನಿಮಗೆ ನೀಡಲು ನಾವು ಹೆಮ್ಮೆ ಪಡುತ್ತೇವೆ.

ಗೌರವಾನ್ವಿತರಿಗೆ...

ನಮಸ್ಕಾರ.

ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕಾಗಿ, ಒಂದು ಸಾಯಂಕಾಲ ಪ್ರಯಾಣ ಮಾಡುತ್ತಿದ್ದೆ. ಹಾದಿಯಲ್ಲಿ, ಎಂಟನೇ ತರಗತಿಯವರೆಗೂ ಕಲಿಸುವ ಮಾಧ್ಯಮಿಕ ಶಾಲೆಯ ಕೊನೆಯ ಬೆಲ್ ಬಾರಿಸುವ ಶಬ್ದ ಕೇಳಿಸಿತು. ಕೆಲವೇ ಕ್ಷಣಗಳಲ್ಲಿ ಶಾಲೆಯ ಹುಡುಗರು ಕಿರುಚುತ್ತಾ ಕೂಗಾಡುತ್ತಾ ಉಲ್ಲಾಸದಿಂದ ಹೊರಗೆ ಓಡಿ ಬರುವ ದೃಶ್ಯ ಕಾಣಿಸಿತು. ಪಂಜರದೊಳಗೆ ಬಂಧಿಸಿಟ್ಟ ಹಕ್ಕಿಗಳು ಬಿಡುಗಡೆ-ಯಾಗಿ ಆಕಾಶದತ್ತ ಒಂದೇ ಬಾರಿಗೆ ಹಾರಿ ಹೋಗುವ ದೃಶ್ಯ ನನಗೆ ನೆನಪಾಯಿತು. ಜೊತೆಗೆ ಅದು ನನಗೆ ನನ್ನ ಬಾಲ್ಯವನ್ನೂ ನೆನಪು ಮಾಡಿತು. 'ಮಳೆ ಸುರಿದರೆ', ಜಿಲ್ಲಾಧಿಕಾರಿಗಳ ಕಛೇರಿಗೆ ಫೋನ್ ಮಾಡಿ, 'ಶಾಲೆಗೆ ರಜೆ ಘೋಷಿಸಲಾಗಿದೆಯೇ?' ಎಂದು ಕೇಳುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಮಕ್ಕಳು ಶಾಲೆಗೆ ಹೋಗುವುದನ್ನು ಏಕೆ ಬಯಸುವುದಿಲ್ಲ ಎಂಬ ಮುಖ್ಯವಾದ ಪ್ರಶ್ನೆಗೆ ಇನ್ನೂ ಉತ್ತರವನ್ನು ಹುಡುಕಾಡಬೇಕಾಗಿದೆ.

50 ವರ್ಷಗಳ ಹಿಂದೆ ನಾನು ವಿದ್ಯಾಭ್ಯಾಸ ಮಾಡಿದ ಕಾಲದಿಂದ ಹಿಡಿದು ಇಂದಿನವರೆಗೂ ಈ ದೃಶ್ಯ ಬದಲಾಗಿಯೇ ಇಲ್ಲ ಎಂದು ನನಗನ್ನಿಸಿತು. ಶಾಲೆಗೆ ಹೋಗುವುದು ಎಂದರೆ ಸೆರೆಮನೆಗೆ ಹೋಗುವಂತೆಯೂ, ಶಾಲೆಯಿಂದ ಹೊರಗೆ ಬರುವುದು ಎಂಬುದು ಬಿಡುಗಡೆಯ ಭಾವವನ್ನೂ ನೀಡುತ್ತದೆ. ಓದಿನ ಮೇಲಿನ ಆಸಕ್ತಿ ಕ್ರಮೇಣ ಕಡಿಮೆಯಾಗಿ, ಶಾಲಾ ವಿದ್ಯಾಭ್ಯಾಸವನ್ನೂ ಕೂಡ ಪೂರ್ತಿ ಮಾಡದೆ ಶಾಲೆಯಿಂದ ಹೊರ ಬಂದುದನ್ನು ನೆನೆದು ನಾನು ಹಲವು ಸಲ ವಿಷಾದಿಸಿದ್ದೇನೆ. ಶಾಲೆಯ ವಾತಾವರಣ ನನಗೆ ಆಕರ್ಷಕವಾಗಿಲ್ಲದೇ ಇದ್ದುದನ್ನು, 'ನನಗೆ ಓದಿನ ಮೇಲೆಯೇ ಆಸಕ್ತಿಯಿಲ್ಲ' ಎಂದು ನನಗೆ ನಾನೇ ತಪ್ಪಾಗಿ ಅರ್ಥ ಮಾಡಿಕೊಂಡು, ಅದನ್ನೇ ನಂಬಿಕೊಂಡಿದ್ದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಕಲಿಕೆಯ ವಾತಾವರಣವು ನನ್ನೊಳಗೆ ನಂಬಿಕೆ ಹುಟ್ಟಿಸುವುದಕ್ಕೆ ಬದಲಾಗಿ ಭಯವನ್ನು ಹುಟ್ಟು ಹಾಕಿತ್ತು.

ಒಂದು ರೀತಿಯಲ್ಲಿ ನೋಡಿದರೆ 'ಭಯ' ಎಂಬುದೇ ನಿಜವಾದ ಸೆರೆಮನೆ. ಹೊಸದಾದ ಯಾವ ಪ್ರಯತ್ನವನ್ನೂ ಮಾಡಲು ಬಿಡದೆ ತಡೆಯುವುದು 'ಭಯ' ಎಂದಾದರೆ, 'ಏನು ಬೇಕಾದರೂ ಆಗಲಿ, ಒಂದು ಕೈ ನೋಡೇ ಬಿಡೋಣ' ಎನ್ನುವಂತಹ ನಂಬಿಕೆಯನ್ನು ನೀಡುವುದೇ 'ಬಿಡುಗಡೆಯ ಭಾವ'!

ಮಹಾತ್ಮ ಗಾಂಧೀಜಿಯವರನ್ನು ಭಾರತದ ಅತಿ ಶ್ರೇಷ್ಠ ನಾಯಕ-ರೆಂದು ಭಾವಿಸಲು ಒಂದು ಕಾರಣವಿದೆ. ಭಾರತೀಯರೆಲ್ಲರೂ ದಾಸ್ಯದಿಂದ ವಿಮುಕ್ತಿಯನ್ನು ಪಡೆಯಬೇಕೆಂದು ಭಾವಿಸಿ, ದಕ್ಷಿಣ ಆಫ್ರಿಕದಲ್ಲಿ ತಾವು ಮಾಡುತ್ತಿದ್ದ ವಕೀಲಿ ವೃತ್ತಿಯನ್ನು ಬಿಟ್ಟು ಅವರು ತಮ್ಮ ತಾಯ್ನಾಡಾದ ಭಾರತಕ್ಕೆ ಮತ್ತೆ ಮರಳಿ ಬಂದರು. ಬ್ರಿಟೀಷರನ್ನು ಎದುರಿಸಿ ಹಲವು ಶಾಂತಿಯುತವಾದ ಹೋರಾಟಗಳನ್ನು ಮಾಡಿ ಸೆರೆಮನೆಗೂ ಹೋಗಿ ಬಂದರು. ಜಾತಿ, ಮತ, ಧರ್ಮ ಹೀಗೆ ಬೇರೆ ಬೇರೆ ಕಾರಣಗಳಿಂದ ಚೆದುರಿ ಹೋಗಿದ್ದ ಜನರನ್ನು ಒಂದುಗೂಡಿಸಿ ಅವರೆಲ್ಲರಲ್ಲೂ ಬಿಡುಗಡೆಯ ಬಯಕೆಯನ್ನು ಬಿತ್ತಿ, ಅದಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟೀಷರ ಬಳಿ ಗುಲಾಮರಂತೆ ಇಲ್ಲಿನ ಕೋಟಿಗಟ್ಟಲೆ ಜನರು ನಡೆದುಕೊಳ್ಳಲು ಮೂಲ ಕಾರಣವಾಗಿದ್ದುದು ಅವರಲ್ಲಿದ್ದ ಭಯ.

ಬ್ರಿಟೀಷರು ಇಲ್ಲಿನ ಜನರನ್ನು ತುಪಾಕಿಯಿಂದ ಸುಡುತ್ತಿದ್ದರು, ಸೆರೆಮನೆಗೆ ತಳ್ಳಿ ಹಿಂಸಿಸುತ್ತಿದ್ದರು. ಇಂತಹ ಹತ್ತು ಹಲವು ಸಮಸ್ಯೆಗಳ ಕಾರಣದಿಂದಾಗಿ ಬ್ರಿಟಿಷರಿಗೆ ಶರಣಾಗಲು ಅವರು ಸಿದ್ಧರಾಗಿದ್ದರು. ಜೈಲಿನಲ್ಲಿಡುವ ಭಯ ಎಲ್ಲರ ಮನಸ್ಸನ್ನೂ ವಿಶೇಷವಾಗಿ ಕಾಡುತ್ತಿದೆ ಎಂದು ಮಹಾತ್ಮಗಾಂಧೀಜಿಯವರು ಅರಿತುಕೊಂಡರು. ಹೋರಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ ಎನ್ನುವ ಭಯ ಜನರು ಒಟ್ಟಿಗೆ ಸೇರುವುದನ್ನು ತಡೆಯಿತು. ಆದ್ದರಿಂದಲೇ ಅವರು, 'ನಿಮ್ಮ ಬಂದೂಕಾಗಲಿ ಅಥವಾ ಇಕ್ಕಟ್ಟಾದ ಜೈಲಾಗಲಿ ನನ್ನ ಹೋರಾಟದ ಮನೋಭಾವವನ್ನು ಮುರಿಯುವುದಿಲ್ಲ' ಎಂದು ಅವರು ಧೈರ್ಯದಿಂದ ಮುನ್ನುಗ್ಗಿದರು. ಅವರಂತೆಯೇ, ಅನೇಕ ನಾಯಕರು ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ಗಾಂಧೀಜಿ ಮತ್ತು ಇತರ ನಾಯಕರ ನಡುವೆ ಬಹಳ ಮುಖ್ಯವಾದ ವ್ಯತ್ಯಾಸವಿದೆ. ಅವರಿಗಿಂತ ಮೊದಲು ಹೋರಾಟದಲ್ಲಿ ತೊಡಗಿದ್ದ ನಾಯಕರು ಜೈಲಿನ ಭಯದೊಂದಿಗೇ ಹೋರಾಡುತ್ತಿದ್ದರು. ಜನರು ಕೂಡ ಭಯಭೀತರಾಗಿದ್ದರು. ಗಾಂಧಿಯವರು ಜನರ ಮನಸ್ಸಿನಲ್ಲಿ, "ನೀವು ದೇಶಕ್ಕಾಗಿ ಹೋರಾಡಬಹುದು ಮತ್ತು ಜೈಲಿಗೆ ಹೋಗಬಹುದು. ಅದು ಹೆಮ್ಮೆಯ ವಿಷಯ" ಎಂಬ ಭಾವವನ್ನು ತುಂಬಿದರು. ಭಯ ಕಡಿಮೆಯಾಗುತ್ತಿದ್ದಂತೆ ಬ್ರಿಟಿಷ್ ಜೈಲುಗಳು ತುಂಬಿ ತುಳುಕತೊಡಗಿದವು. ಅದರ ನಂತರ ದೇಶಾದ್ಯಂತ ಭುಗಿಲೆದ್ದ ನಾಗರಿಕ ಅಶಾಂತಿಯನ್ನು ನಿಯಂತ್ರಿಸಲು ಬ್ರಿಟಿಷ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಜೈಲಿನ ಭಯವು ಗುಲಾಮಗಿರಿಯ ಜೀವನಕ್ಕೆ ಕಾರಣವಾಗಿದ್ದರೆ, ಆ ಭಯವನ್ನು ನಿವಾರಿಸಿಕೊಂಡು ಹೋರಾಟ ಪ್ರಾರಂಭವಾದಾಗ, ದೇಶಕ್ಕೆ ಸ್ವಾತಂತ್ರ್ಯವು ಉಡುಗೊರೆಯಾಗಿ ಸಿಕ್ಕಿತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ, ಗಾಂಧಿಯವರ ವಿಶಿಷ್ಟ ಪ್ರತಿಭೆಯೆಂದರೆ ಅವರು ಜನರಿಂದ ಜೈಲಿನ ಭಯವನ್ನು ತೆಗೆದು ಹಾಕಿ ಅವರನ್ನು ಹೋರಾಡುವಂತೆ ಪ್ರೇರೇಪಿಸಿದರು.

ಶಾಲೆಗೆ ಹೋಗುವ ಮಗುವನ್ನು ಅದರ ಇಚ್ಛೆಗೆ ವಿರುದ್ಧವಾಗಿ ಶಾಲೆಯಲ್ಲಿ ಕೂರಿಸಿದರೂ, ಮಗುವಿನ ಮನಸ್ಸು ಶಾಲಾ ರಜಾದಿನಗಳನ್ನು ಆನಂದಿಸುತ್ತದೆ. ತಪ್ಪು ಮಾಡಿ ಜೈಲಿಗೆ ಹೋದವರು ಸಹ, ಅಲ್ಲಿ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಶೀಘ್ರದಲ್ಲೇ ಜೈಲಿನಿಂದ ಬಿಡುಗಡೆಯಾಗಬೇಕೆಂದು ಬಯಸುತ್ತಾರೆ. ಸ್ವತಂತ್ರವಾಗಿ ಬದುಕಬೇಕೆಂದು ಬಯಸದ ಯಾವುದೇ ಜೀವಿ ಈ ಭೂಮಿಯಲ್ಲಿ

ಇಲ್ಲ. ಒಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಸ್ವಾತಂತ್ರ್ಯದ ಭಾವನೆಯನ್ನು ಹೊಂದಿದ್ದರೆ ಮಾತ್ರ ಸಂತೋಷವಾಗಿರಲು ಸಾಧ್ಯ. ಸ್ವಾತಂತ್ರ್ಯವು ಆಹಾರದಂತೆಯೇ ಜೀವನದ ಮೂಲಭೂತ ಅಗತ್ಯವಾಗಿದೆ. ಅದು ಬಹುಮುಖಿಯಾಗಿದೆ. ಸಾಮಾಜಿಕ ಸ್ವಾತಂತ್ರ್ಯವಿಲ್ಲದ ದೇಶವು ತನ್ನ ದೇಶದ ಎಲ್ಲ ಜನರಿಗೂ ಸಂತೋಷ ಅಥವಾ ಅಭಿವೃದ್ಧಿಯನ್ನು ತಂದು ಕೊಡುವುದಿಲ್ಲ.

ದಕ್ಷಿಣ ಭಾರತದ ಪ್ರಸಿದ್ಧ ಕವಿ ಭಾರತಿಯಾರ್, ಸ್ವಾಮಿ ವಿವೇಕಾನಂದರ ಶಿಷ್ಯೆ ನಿವೇದಿತಾ ಅವರನ್ನು ಭೇಟಿ ಮಾಡಲು ಕೋಲ್ಕತ್ತಾಗೆ ಹೋಗಿದ್ದರು. ರಾಷ್ಟ್ರದ ವಿಮೋಚನೆಗಾಗಿ ವಿವಿಧ ಬಗೆಯ ಹಲವು ಹಾಡುಗಳನ್ನು ರಚಿಸಿದ್ದ ಭಾರತಿಯಾರ್ ಅವರಿಗೆ, ಸೋದರಿ ನಿವೇದಿತಾ ಅವರು ಕೇಳಿದ ಒಂದು ಪ್ರಶ್ನೆಯು ವಿಮೋಚನೆಯ ಬಹುಮುಖಿ ಸ್ವರೂಪ ಮತ್ತು ಅದರ ಅಗತ್ಯತೆಯ ಅರಿವು ಮೂಡಿಸಿತು. ನಿವೇದಿತಾ ತಮ್ಮನ್ನು ಭೇಟಿಯಾಗಲು ಬಂದಿದ್ದ ಭಾರತಿಯಾರ್ ಅವರನ್ನು, "ನೀವು ನಿಮ್ಮ ಹೆಂಡತಿಯನ್ನು ಜೊತೆಗೆ ಕರೆತರಲಿಲ್ಲವೇ?" ಎಂದು ಕೇಳಿದರು. ಭಾರತಿಯಾರ್, "ನಮ್ಮ ಸಾಮಾಜಿಕ ಪದ್ಧತಿಗಳ ಪ್ರಕಾರ, ನಾವು ಮಹಿಳೆಯರನ್ನು ಹೊರಗೆ ಕರೆತರುವುದಿಲ್ಲ" ಎಂದು ಉತ್ತರಿಸಿದರು. ಇದನ್ನು ಕೇಳಿದ ನಿವೇದಿತಾ, "ನಿಮ್ಮ ಸ್ವಂತ ಹೆಂಡತಿಗೇ ನೀವು ಸ್ವಾತಂತ್ರ್ಯ ನೀಡದಿದ್ದರೆ ನೀವು ಭಾರತದ ವಿಮೋಚನೆಯನ್ನು ಹೇಗೆ ಸಾಧಿಸಲು ಸಾಧ್ಯ?" ಎಂದು ಕೇಳಿದರು. ಮಹಿಳೆಯರ ವಿಮೋಚನೆಯಾಗದೆ ದೇಶದ ವಿಮೋಚನೆಗಾಗಿ ಯೋಚಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಭಾರತಿಯಾರ್ ಚೆನ್ನಾಗಿ ಅರ್ಥ ಮಾಡಿಕೊಂಡರು. ಅಲ್ಲಿಯವರೆಗೆ, ರಾಷ್ಟ್ರದ ವಿಮೋಚನೆಗಾಗಿ ಹಾಡುಗಳನ್ನು ರಚಿಸುತ್ತಿದ್ದ ವಿವೇಕಾನಂದರು, ಸೋದರಿ ನಿವೇದಿತಾ ಅವರ ಈ ಪ್ರಶ್ನೆಯ ನಂತರ, ಮಹಿಳಾ ವಿಮೋಚನೆಯ ಅಗತ್ಯವನ್ನು ಒತ್ತಿ ಹೇಳಿ ಹಾಡುಗಳನ್ನು ಬರೆಯತೊಡಗಿದರು.

ಮಾನವರ ಎಲ್ಲಾ ಸಾಮರ್ಥ್ಯಗಳು ಸಂಪೂರ್ಣವಾಗಿ ಪ್ರಕಟವಾಗಬೇಕಾದರೆ, ಅವರು ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಜೀವನವನ್ನು ಸಂತೋಷದಿಂದ ನಡೆಸಬೇಕು. 'ಯಾರೂ ಯಾರಿಗಿಂತಲೂ ಶ್ರೇಷ್ಠರಲ್ಲ, ಯಾರೂ ಯಾರಿಗಿಂತಲೂ ಕೀಳೂ ಅಲ್ಲ' ಎಂಬ ಕಲ್ಪನೆಯೇ ಸ್ವಾತಂತ್ರ್ಯದ ಭಾವನೆ. ನಾವು ಜೀವನವನ್ನು ಭಯವಿಲ್ಲದೆ ಎದುರಿಸಬೇಕಾದರೆ, ಸಮಾಜದಲ್ಲಿ ಸ್ವಾತಂತ್ರ್ಯದ ಭಾವನೆಯ ಅಗತ್ಯವನ್ನು ನಾವು ಅರಿತುಕೊಳ್ಳಬೇಕು. ವ್ಯಕ್ತಿಗಳ ನಿಜವಾದ ಸಂತೋಷ ಮತ್ತು ದೇಶದ ನಿಜವಾದ ಅಭಿವೃದ್ಧಿ ಸ್ವಾತಂತ್ರ್ಯದ ಭಾವನೆಯಲ್ಲಿ ಅಡಗಿದೆ.

ಮುಂದಿನ ಪೀಳಿಗೆ ಮುಕ್ತವಾಗಿ ಬದುಕಲು ಸಾಧ್ಯವಾಗುವಂತೆ ವಿವಿಧ ಹೋರಾಟಗಳನ್ನು ನಡೆಸಿ ದೇಶದ ಸ್ವಾತಂತ್ರ್ಯವನ್ನು ಸಾಧಿಸಿದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಈ ಸಂದರ್ಭದಲ್ಲಿ ನಾವು ಕೃತಜ್ಞತೆಯಿಂದ ಸ್ಮರಿಸೋಣ.

ಅಸಮಾನತೆ ಇಲ್ಲದ ಸಮಾಜವನ್ನು ಸೃಷ್ಟಿಸುವ ಸಾಮಾಜಿಕ ವಿಮೋಚನೆಗಾಗಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆ–ಯ ಶುಭಾಶಯಗಳು.

The Culturepreneur

ಗುರುಕೃಪೆ

ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ

ಕೆ.ಆರ್. ನಾಗರಾಜನ್

ಸಂಸ್ಥಾಪಕರು – ರಾಮ್‌ರಾಜ್ ಕಾಟನ್

ಜೀವನದಲ್ಲಿ ಯಾವುದು ಸ್ವಾತಂತ್ರ್ಯ?

ಒಂದು ಕೊಳದಲ್ಲಿ ಒಂದು ಸುಂದರವಾದ ಮೀನು ವಾಸಿಸುತ್ತಿತ್ತು. ಅದರ ರೂಪವು ಮಳೆಬಿಲ್ಲಿನ ಎಲ್ಲಾ ಬಣ್ಣಗಳ ಮಿಶ್ರಣದಂತೆ ಮಿಂಚುತ್ತಿತ್ತು. ಇತರ ಮೀನುಗಳು ಸಹ ಅದರ ಸೌಂದರ್ಯವನ್ನು ನೋಡಿ ಆಶ್ಚರ್ಯಚಕಿತವಾಗುತ್ತಿದ್ದವು. 'ಈ ಕೊಳದಲ್ಲಿ ನಿನ್ನಷ್ಟು ಸುಂದರವಾದ ಮೀನು ಇನ್ನೊಂದಿಲ್ಲ' ಎಂದು ಅವುಗಳು ಆ ಮೀನಿಗೆ ಹೇಳುತ್ತಿದ್ದವು.

ಇದನ್ನು ಕೇಳಿದಾಗ ಮೀನಿಗೆ ತುಂಬಾ ಹೆಮ್ಮೆ ಎನ್ನಿಸುತ್ತಿತ್ತು. ಒಂದು ದಿನ ಅದಕ್ಕೆ, 'ಈ ಸ್ಥಳವು ನಾನು ವಾಸಿಸಲು ತಕ್ಕುದಾದುದಲ್ಲ' ಎಂದು ಅನ್ನಿಸಿತು. 'ಮನುಷ್ಯರು ನನ್ನ ಸೌಂದರ್ಯವನ್ನು ನೋಡಿ ಮೆಚ್ಚಬೇಕು. ಈ ಕೊಳಕು ಕೊಳದಲ್ಲಿ ನನ್ನ ಜೀವನವನ್ನು ನಾನು ವ್ಯರ್ಥ ಮಾಡುತ್ತಿದ್ದೇನೆ. ಇದರೊಳಗೇ ಸುತ್ತು ಹಾಕುತ್ತಾ ಇಲ್ಲಿ ಸಿಗುವ ಏನೋ ಒಂದನ್ನು ತಿಂದು ಬದುಕುವುದೆಲ್ಲಾ ಒಂದು ಜೀವನವೇ?' ಎಂದು ಅದು ತನ್ನಷ್ಟಕ್ಕೆ ತಾನೇ ಯೋಚಿಸಿತು.

ಒಂದು ದಿನ, ಆ ಕೊಳದಲ್ಲಿ ಮೀನು ಹಿಡಿಯಲು ಕೆಲವು ಮೀನುಗಾರರು ಬಲೆ ಬೀಸಿದರು. ಎಲ್ಲಾ ಮೀನುಗಳೂ ಅಪಾಯವನ್ನು ಗ್ರಹಿಸಿ ಇನ್ನೊಂದು ದಿಕ್ಕಿನತ್ತ ಧಾವಿಸಿದವು. ಆ ವರ್ಣರಂಜಿತ ಮೀನು, ಅವುಗಳನ್ನು ನೋಡಿ, 'ಏನಾಗಿದೆ? ಏಕೆ ಎಲ್ಲರೂ ದೂರ ಹೋಗುತ್ತಿದ್ದೀರಿ' ಎಂದು ಕೇಳಿತು. ಅದಕ್ಕೆ ಆ ಮೀನುಗಳು 'ಈ ಬಲೆಯೊಳಗೆ ಸಿಲುಕಿಕೊಳ್ಳುವುದು ತುಂಬಾ ಅಪಾಯಕಾರಿಯಾದುದು. ಬೇಗ ದೂರ ಓಡಿ ಹೋಗು' ಎಂದು ಎಚ್ಚರಿಸಿದವು. ಆದರೆ ಆ ವರ್ಣರಂಜಿತ ಮೀನು, 'ನಾನು ಬಲೆಯೊಳಗೆ ಸಿಲುಕಿಕೊಂಡು ಮೊದಲು ಇಲ್ಲಿಂದ ತಪ್ಪಿಸಿಕೊಂಡು ಹೋಗುತ್ತೇನೆ' ಎಂದು ಯೋಚಿಸಿ ತಾನಾಗಿಯೇ ಹೋಗಿ ಅದರೊಳಗೆ ಸಿಕ್ಕಿಕೊಂಡಿತು. ಮೀನುಗಾರರು ಅದರ ಸೌಂದರ್ಯವನ್ನು ಮೆಚ್ಚಿಕೊಂಡು ತೆಗೆದುಕೊಂಡು ಹೋದರು. ಒಬ್ಬ ವ್ಯಕ್ತಿ ಬಂದು ಅದನ್ನು ಅವರ ಬಳಿಯಿಂದ ಉತ್ತಮ ಬೆಲೆಗೆ ಖರೀದಿಸಿದ.

ಅವನ ಮನೆ ಆ ಕೊಳದ ಸಮೀಪದಲ್ಲೇ ಇತ್ತು. ಅವನು ಆ ಮೀನನ್ನು ತನ್ನ ಮನೆಯಲ್ಲಿ ಸುಂದರವಾದ ತೊಟ್ಟಿಯಲ್ಲಿಟ್ಟು ಸಾಕಿದ. ಹೊಸ ತೊಟ್ಟಿ, ವಿಧವಿಧವಾದ ಎರೆ, ಆಹ್ಲಾದಕರ ವಾತಾವರಣ ಮತ್ತು ಪ್ರತಿದಿನ ತನ್ನನ್ನು ನೋಡಲು ಮನೆಗೆ ಬರುತ್ತಿದ್ದ ಅತಿಥಿಗಳು... ಹೀಗೆ ಕೆಲವು ದಿನಗಳು ಅದು ಸಂತೋಷವಾಗಿತ್ತು. ನಿಧಾನವಾಗಿ ಅದನ್ನು ನೋಡಲು ಬರುತ್ತಿದ್ದವರ ಸಂಖ್ಯೆ ಕಡಿಮೆಯಾಯಿತು. ಅದಾದ ನಂತರ ಮನೆಯಲ್ಲೂ ಯಾರೂ ಅದನ್ನು ಅಷ್ಟಾಗಿ ಗಮನಿಸುತ್ತಿರಲಿಲ್ಲ. ಕಿರಿದಾದ ತೊಟ್ಟಿಯಲ್ಲಿ ಒಂಟಿಯಾಗಿದ್ದುದರಿಂದ ಅದಕ್ಕೆ ಬೇಸರವಾಗತೊಡಗಿತು. ಅಲ್ಲದೆ ಈಗ ಅದಕ್ಕೆ ಸರಿಯಾಗಿ ಆಹಾರವನ್ನೂ ಹಾಕುತ್ತಿರಲಿಲ್ಲ. ನೀರು ಕೊಳೆತು ಕೆಟ್ಟದಾಗಿ, ಉಸಿರುಗಟ್ಟಲು ಪ್ರಾರಂಭವಾಯಿತು.

ಕೊಳದಿಂದ ತಪ್ಪಿಸಿಕೊಂಡು ಹೋಗಬೇಕೆಂದು ಬಯಸಿ, ಈ ಚಿಕ್ಕ ತೊಟ್ಟಿ ಎನ್ನುವ ಜೈಲಿನಲ್ಲಿ

ಸಿಲುಕಿಕೊಂಡಿರುವುದನ್ನು ಯೋಚಿಸಿ ಅದು ಕಣ್ಣೀರು ಸುರಿಸಿತು. ಒಂದು ದಿನ, ನೀರು ತುಂಬಾ ಕೊಳಕಾಗಿತ್ತು, ಅದರಿಂದ ಉಸಿರಾಡಲು ಕಷ್ಟವಾಗಿ ಅದು ಉಸಿರುಗಟ್ಟಿ ಮೂರ್ಛೆ ಹೋಯಿತು. ಮೀನು ಚಲಿಸದೇ ಇರುವುದನ್ನು ನೋಡಿದ ಮನೆಯವರು ಅದು ಸತ್ತಿದೆ ಎಂದು ಭಾವಿಸಿ ಅದನ್ನು ತೆಗೆದುಕೊಂಡು ಹೋಗಿ ಮನೆಯ ಸಮೀಪದಲ್ಲೇ ಇದ್ದ ಕೊಳದೊಳಕ್ಕೆ ಎಸೆದರು. ತನ್ನ ಸ್ವಸ್ಥಳವನ್ನು ತಲುಪಿದುದರಿಂದ ಅದಕ್ಕೆ ಪ್ರಜ್ಞೆ ಬಂದಿತು. ಇತರ ಮೀನುಗಳು ಅದನ್ನು ಸುತ್ತುವರೆದು ಅದರ ಯೋಗಕ್ಷೇಮವನ್ನು ವಿಚಾರಿಸಿದವು. ಆ ವರ್ಣರಂಜಿತ ಮೀನು ನಿಜವಾದ ಸ್ವಾತಂತ್ರ್ಯವನ್ನು ಅರಿತು ಸಂತೋಷದಿಂದ ಕಣ್ಣೀರು ಸುರಿಸಿತು.

ಅನೇಕ ಜನರು ಹೀಗೆಯೇ ಇದ್ದಾರೆ... ನಾವು ಯಾವುದರಲ್ಲಿ ಬಂಧಿಯಾಗಿದ್ದೇವೆ? ನಿಜವಾದ ಸ್ವಾತಂತ್ರ್ಯ ಏನೆಂದು ಅವರಿಗೆ ಅರ್ಥವಾಗುವುದಿಲ್ಲ. ಒಂದು ಮಗು ಗರ್ಭದಿಂದ ಹೆರಿಗೆಯ ಮೂಲಕ ಹೊರಬರುವುದು ಸ್ವಾತಂತ್ರ್ಯ ಎಂದು ಭಾವಿಸುತ್ತದೆ. ನಂತರ ಯಾರ ಸಹಾಯವಿಲ್ಲದೆ ನಡೆಯಲು ಪ್ರಾರಂಭಿಸುವುದೇ ಅದಕ್ಕೆ ಸ್ವಾತಂತ್ರ್ಯದಂತೆ ಕಾಣಿಸಬಹುದು. ನಡೆಯಲು ಪ್ರಾರಂಭಿಸುವ ಮಗುವಿಗೆ, ಮನೆಯಿಂದ ಹೊರಬರುವುದೇ ಸ್ವಾತಂತ್ರ್ಯದಂತೆ ಕಾಣಿಸಬಹುದು. ಅದಕ್ಕಾಗಿಯೇ ಅದು ಶಾಲೆಗೆ ಹೋಗಲು ಬಯಸುತ್ತದೆ. ಆದರೆ ಶಾಲೆಗೆ ಹೋದ ನಂತರ ತರಗತಿಗೇ ಸೀಮಿತವಾಗಿರುವುದು ಅದಕ್ಕೆ ಶಿಕ್ಷೆಯಂತೆ ಕಾಣಿಸಬಹುದು. ವಿದ್ಯಾರ್ಥಿ ಜೀವನದುದ್ದಕ್ಕೂ, 'ಅಧ್ಯಯನವನ್ನು ಮುಗಿಸಿ ಕೆಲಸಕ್ಕೆ ಹೋಗುವುದೇ ಸ್ವಾತಂತ್ರ್ಯ' ಎಂದು ಆ ಮಗು ಭಾವಿಸಬಹುದು. ಆದರೆ ಕೆಲಸಕ್ಕೆ ಹೋದ ನಂತರ, ಪ್ರತಿದಿನ ಕಚೇರಿಗೆ ಹೋಗುವುದೇ ಅದಕ್ಕೆ ಶಿಕ್ಷೆಯಂತೆ ಕಾಣಿಸಬಹುದು. ಆ ಜೀವನದಿಂದ ಮುಕ್ತಿ ಪಡೆಯುವುದು ಆ ಸಮಯದಲ್ಲಿ ಸ್ವಾತಂತ್ರ್ಯದಂತೆ ಕಾಣಿಸಬಹುದು. ಆದ್ದರಿಂದ ನಿವೃತ್ತಿ ಹೊಂದುವುದೇ ಸಂತೋಷ ಎಂದು ಆಗ ಅನ್ನಿಸಬಹುದು ಆದರೆ ಆ ಸ್ವಾತಂತ್ರ್ಯದ ಸಂತೋಷವೂ ಹೆಚ್ಚು ಕಾಲ ಉಳಿಯುವುದಿಲ್ಲ. ಏಕೆಂದರೆ ಏನೂ ಮಾಡದೆ ಸುಮ್ಮನಿರುವುದೂ ಆಗ ಶಿಕ್ಷೆಯಂತೆ ಅನ್ನಿಸಬಹುದು!

ಅನೇಕ ಜನರು ಸ್ವಾತಂತ್ರ್ಯ ಎಂಬುದನ್ನು 'ಯಾವುದೇ ನಿರ್ಬಂಧಗಳಿಲ್ಲದೆ ನಮಗೆ ಬೇಕಾದುದನ್ನು ನಮಗನ್ನಿಸಿದಂತೆ ಮಾಡುವುದು' ಎಂದು ಅರ್ಥ ಮಾಡಿಕೊಳ್ಳುತ್ತಾರೆ. ಅವರು ನಿರ್ಬಂಧಗಳು, ನಿಯಮಗಳು ಮತ್ತು ಕಾನೂನುಗಳನ್ನು ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಜೈಲುಗಳೆಂದು ಪರಿಗಣಿಸುತ್ತಾರೆ. ಪ್ರತಿಯೊಬ್ಬರೂ ಯಾವುದೇ ನಿರ್ಬಂಧಗಳಿಲ್ಲದೆ ಕಾರ್ಯ ನಿರ್ವಹಿಸಲು ಬಯಸಿದರೆ, ದೇಶದಲ್ಲಿ ಅವ್ಯವಸ್ಥೆ ಉಂಟಾಗುತ್ತದೆ. ನಾಲ್ಕು ರಸ್ತೆಗಳು ಸೇರುವ ಚೌಕದಲ್ಲಿ, 'ನನಗೆ ಸ್ವಾತಂತ್ರ್ಯವಿದೆ. ನಾನು ಬಯಸಿದ ದಿಕ್ಕಿನಲ್ಲಿ ಮತ್ತು ನಾನು ಬಯಸಿದ ವೇಗದಲ್ಲಿ ಹೋಗುತ್ತೇನೆ' ಎಂದು ಯೋಚಿಸಿ ಎಲ್ಲರೂ ತಮ್ಮ ವಾಹನವನ್ನು ವೇಗಗೊಳಿಸಿದರೆ, ಎಲ್ಲರೂ ಟ್ರಾಫಿಕ್ ಜಾಮ್‌ಗಳಲ್ಲಿ ಸಿಲುಕಿಕೊಳ್ಳುತ್ತಾರೆ. ಸಾಕಷ್ಟು ಅಪಘಾತಗಳೂ ಆಗಬಹುದು.

ಹಾಗಾಗಿ, ಸ್ವಾತಂತ್ರ್ಯವನ್ನು ಹೀಗೆ ವ್ಯಾಖ್ಯಾನಿಸಬಹುದು... 'ನಿಜವಾದ ಮುಕ್ತ ಜೀವನ ಎಂದರೆ ಇತರರಿಗೆ ತೊಂದರೆ ನೀಡದೆ ನಾನು ಏನು ಬೇಕಾದರೂ ಮಾಡಬಹುದು'. 'ನಿಮ್ಮ ಸ್ವಾತಂತ್ರ್ಯ ಇನ್ನೊಬ್ಬರ ಮೂಗಿನ ತುದಿಯವರೆಗೆ' ಎಂದು ಒಂದು ಗಾದೆ ಮಾತಿದೆ. ಆ ಮೂಗಿನ ತುದಿಯನ್ನು ಮುಟ್ಟಿದರೆ, ನಾನು ಅವರ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸುತ್ತಿದ್ದೇನೆ ಎಂದರ್ಥ. ಎಂದರೆ, ಒಬ್ಬರ ಸ್ವಾತಂತ್ರ್ಯವು ಇನ್ನೊಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ಉಲ್ಲಂಘಿಸದಿರುವಷ್ಟರ ಮಟ್ಟಿಗೆ ಇರಬೇಕು. ಮುಕ್ತ ಚಟುವಟಿಕೆಯನ್ನು ಯಾರಿಗೂ ಯಾವುದೇ ದೈಹಿಕ ಅಥವಾ ಮಾನಸಿಕ ಹಾನಿಯನ್ನುಂಟು ಮಾಡದ ವಿಷಯವೆಂದು ಪರಿಗಣಿಸಬಹುದು.

ಅದೇ ರೀತಿ, ನಿಜವಾದ ಸ್ವಾತಂತ್ರ್ಯದ ಜೀವನವೆಂದರೆ ದೈಹಿಕ ಅಥವಾ ಮಾನಸಿಕ ಹಾನಿಯಿಲ್ಲದೆ ಬದುಕುವುದು. ಒಬ್ಬ ವ್ಯಕ್ತಿಗೆ ಬದನೆಕಾಯಿ ತಿಂದರೆ ಅವರಿಗೆ ಅಲರ್ಜಿಯಾಗುತ್ತದೆ ಎಂದಿಟ್ಟುಕೊಳ್ಳಿ. ಅದು ಅವರ ದೇಹಕ್ಕೆ ಒಗ್ಗುವುದಿಲ್ಲ. ಅವರು ತನ್ನ ಸ್ನೇಹಿತರ ಮನೆಗೆ ಔತಣಕ್ಕೆಂದು ಹೋದಾಗ, ಅಲ್ಲಿ ಅದನ್ನೇ ಮುಖ್ಯ ಆಹಾರವಾಗಿ ತಯಾರಿಸಿರುತ್ತಾರೆ. ತನ್ನ ಸ್ನೇಹಿತನ ಕುಟುಂಬದವರ ಮನ ನೋಯಿಸಬಾರದೆಂದು ಭಾವಿಸಿ ಅವರು ಅದನ್ನು ತಿಂದರೆ, ಅವರ ಆರೋಗ್ಯ ಏನಾಗುತ್ತದೆ ಹೇಳಿ? ಬದಲಾಗಿ, ಅವರು ತಮ್ಮ ಆರೋಗ್ಯ ಸ್ಥಿತಿಯನ್ನು ವಿವರಿಸಿ, 'ನನಗೆ ಬದನೆಕಾಯಿ ಬಡಿಸಬೇಡಿ' ಎಂದು ಹೇಳಿ ಬಿಟ್ಟರೆ ಅದರಿಂದ ಯಾರಿಗೂ ಸಮಸ್ಯೆ ಇರುವುದಿಲ್ಲ.

ಎಲ್ಲಾ ಮನುಷ್ಯರೂ ತಮ್ಮ ಪ್ರತಿಯೊಂದು ಕ್ರಿಯೆಗೂ ತಾವೇ ಜವಾಬ್ದಾರರಾಗಿರುತ್ತಾರೆ. ಆದರೂ ಸಮಾಜದಲ್ಲಿ ಬದುಕುವಾಗ ಕೆಲವು ರಾಜಿ ಮತ್ತು ಹೊಂದಾಣಿಕೆಗಳು ಅಗತ್ಯ. 'ನನಗೆ ಯಾರ ಬಗ್ಗೆಯೂ ಕಾಳಜಿ ಇಲ್ಲ. ನನ್ನ ಕ್ರಿಯೆಗಳಿಂದ ಯಾರಾದರೂ ಮನ ನೊಂದರೂ ನನಗೆ ಚಿಂತೆ ಇಲ್ಲ. ನಾನು ಬಯಸಿದಂತೆ ಮುಕ್ತವಾಗಿ ಬದುಕುತ್ತೇನೆ' ಎಂದು ಹೇಳುವವರಿಗೆ ಯಾರೂ ಆಪ್ತ ಸ್ನೇಹಿತರು ಸಿಗುವುದಿಲ್ಲ. ಅವರಿಗೆ ಪ್ರೀತಿಯ ಸಂಬಂಧಿಕರು ಅಥವಾ ನೆರೆಹೊರೆಯವರು ಇರುವುದಿಲ್ಲ.

ನಮಗೆ ಅಧಿಕಾರ ಅಥವಾ ಅನುಕೂಲವಿದೆ ಎಂಬ ಕಾರಣಕ್ಕಾಗಿ ನಾವು ಇತರರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಕೆಲಸವನ್ನು ಮಾಡಬಾರದು. ನಾವು ಬಲವಂತವಾಗಿ ಪ್ರೀತಿ ಮತ್ತು ಗೌರವವನ್ನು ಗಳಿಸಬಹುದು. ಆದರೆ, ಅದು ಒಂದು ದಿನ ಕಾಗದದ ಹೂವಿನಂತೆ ಬಿಳುಚಿಕೊಳ್ಳಬಹುದು. ನಾವು ಯಾರ ಮೇಲೂ ಏನನ್ನೂ ಹೇರದೆ, ಯಾರೂ ನಮ್ಮ ಮೇಲೆ ಇತರರು ಏನನ್ನೂ ಹೇರದೆ ಬದುಕಲು ಸಾಧ್ಯವಾದರೆ ಅದೇ ಸ್ವಾತಂತ್ರ್ಯದ ಜೀವನ! ●

ಇದೇ ಬಿಡುಗಡೆಯ ಭಾವ!

- ಸ್ವಾತಂತ್ರ್ಯ ಒಂದು ಅವಕಾಶ. ನಾವು ಸರಿ ಎಂದು ನಂಬುವ ಕೆಲಸವನ್ನು ಮಾಡಲು ಒಂದು ಅವಕಾಶ.
- ಸ್ವಾತಂತ್ರ್ಯವೆಂದರೆ ಒಂದು ನಂಬಿಕೆ. ನಮ್ಮ ಬುದ್ಧಿಶಕ್ತಿ ಮತ್ತು ಇಂದ್ರಿಯಗಳಲ್ಲಿ ನಾವು ಸರಿಯಾದ ಅವಕಾಶಗಳನ್ನು ಆರಿಸಿಕೊಳ್ಳುತ್ತಿದ್ದೇವೆ ಎಂಬ ನಂಬಿಕೆ.
- ಸ್ವಾತಂತ್ರ್ಯ ಒಂದು ಶಕ್ತಿ. ನಾವು ಆರಿಸಿಕೊಳ್ಳುವ ಅವಕಾಶಗಳ ಮೂಲಕ ನಮ್ಮ ಭವಿಷ್ಯವನ್ನು ರೂಪಿಸುವ ಶಕ್ತಿ.
- ಸ್ವಾತಂತ್ರ್ಯ ಎಂದರೆ ಜವಾಬ್ದಾರಿ. ನಾವು ಮಾಡುವ ಎಲ್ಲಾ ಕ್ರಿಯೆಗಳಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು. ಮಾಡದೇ ಹೋದವುಗಳಿಗಾಗಿ ಬೇರೆಯುವರನ್ನು ದೂಷಿಸದೆ ಪರಿಣಾಮಗಳಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
- ಬಿಡುಗಡೆ ಒಂದು ಪರಿಹಾರ. ಅದು, ನಾವು ನಂಬುವ ಏನನ್ನಾದರೂ ಸಾಧಿಸಲು ನಮಗೆ ಶಕ್ತಿ ಮತ್ತು ಬುದ್ಧಿವಂತಿಕೆ ಇದೆ ಎಂದು ಅರಿತುಕೊಂಡಾಗ ಬರುವ ಪರಿಹಾರ.
- ಸ್ವಾತಂತ್ರ್ಯ ಅನ್ನೋದು ಒಂದು ರೀತಿಯ ಭಯ. ನಾವು ತೆಗೆದುಕೊಳ್ಳುವ ನಿರ್ಧಾರಗಳು ಅನೇಕರ ಜೀವನದ ಮೇಲೆ ಪರಿಣಾಮ ಬೀರುತ್ತವೆ ಎಂದು ಅರಿತುಕೊಳ್ಳುವುದರಿಂದ ಹುಟ್ಟುವ ಭಯ ಅದು. ಅದೇ ನಮ್ಮನ್ನು ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ.
- ಸ್ವಾತಂತ್ರ್ಯ ಎನ್ನುವುದು ಒಂದು ರೀತಿಯ ಒತ್ತಡ. ನಮ್ಮ ಮೇಲೆ ಎಷ್ಟು ಜವಾಬ್ದಾರಿಗಳನ್ನು ಹೊರಿಸಲಾಗಿದೆ ಎಂಬುದನ್ನು ಅರಿತುಕೊಳ್ಳುವುದರಿಂದ ಬರುವ ಒತ್ತಡ. ಅದು, ನಮ್ಮ ಭವಿಷ್ಯವನ್ನು ನಿರ್ಧರಿಸುವ ಶಕ್ತಿ ನಮಗಿದೆ ಎಂದು ತಿಳಿದುಕೊಳ್ಳುವುದರಿಂದ ಬರುವ ಒತ್ತಡ.

ಅರಿವಿನ ಬಿಡುಗಡೆ!

ನಾವು ಮಾಡಲು ಸಾಧ್ಯವಾಗದ್ದನ್ನು ಯಾರೂ ಮಾಡಲು ಸಾಧ್ಯವಿಲ್ಲ ಎಂದು ನಾವು ಭಾವಿಸಿದಾಗ, ನಮ್ಮ ಜ್ಞಾನವು ಬಂಧನಕ್ಕೊಳಗಾಗುತ್ತದೆ. ನಮ್ಮ ಜ್ಞಾನ ಮತ್ತು ಶಕ್ತಿಗೆ ಮೀರಿದ ಅನೇಕ ವಿಷಯಗಳಿವೆ ಎಂದು ನಾವು ನಮ್ಮ ಜ್ಞಾನವನ್ನು ಮುಕ್ತಗೊಳಿಸಿದಾಗ ಮಾತ್ರ ಅವು ನಮ್ಮ ಆಸ್ತಿಯಾಗುತ್ತವೆ. 300 ವರ್ಷಗಳ ಹಿಂದೆ ಬದುಕಿದ್ದ ಜನರಿಗೆ ರೇಡಿಯೊ ಬಗ್ಗೆ ಹೇಳಿದ್ದರೆ, ಅವರು ನಗುತ್ತಿದ್ದರು. 200 ವರ್ಷಗಳ ಹಿಂದೆ ಬದುಕಿದ್ದ ಜನರಿಗೆ ವಿಮಾನಗಳ ಬಗ್ಗೆ ಮಾತನಾಡಿದ್ದರೆ, ಅವರು ನಗುತ್ತಿದ್ದರು.

ಸ್ವಾತಂತ್ರ್ಯವೂ ಕಟ್ಟುಪಾಡೂ...!

ಕರು, ತನ್ನನ್ನು ಬಂಧಿಸಿದ್ದ ಹಗ್ಗವನ್ನು ಬಿಚ್ಚಿದ ಕೂಡಲೇ ತನ್ನ ತಾಯಿಯ ಕೆಚ್ಚಲನ್ನು ಹುಡುಕುತ್ತದೆ. ಅಂತಹ ಬಂಧನಗಳಿಂದ ಬಿಡುಗಡೆ ಹೊಂದುವುದೇ ನಿಜವಾದ ಸ್ವಾತಂತ್ರ್ಯ ಎಂದು ನಾವು ಭಾವಿಸುತ್ತೇವೆ. ವಾಸ್ತವವಾಗಿ, ನಿಜವಾದ ಸ್ವಾತಂತ್ರ್ಯವು ಕೆಲವು ನಿರ್ಬಂಧಗಳೊಂದಿಗೆ ಹುಟ್ಟುತ್ತದೆ. ಇದಕ್ಕೆ ಉದಾಹರಣೆಗಳನ್ನು ನೋಡೋಣ...

ನಮ್ಮ ಉಸಿರು ನಮ್ಮ ನಿಯಂತ್ರಣದಲ್ಲಿರುವುದರಿಂದ ನಾವು ದೀರ್ಘಕಾಲ ಆರೋಗ್ಯವಾಗಿ ಬದುಕುವ ಸ್ವಾತಂತ್ರ್ಯ ನಮಗೆ ಲಭಿಸುತ್ತದೆ. ನಮ್ಮ ವೆಚ್ಚದ ಮೇಲೆ ನಮಗೆ ನಿಯಂತ್ರಣವಿದ್ದರೆ, ಜೀವನದಲ್ಲಿ ಎಂದಿಗೂ ಹಣದ ಕೊರತೆಯಿಲ್ಲದೆ ಶಾಂತಿಯಿಂದ ಬದುಕಬಹುದು. ನಮ್ಮ ಆಲೋಚನೆಗಳು ನಮ್ಮ ನಿಯಂತ್ರಣದಲ್ಲಿದ್ದರೆ, ಶಾಂತಿಯಿಂದ ಬದುಕಬಹುದು. ಆಸೆಗಳು ನಮ್ಮ ನಿಯಂತ್ರಣದಲ್ಲಿದ್ದರೆ, ಸಾಮರಸ್ಯದಿಂದ ಬದುಕಲು ನಮ್ಮಿಂದ ಸಾಧ್ಯವಾಗುತ್ತದೆ.

100 ವರ್ಷಗಳ ಹಿಂದೆ ಬದುಕಿದ್ದ ಜನರಿಗೆ ನೀವು ಸೆಲ್ ಫೋನ್ ಬಗ್ಗೆ ಮಾತನಾಡಿದರೆ, ಅವರು ನಗುತ್ತಿದ್ದರು. ಒಂದು ಕಾಲದಲ್ಲಿ, ಮನುಷ್ಯರಿಗೆ ಊಹಿಸಲೂ ಸಾಧ್ಯವಾಗದಿದ್ದ ಎಷ್ಟೋ ವೈಜ್ಞಾನಿಕ ಅದ್ಭುತಗಳು ಇಂದು ನಮ್ಮೆದುರಿಗಿವೆ. ಅದೇ ರೀತಿ, ಈಗ ಊಹಿಸಲೂ ಸಾಧ್ಯವಾಗದ ಎಷ್ಟೋ ಅದ್ಭುತಗಳು ಭವಿಷ್ಯದಲ್ಲಿ ಸಾಮಾನ್ಯ ಬಳಕೆಯಲ್ಲಿ ಬರಬಹುದು.

'ನಮಗೆ ಅದು ಸಾಧ್ಯವಿಲ್ಲ', 'ಇತರರಿಗೂ ಅದು ಸಾಧ್ಯವಿಲ್ಲ' ಎಂದು ಭಾವಿಸುವುದು ಜ್ಞಾನದ ಕೊರತೆ. ಜ್ಞಾನಕ್ಕೆ ಸ್ವಾತಂತ್ರ್ಯ ನೀಡಿ ನಮ್ಮ ಚಿಂತನೆಯನ್ನು ಅರಳಿಸೋಣ.

ಸ್ವಾತಂತ್ರ್ಯವೇ ಸ್ವರ್ಗ!

'ಸ್ವಾತಂತ್ರ್ಯ'ವು ಎಲ್ಲರಿಗೂ ಜೀವನದ ಉಸಿರಾಗಿರುತ್ತದೆ. ಕೆಲವು ಗಂಟೆಗಳ ಕಾಲ ಗಾಳಿ ಇಲ್ಲದ ಕೋಣೆಯಲ್ಲಿ ನಮ್ಮನ್ನು ಬಂಧಿಸಿ ನಂತರ ಹೊರಗೆ ಬಂದಾಗ, ತೆರೆದ ಗಾಳಿಯಲ್ಲಿ ನಿಂತು ಆಳವಾದ ಉಸಿರನ್ನು ತೆಗೆದುಕೊಂಡು ಅದನ್ನು ಬಿಡುತ್ತೇವೆ. ಆ ಕ್ಷಣದಲ್ಲಿ, ನಾವು 'ಸ್ವಾತಂತ್ರ್ಯ'ದ ಪೂರ್ಣ ಅರ್ಥವನ್ನು ಅರ್ಥ ಮಾಡಿಕೊಳ್ಳಬಹುದು. 'ನನ್ನ ಜೀವವನ್ನು ಪಣಕ್ಕಿಟ್ಟು ನಾನು ಸ್ವತಂತ್ರವಾಗಿ ಬದುಕಬೇಕು' ಎಂದು ನಾವು ಭಾವಿಸುವುದು ಕಾರಣವಿಲ್ಲದೆ ಅಲ್ಲ. ಸ್ವರ್ಗದಲ್ಲಿ ಗುಲಾಮನಾಗಿರುವುದರಲ್ಲಿ ಅರ್ಥವಿಲ್ಲ. ಹಾರಲು ಬಯಸುವ ಒಂದು ಹಕ್ಕಿಯನ್ನು ಚಿನ್ನದ ಪಂಜರದಲ್ಲಿ ಬಂಧಿಸಿದರೂ, ಅದು ಹಕ್ಕಿಗೆ ಜೈಲೇ ಆಗಿರುತ್ತದೆ. ಒಬ್ಬನನ್ನು ಗುಲಾಮನನ್ನಾಗಿ ಮಾಡುವ ಸ್ಥಳವು ಸ್ವರ್ಗವಾಗಿರಲು ಸಾಧ್ಯವಿಲ್ಲ. ಒಬ್ಬನನ್ನು ಸ್ವತಂತ್ರನನ್ನಾಗಿ ಮಾಡಲು ಸಾಧ್ಯವಾದರೆ, ಅದೇ ನಿಜವಾದ ಸ್ವರ್ಗ.

ಪ್ರೀತಿಯಿಂದ ಜೀವ ಪಡೆಯುವ ಸ್ವಾತಂತ್ರ್ಯ

ಸ್ವಾತಂತ್ರ್ಯ ಎಂದರೇನು ಎಂಬುದನ್ನು ಯಾವುದೇ ವ್ಯಕ್ತಿಯೂ ವೈಯಕ್ತಿಕವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಅದು ಒಂದು ಸಾಮೂಹಿಕ ಪ್ರಾರ್ಥನೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಸ್ವಾತಂತ್ರ್ಯ ಎನ್ನುವುದು ಕೊಡುವುದು ಮತ್ತು ಪಡೆಯುವುದರ ನಡುವೆ ಹರಿಯುವ ಪ್ರೀತಿಯ ನದಿಯಾಗಿದೆ. ಸ್ವಾತಂತ್ರ್ಯವು ಕತ್ತಲೆಯನ್ನು ಹೋಗಲಾಡಿಸುವ ಮತ್ತು ಸಂತೋಷದ ಬೆಳಕನ್ನು ಹರಡುವ ದೀಪವಾಗಿದೆ. ಅದಕ್ಕಾಗಿಯೇ ಸ್ವಾತಂತ್ರ್ಯವು ಪ್ರತಿಯೊಬ್ಬ ಮನುಷ್ಯನಲ್ಲೂ ಜೀವ ತುಂಬುತ್ತದೆ. ಅದು ಮನೆಯಾಗಿರಲಿ ಅಥವಾ ದೇಶವಾಗಿರಲಿ, ಪ್ರೀತಿಯಿಂದ ಮಾತ್ರ ಸ್ವಾತಂತ್ರ್ಯವು ಜೀವ ಪಡೆಯುತ್ತದೆ, ಅಧಿಕಾರದಿಂದಲ್ಲ... ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಸ್ವಾತಂತ್ರ್ಯದ ಎಲ್ಲೆ!

ಎಲ್ಲದಕ್ಕೂ ಒಂದು ಮಿತಿ ಇರುವಂತೆ. ಸ್ವಾತಂತ್ರ್ಯಕ್ಕೂ ಒಂದು ಮಿತಿ ಇದೆ. ಅಪರಿಮಿತ ಸ್ವಾತಂತ್ರ್ಯ ಎಂಬುದೇ ಇಲ್ಲ. ದೇವರಿಗೂ ಅಂತಹ ವರ ದೊರಕುವುದಿಲ್ಲ. ಅದು ಅಪಾಯಕಾರಿಯೂ ಹೌದು! ತುಂಬಿ ಹರಿಯುವ ಪ್ರವಾಹದ ನೀರು ಭಯ ಹುಟ್ಟಿಸುತ್ತದೆ. ಹಲವು ಸಲ ಅದು ವಿನಾಶಕ್ಕೂ ಕಾರಣವಾಗಿರುತ್ತದೆ. ಕಟ್ಟಿ ಹಾಕಿರುವ ಸ್ವಾತಂತ್ರ್ಯವೂ ಹೀಗೆಯೇ!

ಸರಾಗವಾಗಿ ಹರಿಯುವ ನದಿ ಎಲ್ಲರಿಗೂ ಪ್ರಯೋಜನವನ್ನು ನೀಡುತ್ತದೆ ಮತ್ತು ಭೂಮಿಯನ್ನು ಸಮೃದ್ಧಗೊಳಿಸುತ್ತದೆ. ನಿಯಂತ್ರಣದಲ್ಲಿರುವ ಸ್ವಾತಂತ್ರ್ಯವು ಎರಡು ದಡಗಳ ನಡುವೆ ಹರಿಯುವ ನದಿಯಂತೆ. ನಾವು ಅನುಸರಿಸುವ ಎಲ್ಲಾ ನಿಯಮಗಳು, ಕಾನೂನುಗಳು ಮತ್ತು ನಿಯಮಗಳನ್ನು ಮಾನವರು ರಚಿಸಿದ್ದಾರೆ. ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಅವುಗಳನ್ನು ರಚಿಸಲಾಗಿದೆ. ಪ್ರತಿಯೊಬ್ಬರೂ ಅವುಗಳನ್ನು ಸರಿಯಾಗಿ ಅನುಸರಿಸಿದಾಗ ಮಾತ್ರ ಜಗತ್ತು ಶಾಂತಿಯುತವಾಗಿರುತ್ತದೆ, ಅಪರಾಧಗಳು ಕಣ್ಮರೆಯಾಗುತ್ತವೆ ಮತ್ತು ಎಲ್ಲರಿಗೂ ನ್ಯಾಯ ಸಿಗುತ್ತದೆ.

ಜೀವನ ಸಂಗಾತಿಗೂ ಬೇಕು ಸ್ವಾತಂತ್ರ್ಯ!

ಮದುವೆಯಾಗುವವರೆಗೂ ಒಬ್ಬ ಪುರುಷ ತನ್ನ ಜೀವನದಲ್ಲಿ ಸ್ವತಂತ್ರವಾಗಿರುತ್ತಾನೆ. ಮದುವೆಯಾಗುವ ಮಹಿಳೆಯೂ ಹಾಗೆಯೇ ಇರುತ್ತಾಳೆ. ಇಬ್ಬರೂ ಮದುವೆಯಾಗುತ್ತಾರೆ. ಇಲ್ಲಿ, ಒಬ್ಬರ ಸ್ವಾತಂತ್ರ್ಯಕ್ಕೆ ಇನ್ನೊಬ್ಬರು ಅಡ್ಡಿಪಡಿಸುವ ಘಟನೆ ಆರಂಭವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ.

ಗಮನಿಸಿ, ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವ ಆ ಮೊದಲ ಘಟನೆ ಬಹಳ ಮುಖ್ಯ. ಖಂಡಿತ, ಅವರು ಪರಸ್ಪರ ಒಬ್ಬರ ವಿಷಯದಲ್ಲಿ ಇನ್ನೊಬ್ಬರು ಹಸ್ತಕ್ಷೇಪ ಮಾಡಲಾರಂಭಿಸುತ್ತಾರೆ. ಅದಕ್ಕಾಗಿಯೇ ದಂಪತಿಗಳ ನಡುವೆ ಅನೇಕ ಬಾರಿ ಸಮಸ್ಯೆಗಳು ಉದ್ಭವಿಸುತ್ತವೆ. ಆದ್ದರಿಂದ ಆ ಮೊದಲ ಘಟನೆಯಲ್ಲಿ ತೀರಾ ವಿಪರೀತವಾದ ಏನೂ ಸಂಭವಿಸದಂತೆ ನೋಡಿಕೊಳ್ಳುವುದು ಇಬ್ಬರ ಜವಾಬ್ದಾರಿಯಾಗಿರುತ್ತದೆ.

ಉದಾಹರಣೆಗೆ, ಗಂಡ ಬರಹಗಾರನಾಗಿದ್ದರೆ, ಅವನು ಬಯಸಿದ ಪುಸ್ತಕಗಳನ್ನು ಖರೀದಿಸಬೇಕು. ಅವನು ಬಯಸಿದಾಗ ಚಲನಚಿತ್ರಗಳನ್ನು ನೋಡಬೇಕು. ಇದರ ಬಗ್ಗೆ ಅವನ ಹೆಂಡತಿ ಏನನ್ನಾದರೂ ಟೀಕಿಸಿದರೆ ಆಗ ಅವನು ಕೋಪಗೊಳ್ಳುತ್ತಾನೆ. ಅವನು ಹೀಗೆ ಪ್ರೀತಿಸುವ ಯಾವುದಾದರೂ ವಿಷಯದಲ್ಲಿ ಆಕೆ ಹಸ್ತಕ್ಷೇಪ ಮಾಡಿದರೆ, ಅವನ ಮುಖವು ತುಂಬಾ ವ್ಯಘ್ರವಾಗುತ್ತದೆ.

ಮದುವೆಯಾದ ಹೊಸದರಲ್ಲಿ, ತನ್ನ ಹೆಂಡತಿ ಈ ಬಗ್ಗೆ ಏನಾದರೂ ಹೇಳುತ್ತಾಳೋ ಏನೋ ಎಂದು ಅವನು ಗಮನಿಸುತ್ತಲೇ ಇರುತ್ತಾನೆ. ಅವನ ಹೆಂಡತಿ ಈ ಬಗ್ಗೆ ಏನೂ ಹೇಳದಿದ್ದರೆ, ಅವನಿಗೆ ಸಮಾಧಾನವಾಗುತ್ತದೆ. 'ಸರಿ, ನಮ್ಮ ಸ್ವಾತಂತ್ರ್ಯಕ್ಕೆ ಯಾವುದೇ ತೊಂದರೆ ಇಲ್ಲ' ಎಂದು ಭಾವಿಸುತ್ತಾನೆ. ಅದಾದ ನಂತರ ಹೆಂಡತಿ ಏನೇ ಹೇಳಿದರೂ ಅವನು ಅದನ್ನು ಅಷ್ಟೇನೂ ಗಂಭೀರವಾಗಿ ಪರಿಗಣಿಸುವುದಿಲ್ಲ.

ಒಂದು ಯುವ ಜೋಡಿಗೆ ಮದುವೆಯಾದ ಎರಡು ತಿಂಗಳ ನಂತರ, ಹೆಂಡತಿಯ ಸೋದರಳಿಯನ ಹುಟ್ಟುಹಬ್ಬ ಹತ್ತಿರ ಬರುತ್ತಿತ್ತು. 'ನಾಲ್ಕು ಸಾವಿರ ರೂಪಾಯಿಗೆ ಒಂದು ಉಡುಗೊರೆ ಕೊಡೋಣ' ಎಂದು ಅವಳು ಹೇಳಿದಳು. ಅವಳು ಒಳ್ಳೆಯ ಕೆಲಸ ಮಾಡುತ್ತಿದ್ದಳು. ಸುಮಾರು ಒಂದು ಲಕ್ಷ ರೂಪಾಯಿಗಳ ಸಂಬಳ ಪಡೆಯುತ್ತಿದ್ದಳು. ಆದರೆ ಹುಡುಗನ ಹುಟ್ಟುಹಬ್ಬಕ್ಕೆ ಇಷ್ಟೊಂದು ದುಬಾರಿ ಉಡುಗೊರೆ ಏಕೆ ಬೇಕು ಎಂದು ಅವನಿಗನ್ನಿಸಿತು. 'ಏಕೆ ಅಷ್ಟೊಂದು ಉಡುಗೊರೆ ನೀಡಬೇಕು? ಹುಟ್ಟುಹಬ್ಬಕ್ಕೆ ಅಷ್ಟೊಂದು ದುಬಾರಿ ಉಡುಗೊರೆ ಕೊಡಬೇಕೇ?' ಎಂದು ಕೇಳಿದ. ಅವಳು ಕೋಪಗೊಂಡಳು.

ಮದುವೆಯ ನಂತರ ತನ್ನ ಸ್ವಾತಂತ್ರ್ಯಕ್ಕೆ ಬಂದ ಮೊದಲ ಅಡ್ಡಿ ಇದು ಎಂದು ಅವಳಿಗನ್ನಿಸಬಹುದು. ಆದ್ದರಿಂದ, ಅವಳು ಆತಂಕದಿಂದ ಉತ್ತರಿಸಬಹುದು.

'ಮದುವೆ ಮುಗಿದ ಕೂಡಲೇ ಬಿಗಿ ಮಾಡಿ ಸಂಗಾತಿಯನ್ನು

ಹಿಡಿತದಲ್ಲಿಟ್ಟುಕೊಳ್ಳಬೇಕು' ಎಂದು ಹಲವರು ತಪ್ಪಾಗಿ ಸಲಹೆ ನೀಡುತ್ತಾರೆ. ಹಾಗೆ ನೋಡಿದರೆ ಅಲ್ಲೇ ಸಮಸ್ಯೆ ಉದ್ಭವವಾಗುವುದು. ತುಂಬಾ ಜನ ಹೆಂಗಸರಿಗೆ ಹೀಗೆ ಹೆಂಡತಿಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಎನ್ನುವ ಭಾವ ಇರುತ್ತದೆ. ಆದರೆ, ಹಾಗೆ ಮಾಡಿದರೆ ಅಲ್ಲಿ ಪ್ರೀತಿ ಮುರಿದು ಹೋಗುತ್ತದೆ.

ಇನ್ನೊಂದು ಉದಾಹರಣೆ... ಒಂದು ಹೆಣ್ಣಿಗೆ ಮದುವೆ ಮಾಡಲು ಯೋಚಿಸುತ್ತಾರೆ. ಆದರೆ ಆಕೆ ತಾನು ಹೆಚ್ಚಿನ ವ್ಯಾಸಂಗ ಮಾಡುತ್ತೇನೆ ಎಂದು ಹೇಳುತ್ತಾಳೆ. ತಕ್ಷಣ ಆಕೆಯ ಪೋಷಕರೂ, ಗಂಡಿನ ತಂದೆತಾಯಿಗಳೂ ಎಲ್ಲರೂ, 'ನೀ ಧಾರಾಳವಾಗಿ ಓದಲು ಹೋಗಮ್ಮಾ, ನಾವ್ಯಾರೂ ನಿನ್ನನ್ನು ಅಡ್ಡಿ ಪಡಿಸುವುದಿಲ್ಲ' ಎಂದು ಹೇಳಿ ಅವಳಿಗೆ ಮದುವೆ ಮಾಡಿ ಮುಗಿಸುತ್ತಾರೆ.

ಅಡ್ಮಿಷನ್ ಸಮಯದಲ್ಲಿ ಆ ಯುವತಿ ಕಾಲೇಜಿಗೆ ಹೋಗಿ ಅರ್ಜಿಯನ್ನು ತೆಗೆದುಕೊಂಡು ಬರುತ್ತಾಳೆ. ಮನೆಗೆ ಹಿಂದಿರುಗಿ ಬರುವಾಗಲೇ ಅವಳ ಅತ್ತೆಯೂ, ನಾದಿನಿಯೂ ಅವಳನ್ನು ಕೆಟ್ಟದಾಗಿ ಬೈಯ್ಯತೊಡಗುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಮಾವ ಕೂಡ ಅವರ ಜೊತೆ ಸೇರಿಕೊಳ್ಳುತ್ತಾರೆ, 'ಮದುವೆ ಮುಗಿದ ನಂತರ ಗೌರವಸ್ಥ ಕುಟುಂಬದ ಹೆಣ್ಣಿಗೆ ಮಕ್ಕಳನ್ನು ಹಡೆದು, ಗಂಡನ ಸೇವೆ ಮಾಡುವುದು ಮಾತ್ರವೇ ಸೂಕ್ತವಾಗಿರುತ್ತದೆ' ಎಂದು ಅವಳಿಗೆ ಸಲಹೆ ನೀಡುತ್ತಾರೆ. ಗಂಡ ಅವರ ವಿರುದ್ಧವಾಗಿ ಬಾಯಿ ತೆರೆದು ಒಂದು ಮಾತೂ ಆಡುವುದಿಲ್ಲ.

ಅದರ ನಂತರ ಆ ಹೆಣ್ಣುಮಗಳು ಅವರು ಹೇಳಿದಂತೆಯೇ ಕುಟುಂಬದ ಗೌರವಸ್ಥ ಹೆಣ್ಣಾಗಿ ಬದಲಾಗಬಹುದು. ಅವಳ ಮುಖದಲ್ಲಿ ನಗು ಕೂಡ ಇರಬಹುದು. ಆದರೆ, ಮನದೊಳಗೆ ಪ್ರೀತಿ ಮುರಿದು ಹೋಗಿರುತ್ತದೆ.

ದಂಪತಿಗಳ ನಡುವಿನ ಸಂಬಂಧದಲ್ಲಿ ಹೀಗೆ ಪ್ರೀತಿ ಮುರಿದು ಬೀಳುವುದು ಅಪಾಯಕಾರಿಯಾದುದು. ಒಂದು ಪಂಜರದೊಳಗೆ ಅವರು ಸಿಲುಕಿಕೊಳ್ಳುತ್ತಾರೆ. 'ನಾನು ಹೀಗೆ ಒಳಗೆ ಸಿಕ್ಕಿ ಹಾಕಿಕೊಂಡು ತವಕಿಸುತ್ತಿದ್ದೇನೆ' ಎಂದು ಮನಸ್ಸಿನಲ್ಲಿರುವ ದುಃಖವನ್ನು ಹಂಚಿಕೊಳ್ಳಲೂ ಆಗದೆ, ಅದು ಮನಸ್ಸಿನಲ್ಲಿ ಒಂದು ದುಃಖವಾಗಿ ಉಳಿದು ಹೋಗುತ್ತದೆ. ಖಂಡಿತವಾಗಿ ಕುಟುಂಬ ಜೀವನದಲ್ಲಿ ಇದರಿಂದ ಸಮಸ್ಯೆಯಾಗುತ್ತದೆ.



ಹೀಗೆ ದಂಪತಿಗಳು ಒಬ್ಬರ ಸ್ವಾತಂತ್ರ್ಯದಲ್ಲಿ ಮತ್ತೊಬ್ಬರು ಅಡ್ಡಿಯಾಗುವುದರ ಬಗ್ಗೆ ಇಬ್ಬರಲ್ಲೂ ಜಾಗೃತಿ ಮೂಡಬೇಕಾದ ಅಗತ್ಯವಿದೆ. ಕೆಲವು ಸಮಯದಲ್ಲಿ ಯಾವುದಾದರೂ ಪರಿಸ್ಥಿತಿ ಅಡ್ಡಿಪಡಿಸುತ್ತದೆ. ಅಂತಹ ಸಮಯಗಳಲ್ಲಿ ದಂಪತಿಗಳು ಎಚ್ಚರಿಕೆಯಿಂದ ಇರಬೇಕು. ಉದಾಹರಣೆಗೆ, ಹೆಂಡತಿ ಮತ್ತು ತಾಯಿಯ ನಡುವೆ ಮನಸ್ತಾಪ ಏರ್ಪಡುವಾಗ ಪುರುಷರು ತುಂಬಾ ಎಚ್ಚರಿಕೆಯಿಂದ ಅದನ್ನು ನಿಭಾಯಿಸಬೇಕು. 'ಮಗ ತನ್ನನ್ನು ಬಿಟ್ಟು ಬಿಡುವನೋ' ಎಂಬ ಭಾವನೆ ಅಮ್ಮನಿಗೆ ಬರಬಾರದು. 'ಅಮ್ಮನೂ ಮಗನೂ ಒಂದೇ ಪಕ್ಷ. ಈ ಮನೆಯಲ್ಲಿ ನನಗೆ ಯಾರೂ ಇಲ್ಲ. ನಾನು ಇಲ್ಲಿ ಒಂಟಿ. ನನಗೆ ಇಲ್ಲಿ ರಕ್ಷಣೆಯಿಲ್ಲ ಎಂಬ ಭಾವ ಹೆಂಡತಿಗೆ ಬರಬಾರದು. ಇಬ್ಬರನ್ನೂ ಬಿಟ್ಟು ಕೊಡಲು ಸಾಧ್ಯವಿಲ್ಲ. ನಾನು ನ್ಯಾಯಪೂರ್ವಕವಾಗಿ ಮಾತನಾಡುತ್ತೇನೆ' ಎಂದು ಯೋಚಿಸಿ ಯಾರನ್ನೂ ಗಾಯಪಡಿಸಬಾರದು.

ಇಂತಹ ಸಂದರ್ಭಗಳಲ್ಲಿ ಗಂಡಸರು, ಒಂದು ವೇಳೆ ತಾನು ತನ್ನ ಮಾವನ ಮನೆಗೆ ಹೋದಾಗ, ತನಗೂ ಮಾವನಿಗೂ ಇಂತಹ ಮನಸ್ತಾಪಗಳೇರ್ಪಟ್ಟಾಗ, ಹೆಂಡತಿ ತಾನು ನ್ಯಾಯದ ಪರ ಮಾತನಾಡುತ್ತೇನೆ ಎಂದು ಹೇಳಿ ತನ್ನ ತಂದೆಯ ಪರ ವಹಿಸಿ ಮಾತನಾಡಿದರೆ ತನಗೆ ಹೇಗಿರುತ್ತದೆ ಎಂದು ಯೋಚಿಸಿ ನೋಡಬೇಕು. ಆಗ ಅವನಿಗೆ ಈ ಸಮಸ್ಯೆ ಅರ್ಥವಾಗುತ್ತದೆ.

ಪುರುಷರು ಮನೆಯಲ್ಲಿ ಅನೇಕ ಕೆಲಸಗಳನ್ನು ಹಂಚಿಕೊಂಡು ಮಾಡಬೇಕಾದುದು ಇಂದಿನ ಪರಿಸ್ಥಿತಿಯಲ್ಲಿ ತೀರಾ ಅಗತ್ಯವಾಗಿದೆ. ಅದರಲ್ಲೂ ತನಗೆ ಮಾಡಲು ಬರುವ ಕೆಲಸಗಳನ್ನು ಕೂಡ ಹೆಂಡತಿಗೇ ವಹಿಸಿ, ಅಧಿಕಾರ ಚಲಾಯಿಸಬಾರದು. ತನ್ನ ತಂದೆ 'ನೀರು ಕೊಡಿ' ಎಂದು ಕೇಳಿದರೆ ಮಗ ತಾನೇ ಅದನ್ನು ತೆಗೆದುಕೊಡುವುದರಲ್ಲಿ ತಪ್ಪೇನಿದೆ? ಅದಕ್ಕೆ ಬದಲಾಗಿ ಆ ಕೆಲಸವನ್ನು ತನ್ನ ಹೆಂಡತಿಗೆ ಹೇಳಬಾರದು.

ಮುಂದೆ ಮಗು ಹುಟ್ಟಿದರೆ ಪರಿಸ್ಥಿತಿ ಇನ್ನೂ ಭಿನ್ನವಾಗುತ್ತದೆ. ಅದು ಮಹಿಳೆಯ ಸ್ವಾತಂತ್ರ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಮಗುವಿನ ಆರೈಕೆಯಲ್ಲಿ ಪುರುಷರೂ ಸಹಾಯ ಮಾಡಬೇಕು. ಹೀಗೆ, 'ನಿನ್ನ ಸ್ವಾತಂತ್ರ್ಯವನ್ನು ನಾನು ಗೌರವಿಸುತ್ತೇನೆ. ಅದಕ್ಕಾಗಿ ಸಹಾಯ ಮಾಡುತ್ತೇನೆ' ಎಂದು ಇಬ್ಬರೂ ಪರಸ್ಪರರಿಗೆ ಅರ್ಥವಾಗುವಂತೆ ನಡೆದುಕೊಳ್ಳಬೇಕು.

ಮದುವೆಯಾದ ನಂತರ ಮೊದಲ ಬಾರಿಗೆ ತನ್ನ ಜೀವನ ಸಂಗಾತಿಯ ಸ್ವಾತಂತ್ರ್ಯದ ವಿಷಯದಲ್ಲಿ ತಾವು ನಡುವೆ ಪ್ರವೇಶಿಸುವ ಕ್ಷಣ ಬರುವಾಗ, ಅಥವಾ ಅವರ ಸ್ವಾತಂತ್ರ್ಯದಲ್ಲಿ ಕುಟುಂಬ ತಲೆ ಹಾಕುವಾಗ, ಯಾರ ಮನಸ್ಸನ್ನೂ ನೋಯಿಸುವಂತೆ ಆ ಘಟನೆ ಪರಿವರ್ತಿತವಾಗಿ ಬಿಡಬಾರದು. ಹಾಗೆ ಏನೂ ನಡೆಯದಂತೆ ನೋಡಿಕೊಂಡು, ಕುಟುಂಬ ಜೀವನದಲ್ಲಿ ಸಂತೋಷದಿಂದ ಬದುಕಬಹುದು.

ಪರಸ್ಪರ ಅರ್ಥ ಮಾಡಿಕೊಳ್ಳುವುದು, ಒಬ್ಬರ ಭಾವನೆಗಳನ್ನು ಮತ್ತೊಬ್ಬರು ಗೌರವಿಸುವುದು ಕುಟುಂಬ ಜೀವನದ ಮೂಲಭೂತ ಅಂಶಗಳು. ಪ್ರೀತಿಯನ್ನು ಹಂಚಿಕೊಳ್ಳುವ ಸಂಗಾತಿ ದೊರಕುವುದು ಅತಿ ದೊಡ್ಡ ಭಾಗ್ಯ. ದೊರಕಿದ ಜೀವನವನ್ನು ಉಳಿಸಿಕೊಳ್ಳುವುದು ಕೂಡ ಅಷ್ಟೇ ಮುಖ್ಯವಾದುದು.

'ಸ್ವಾತಂತ್ರ್ಯ ಎಂಬುದು ಪ್ರೀತಿಗಿಂತಲೂ ಮೇಲಾದುದು' ಎಂಬ ಗ್ರಹಿಕೆ ಮಾತ್ರ ಕುಟುಂಬ ಜೀವನವನ್ನು ಮಧುರವಾಗಿಸುತ್ತದೆ.

ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ!

ಅಮೆರಿಕ ಸ್ವಾತಂತ್ರ್ಯ ಪಡೆದ ನಂತರ ಅಲ್ಲಿ ಎಲ್ಲರಿಗೂ ಮತದಾನದ ಹಕ್ಕು ಸಿಗಲು 150 ವರ್ಷಗಳು ಬೇಕಾಯಿತು. ಹಲವು ದೇಶಗಳ ಇತಿಹಾಸ ಹೀಗೇ ಇರುವುದು! ಆದರೆ ಸ್ವತಂತ್ರ ಭಾರತದಲ್ಲಿ ನಡೆದ ಮೊದಲ ಚುನಾವಣೆಯಲ್ಲೇ ಎಲ್ಲರಿಗೂ ಮತದಾನದ ಹಕ್ಕು ಸಿಕ್ಕಿತು. ಪಾಕಿಸ್ತಾನ ಹಲವು ಬಾರಿ ಮಿಲಿಟರಿ ಆಳ್ವಿಕೆಯೊಳಗೆ ಸಿಲುಕಿದೆ. ಚೀನಾ ಯಾವಾಗಲೂ ಒಂದೇ ಪಕ್ಷದ ನಿಯಂತ್ರಣದಲ್ಲಿದೆ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ!

ಸ್ವತಂತ್ರ ಭಾರತದ ಸಾಧನೆಗಳು!

1974ರಲ್ಲಿ ಭಾರತ ಪರಮಾಣು ಬಾಂಬ್ ಪರೀಕ್ಷೆ ನಡೆಸಿ ವಿಶ್ವದ ಐದು ಪರಮಾಣು ಶಸ್ತ್ರಸಜ್ಜಿತ ರಾಷ್ಟ್ರಗಳ ಪಟ್ಟಿಗೆ ಸೇರಿತು. ಭಾರತವು ತನ್ನದೇ ಆದ ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸುವ ಕೆಲವೇ ದೇಶಗಳಲ್ಲಿ ಒಂದಾಗಿದೆ. ಅಮೆರಿಕ, ರಷ್ಯಾ, ಚೀನಾ, ಫ್ರಾನ್ಸ್ ಮತ್ತು ಬ್ರಿಟನ್‌ನ ಮಹಾಶಕ್ತಿಗಳಂತೆ, ಭಾರತವು ವಿಮಾನವಾಹಕ ನೌಕೆಗಳನ್ನು ನಿರ್ಮಿಸುವ ಸಾಮರ್ಥ್ಯವಿರುವ ದೇಶವಾಗಿ ಹೊರಹೊಮ್ಮಿದೆ. ಅದೇ ಐದು ದೇಶಗಳ ಜೊತೆಗೆ, ಭಾರತವು ಕ್ಷಿಪಣಿ ಶಕ್ತಿಯನ್ನು ಹೊಂದಿರುವ ಆರನೇ ದೇಶವಾಗಿದೆ. ನಮ್ಮ ದೇಶವು ಅಭಿವೃದ್ಧಿಪಡಿಸಿದ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿ ಗಂಟೆಗೆ 3,675 ಕಿ.ಮೀ ವೇಗದಲ್ಲಿ ಪ್ರಯಾಣಿಸುವ ಸಾಮರ್ಥ್ಯವನ್ನು ಹೊಂದಿದೆ. ಕ್ಷಿಪಣಿಗಳೊಂದಿಗೆ ಆಕಾಶದಲ್ಲಿ ನಮ್ಮ ಮೇಲೆ ಬೇಹುಗಾರಿಕೆ ನಡೆಸುತ್ತಿರುವ ಉಪಗ್ರಹಗಳ ಮೇಲೆ ದಾಳಿ ಮಾಡಿ ನಾಶ ಮಾಡುವ ಸಾಮರ್ಥ್ಯವನ್ನೂ ಭಾರತ ಪಡೆದುಕೊಂಡಿದೆ.

ಆರ್ಥಿಕ ಪ್ರಗತಿ!

ಭಾರತವು 1991ರಲ್ಲಿ ಆರ್ಥಿಕ ಉದಾರೀಕರಣಕ್ಕೆ ಅವಕಾಶ ನೀಡಿತು. ಅಂದಿನಿಂದ, ದೇಶದ ಬೆಳವಣಿಗೆ ವೇಗಗೊಂಡಿದೆ. ಭಾರತವು ಈಗ ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ಮುನ್ನಡೆ ಸಾಧಿಸಿರುವ ರಾಷ್ಟ್ರವಾಗಿದೆ. ವಿಶ್ವದ ಅತ್ಯಂತ ವೇಗವಾಗಿ ಚಲಿಸುವ ಷೇರು ಮಾರುಕಟ್ಟೆ ಎಂದರೆ ಅದು ಮುಂಬೈ ಷೇರು ವಿನಿಮಯ ಕೇಂದ್ರವಾಗಿದೆ.

ಇತ್ತೀಚಿನ ವರದಿಯ ಪ್ರಕಾರ, ಚೀನಾ, ಜಪಾನ್, ಸ್ವಿಟ್ಜರ್ಲೆಂಡ್ ಮತ್ತು ರಷ್ಯಾ ನಂತರ ಭಾರತವು ಅಮೆರಿಕನ್ ಡಾಲರ್‌ಗಳಲ್ಲಿ ಅತಿ ಹೆಚ್ಚು ವಿದೇಶಿ ವಿನಿಮಯ ಸಂಗ್ರಹ ಹೊಂದಿರುವ ಐದನೇ

ಬಾಹ್ಯಾಕಾಶವನ್ನು ವಶಪಡಿಸಿಕೊಂಡಿರುವ ಭಾರತ!

ಭಾರತದ ಮೊದಲ ರಾಕೆಟ್ ಅನ್ನು ಹಳೆಯ ಸೈಕಲ್‌ನ ಕ್ಯಾರಿಯರ್ ಬಳಸಿ ಬಾಹ್ಯಾಕಾಶಕ್ಕೆ ಉಡಾಯಿಸಲಾಯಿತು. ನಮ್ಮ ಬಾಹ್ಯಾಕಾಶ ಪರಿಶೋಧನೆಯಲ್ಲಿ ಆಗ ಮೂಲಭೂತ ಸೌಲಭ್ಯಗಳ ಕೊರತೆ ಇತ್ತು. ಆದರೆ ಇಂದು, ಭಾರತವು ಬಾಹ್ಯಾಕಾಶವನ್ನು ವಶಪಡಿಸಿಕೊಂಡ ಅಗ್ರ ಐದು ದೇಶಗಳಲ್ಲಿ ಒಂದಾಗಿದೆ.

ಭಾರತವು 2008ರಲ್ಲಿ ಚಂದ್ರಯಾನ-1 ಅನ್ನು ಚಂದ್ರನ ಮೇಲೆ ಯಶಸ್ವಿಯಾಗಿ ಉಡಾಯಿಸಿತು. ಚಂದ್ರನ ಮೇಲೆ ನೀರಿನ ಉಪಸ್ಥಿತಿಯನ್ನು ಪತ್ತೆ ಹಚ್ಚಿದ ಮೊದಲನೆಯ ದೇಶ ಭಾರತ. ಭಾರತವು 2013ರಲ್ಲಿ ಮಂಗಳಯಾನವನ್ನು ನಡೆಸಿತು. ಅಮೆರಿಕ, ರಷ್ಯಾ ಮತ್ತು ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯ ನಂತರ ಮಂಗಳವನ್ನು ತಲುಪಿದ ನಾಲ್ಕನೇ ದೇಶ ಭಾರತವಾಯಿತು. ಇವುಗಳಲ್ಲಿ, ತನ್ನ ಮೊದಲ ಪ್ರಯತ್ನದಲ್ಲೇ ಯಶಸ್ವಿಯಾದ ಏಕೈಕ ದೇಶ ಭಾರತ!

ಭಾರತವು ಒಂದೇ ರಾಕೆಟ್‌ನಲ್ಲಿ 104 ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದೆ. ಈಗ, ಚಂದ್ರಯಾನ-3 ಚಂದ್ರನ ದಕ್ಷಿಣ ಧ್ರುವವನ್ನು ತಲುಪಿದ ಮೊದಲ ಬಾಹ್ಯಾಕಾಶ ನೌಕೆಯಾಗಲಿದೆ.

ನಿರ್ಮಾಣ ಸಾಧನೆಗಳು!

ಮುಂಬೈನ ಬಾಂದ್ರಾ ಮತ್ತು ವರ್ಲಿ ಪ್ರದೇಶಗಳನ್ನು ಸಂಪರ್ಕಿಸಲು ಸಮುದ್ರದ ಮೇಲೆ ಸೇತುವೆಯನ್ನು ನಿರ್ಮಿಸಲಾಗಿದೆ. ಇದು ವಿಶ್ವದ ಅತ್ಯಂತ ಸುಂದರವಾದ ಸಮುದ್ರ ಸೇತುವೆಯಾಗಿದೆ. ಇದರಲ್ಲಿ ಬಳಸಲಾದ ಕಬ್ಬಿಣದ ಸರಳುಗಳನ್ನು ಒಟ್ಟಿಗೆ ಕಟ್ಟಿದರೆ, ಅದು ಭೂಗೋಳವನ್ನು ಸುತ್ತುವರೆಯುತ್ತದೆ. ಹಿಮಾಲಯದ ಡ್ರಾಸ್ ಮತ್ತು ಸುರು ನದಿಗಳ ನಡುವೆ ಇರುವ ಬೈಲಿ ಸೇತುವೆ ವಿಶ್ವದ ಅತಿ ಎತ್ತರದ ಸೇತುವೆಯಾಗಿದೆ. ಇದನ್ನು ಭಾರತೀಯ ಸೇನೆ ನಿರ್ಮಿಸಿದೆ. ಸಮುದ್ರ ಮಟ್ಟದಿಂದ 19,300 ಅಡಿ ಎತ್ತರದಲ್ಲಿರುವ ಲಡಾಖ್‌ನಲ್ಲಿರುವ ರಸ್ತೆಯು ವಾಹನಗಳು ಪ್ರಯಾಣಿಸುವ ವಿಶ್ವದ ಅತಿ ಎತ್ತರದ ರಸ್ತೆಯಾಗಿದೆ. ಐಫೆಲ್ ಟವರ್‌ಗಿಂತ 35 ಮೀಟರ್ ಎತ್ತರದಲ್ಲಿರುವ ಚೆನಾಬ್ ಸೇತುವೆಯು ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯಾಗಿದ್ದು, ಇದು ಚೆನಾಬ್ ನದಿಯಿಂದ 1,178 ಅಡಿ ಎತ್ತರದಲ್ಲಿದೆ.

ದೇಶವಾಗಿದೆ. ಇತ್ತೀಚಿನ ವರ್ಷಗಳಲ್ಲಿ, ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಭಾರತದ ಸ್ಥಾನಮಾನ ಹೆಚ್ಚಾಗಿದೆ. ಇಂದು, ಜಗತ್ತು ಭಾರತದ ಮಾತನ್ನು ಕೇಳುತ್ತದೆ. ನಾವು ಅನೇಕ ದೇಶಗಳೊಂದಿಗೆ ಭಾರತೀಯ ರೂಪಾಯಿಗಳಲ್ಲಿ ವ್ಯಾಪಾರ ಮಾಡುವ ಹಂತಕ್ಕೆ ಬೆಳೆದಿದ್ದೇವೆ.

ನಮ್ಮ ಹೆಮ್ಮೆಯ ಸೇನೆ!

ಪೂರ್ವ ಪಾಕಿಸ್ತಾನದಲ್ಲಿ ಸರ್ಕಾರವು ಹಿಂಸಾಚಾರ ನಡೆಸಿದಾಗ, ಭಾರತವು ಮಧ್ಯ ಪ್ರವೇಶಿಸಿ ಅಲ್ಲಿನ ಜನರಿಗೆ ಸ್ವಾತಂತ್ರ್ಯ ಪಡೆಯಲು ಸಹಾಯ ಮಾಡಿತು. ಇದು ಬಾಂಗ್ಲಾದೇಶ ದೇಶ ರಚನೆಗೆ ಕಾರಣವಾಯಿತು. ಭಾರತ–ಪಾಕಿಸ್ತಾನ ಯುದ್ಧದ ಸಮಯದಲ್ಲಿ, 80,000 ಪಾಕಿಸ್ತಾನಿ ಸೈನಿಕರು ಭಾರತೀಯ ಸೇನೆಗೆ ಶರಣಾದರು. ಇದನ್ನು ವಿಶ್ವದ ಅತಿದೊಡ್ಡ ಮಿಲಿಟರಿ ವಿಜಯವೆಂದು ಪರಿಗಣಿಸಲಾಗಿದೆ.

ವಿಶ್ವದ ಅತಿ ಎತ್ತರದ ಗಡಿ ಎಂದು ಪರಿಗಣಿಸಲಾದ ಸಿಯಾಚಿನ್ ಹಿಮನದಿಯನ್ನು ಭಾರತೀಯ ಸೇನೆ ನಿಯಂತ್ರಿಸುತ್ತದೆ. 1999ರಲ್ಲಿ ಪಾಕಿಸ್ತಾನಿ ಸೇನೆ ಕಾರ್ಗಿಲ್ ಪ್ರದೇಶವನ್ನು ಆಕ್ರಮಿಸಿದಾಗ ನಮ್ಮ ಸೇನೆಯು ಧೈರ್ಯದಿಂದ ಹೋರಾಡಿ ಗೆದ್ದಿತು. ಇದು ವಿಶ್ವದ ಅತಿ ಎತ್ತರದ ಯುದ್ಧಭೂಮಿಯಲ್ಲಿ ನಡೆದ ಯುದ್ಧವಾಗಿತ್ತು.

ಕಂಪ್ಯೂಟರ್ ಸಾಧನೆಗಳು!

ಭಾರತವು 1953ರಲ್ಲೇ ಒಂದು ಸಣ್ಣ ಅನಲಾಗ್ ಕಂಪ್ಯೂಟರ್ ಅನ್ನು ತಯಾರಿಸಿತು. 1955ರಲ್ಲಿ, ಎಚ್‌ಇಸಿ 2ಎಂ ಎಂಬ ಕಂಪ್ಯೂಟರ್ ಭಾರತದಲ್ಲಿ ಬಳಕೆಗೆ ಬಂದಿತು. ಭಾರತವು ಈಗ 'ಪರಮ್' ಎನ್ನುವ ಸರಣಿಯಲ್ಲಿ ಅತಿ ವೇಗದ ಸೂಪರ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸಿದೆ.

ಇಂದು ಭಾರತವು ವಿಶ್ವದ ಅತಿದೊಡ್ಡ ಇಂಟರ್ನೆಟ್ ಬಳಕೆದಾರರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಭಾರತವು ಐಟಿ ಉದ್ಯಮದಲ್ಲಿಯೂ ಎರಡನೇ ಸ್ಥಾನದಲ್ಲಿದೆ. ವಿಶ್ವದ ಅತಿದೊಡ್ಡ ಕಂಪ್ಯೂಟರ್ ಕಂಪನಿಗಳಲ್ಲಿ ಭಾರತೀಯರು ನಾಯಕತ್ವದ ಸ್ಥಾನಗಳಲ್ಲಿದ್ದಾರೆ ಎಂಬುದು ಹೆಮ್ಮೆಯ ವಿಷಯ!

ಐ.ಟಿ. ಕೆಲಸ ಮಾಡುತ್ತಿದ್ದ ಯುವಕನೊಬ್ಬ ಅಪರೂಪದ ಭಾನುವಾರದ ರಜೆಯಲ್ಲಿ ಮನೆಗೆ ಬಂದಿದ್ದ. ಬಿಡುವಾಗಿದ್ದುದರಿಂದ ಅವನು ತನ್ನ ಇಮೇಲ್ ಪರಿಶೀಲಿಸಿದ. ಫೇಸ್‌ಬುಕ್ ಖಾತೆಗೆ ಹೋದ. ತನ್ನ ಇನ್‌ಸ್ಟಾಗ್ರಾಮ್ ಪುಟವನ್ನು ತಿರುವಿ ನೋಡಿದ. ಅವುಗಳಲ್ಲಿ ಆಸಕ್ತಿದಾಯಕವಾದ ಏನೂ ಇಲ್ಲದ ಕಾರಣ, ಅವನು ತನ್ನ ಅಜ್ಜನೊಂದಿಗೆ ಹರಟೆ ಹೊಡೆಯಲು ಪ್ರಾರಂಭಿಸಿದ.

ಏನೋ ಕಾರಣಕ್ಕೆ ಅವನು ತನ್ನ ಅಜ್ಜನ ಜೀವನಶೈಲಿಯನ್ನು ಗೇಲಿಯಾಗಿ ನೋಡುತ್ತಿದ್ದ. ಆದ್ದರಿಂದ ಅವನು ನಗುತ್ತಾ ಅಜ್ಜನನ್ನು ಕೇಳಿದ. 'ನಿಮ್ಮ ಪೀಳಿಗೆಯವರು ತುಂಬಾ ಬಡವರು, ಅಜ್ಜ! ಆಗ ಟಿ.ವಿ. ಇಲ್ಲ. ಸೆಲ್ ಫೋನ್ ಇಲ್ಲ. ಏರ್ ಕಂಡಿಷನರ್ ಇಲ್ಲ. ಕಂಪ್ಯೂಟರ್ ಅಥವಾ ಇಂಟರ್ನೆಟ್ ಇಲ್ಲ. ಈಗಿರುವಂತಹ ಆರಾಮದಾಯಕ ಕಾರುಗಳಿರಲಿಲ್ಲ. ರೈಲುಗಳು ಕುದುರೆ ಗಾಡಿಗಳ ವೇಗದಲ್ಲಿ ಚಲಿಸುತ್ತಿದ್ದವು. ಇತ್ತೀಚಿನ ಯಾವುದೇ ತಂತ್ರಜ್ಞಾನ ನಿಮಗಿರಲಿಲ್ಲ. ಇವೆಲ್ಲವೂ ಇಲ್ಲದ ಜೀವನವನ್ನು ನಾವು ಈಗ ಊಹಿಸಲೂ ಸಾಧ್ಯವಿಲ್ಲ. ಆದರೆ, ನೀವು ಹಲವು ವರ್ಷಗಳಿಂದ ಇವು ಯಾವುವೂ ಇಲ್ಲದೆ ಜೀವಿಸಿದ್ದೀರಿ. ಯಾವುದೇ ಮನರಂಜನೆ ಇಲ್ಲದೆ, ಸಂವಹನ ಸೌಲಭ್ಯಗಳಿಲ್ಲದೆ, ಸಾರಿಗೆ ಅವಕಾಶಗಳಿಲ್ಲದೆ, ನೀವು ಹೇಗೆ ಬದುಕಿದಿರಿ?' ಎಂದು ಗೇಲಿಯಾಗಿ ಕೇಳಿದ.

ಅಜ್ಜ ಆ ಯುವಕನನ್ನು ಪರಿತಾಪಕರವಾಗಿ ನೋಡಿ, ನಗುತ್ತಾ ಹೇಳಿದರು: 'ಎಲ್ಲಾ ತಲೆಮಾರಿನವರೂ ಅವರಿಗೇ ಆದ ಕೆಲವು ವಿಷಯಗಳನ್ನು ಹೊಂದಿದ್ದರೆ, ಕೆಲವು ವಿಷಯಗಳು ಅವರಿಗೆ ದೊರಕದೇ ಹೋಗುತ್ತವೆ. ನಮ್ಮ ತಲೆಮಾರಿನವರು ನೀವು ಹೇಳಿದ ಎಲ್ಲವನ್ನೂ ಕಳೆದುಕೊಂಡಿರಬಹುದು. ನಾವು ಅದನ್ನು ಎಂದಿಗೂ ನಮಗಾಗಿರುವ ಅನಾನುಕೂಲವೆಂದು ಭಾವಿಸಿಲೇ ಇಲ್ಲ. ಆದರೆ ನಿಮ್ಮ ತಲೆಮಾರಿನವರು ಏನೆಲ್ಲ ಕಳೆದುಕೊಂಡಿದ್ದಾರೆಂದು ನಿನಗೆ ತಿಳಿದಿದೆಯೇ?'



ಪ್ರೀತಿ, ದಯೆ, ಗೌರವ, ಘನತೆ, ತಾಳ್ಮೆ, ಸಮಯ ನಿರ್ವಹಣೆ, ಯೋಜನೆ ರೂಪಿಸುವುದು, ಕ್ರೀಡೆ, ಪುಸ್ತಕಗಳನ್ನು ಓದುವುದು, ಸಹ ಮನುಷ್ಯರೊಂದಿಗೆ ಸಂಭಾಷಣೆ ಮಾಡುವುದು... ಹೀಗೆ ನೀವು ಕಳೆದುಕೊಂಡಿರುವ ವಸ್ತುಗಳ ಪಟ್ಟಿ ಉದ್ದವಾಗಿದೆ. ಇವೆಲ್ಲವೂ ಇಲ್ಲದೆ ನೀವು ಬದುಕಲು ಸಾಧ್ಯವಿರುವಾಗ, ಆಧುನಿಕ ಉಪಕರಣಗಳಿಲ್ಲದೆ ನಾವು ಸಂತೋಷದಿಂದ ಬದುಕಲು ಸಾಧ್ಯವಿರಲಿಲ್ಲವೇ? ತಂತ್ರಜ್ಞಾನವು ಸೃಷ್ಟಿಸಿರುವ ವಸ್ತುಗಳೊಳಗೆ ನೀವು ಬಂಧಿಸಲ್ಪಟ್ಟಿದ್ದೀರಿ. ನಾವು ಸ್ವತಂತ್ರವಾಗಿ ಬದುಕು ನಡೆಸಿದ್ದೇವೆ'.

ಯಾವುದರಿಂದ ಬಿಡುಗಡೆ ಬೇಕು?

ಅಜ್ಜ ಹೇಳಿದ ಈ ಮಾತುಗಳು ಆ ಯುವಕನನ್ನು ಯೋಚಿಸುವಂತೆ ಮಾಡಿತು. ಅವನು ಮೌನವಾಗಿದ್ದ. ಅಜ್ಜ ಮುಂದುವರೆಸಿದರು. 'ನಾನು ಇಡೀ ಯುವ ಪೀಳಿಗೆಯನ್ನು ಟೀಕಿಸುತ್ತಿಲ್ಲ. ಪೀಳಿಗೆಯ ಅಂತರದ ಹೆಸರಿನಲ್ಲಿ ಮತ್ತು ಹಳೆಯದು ಎಂಬ ಕಾರಣಕ್ಕಾಗಿ ಅವೆಲ್ಲವನ್ನೂ ಅಣಕಿಸುವ ಮೂಲಕ ನಾವು ಒಳ್ಳೆಯದನ್ನು ಕಳೆದುಕೊಳ್ಳಬಾರದು ಎಂದು ನಾನು ಹೇಳುತ್ತಿದ್ದೇನೆ. ನಾವು ಯಾವುದರಿಂದ ಬಿಡುಗಡೆ ಹೊಂದಲು ಬಯಸುತ್ತೇವೆ ಎಂಬುದರ ಕುರಿತು ನಮಗೆ ಸ್ಪಷ್ಟತೆ ಇರಬೇಕು' ಎಂದು ಹೇಳಿದರು.

ನಂತರ ಅಜ್ಜ ಮತ್ತು ಮೊಮ್ಮಗ ದೀರ್ಘ ಸಂಭಾಷಣೆ ನಡೆಸಿದರು. ತನ್ನ ಅಜ್ಜನ ಪೀಳಿಗೆಯ ಜೀವನದಿಂದ ತಾನು ಅನೇಕ ಪಾಠಗಳನ್ನು ಕಲಿತಿದ್ದೇನೆ ಎಂದು ಈಗ ಅವನಿಗೆ ಅನಿಸಿತು.

ಅಜ್ಜ ಹೇಳಿದ ವಿಷಯಗಳು:

- ಶಾಲೆ ಮುಗಿದ ನಂತರ ಸಂಜೆ ನಾವು ಬೀದಿಗಳಲ್ಲಿ ಆಟವಾಡುತ್ತಿದ್ದೆವು. ಯಾರೂ ನಮಗೆ 'ಬಿಸಿಲಿನಲ್ಲಿ ಆಡಬೇಡಿ, ಬೆವರು ಸುರಿಸಬೇಡಿ' ಎಂದು ಕಲಿಸಲಿಲ್ಲ. ನಾವು ಇತರ ಹುಡುಗರ ಜೊತೆಗೂಡಿ ಸ್ವಾಭಾವಿಕವಾಗಿ ಆಡುತ್ತಿದ್ದೆವು. ನಾವು ಎಸಿ ಕೋಣೆಯಲ್ಲಿ ಒಂಟಿಯಾಗಿ ಕುಳಿತು ಕಂಪ್ಯೂಟರ್ ಆಟಗಳನ್ನು ಆಡುತ್ತಿರಲಿಲ್ಲ.

- ನನಗೆ ಶಾಲೆಯಲ್ಲಿ ಮತ್ತು ಬೀದಿಯಲ್ಲಿ ಅನೇಕ ಸ್ನೇಹಿತರಿದ್ದರು. 'ನನಗೆ ಫೇಸ್‌ಬುಕ್‌ನಲ್ಲಿ ಸಾವಿರಾರು ಸ್ನೇಹಿತರಿದ್ದಾರೆ' ಎಂದು ಹೇಳುವ ಮುಖ ಪರಿಚಯವೂ ಇಲ್ಲದ ಸ್ನೇಹದ ಬಗ್ಗೆ ನಾವು ಎಂದಿಗೂ ಹೆಮ್ಮೆಪಡಲಿಲ್ಲ.

- ನಾವು ಹೆಚ್ಚಿನ ಸಮಯ ಬೀದಿಗಳಲ್ಲಿ ಬರಿಗಾಲಿನಲ್ಲಿ ಅಲೆದಾಡುತ್ತಿದ್ದೆವು. ಬಾಟಲಿ ಚೂರುಗಳು ಕಾಲಿಗೆ ಗಾಯ ಮಾಡಬಹುದು ಅಥವಾ ಮೊಳೆ ಚುಚ್ಚಿಕೊಳ್ಳಬಹುದು ಎಂದು ಚಿಂತಿಸುವಷ್ಟರ ಮಟ್ಟಿಗೆ ಇಡೀ ಊರನ್ನೇ ನಾವು ಎಂದೂ ಕಸದ ತೊಟ್ಟಿಯನ್ನಾಗಿಸುತ್ತಿರಲಿಲ್ಲ.

- ನಮ್ಮ ಹೆತ್ತವರು ಸೂಪರ್ ಮಾರ್ಕೆಟ್‌ಗೆ ಹೋಗಿ ನಮಗಾಗಿ ಚೈನೀಸ್ ಆಟಿಕೆಗಳನ್ನು ಖರೀದಿಸುತ್ತಿರಲಿಲ್ಲ. ನಮಗೆ ಬೇಕಾದ ಆಟಿಕೆಗಳನ್ನು ನಾವೇ ತಯಾರಿಸುತ್ತಿದ್ದೆವು.

- ಆಟವಾಡುವಾಗ ಬಾಯಾರಿಕೆ ಆದಲ್ಲಿ, ನಾವು ಬೀದಿಯಲ್ಲಿದ್ದ ಯಾವುದೇ ಮನೆಗೆ ಹೋಗಿ ನೀರು ಕುಡಿಯುತ್ತಿದ್ದೆವು, ಬೀದಿ ನಲ್ಲಿಯ ನೀರನ್ನೂ ಕುಡಿಯುತ್ತಿದ್ದೆವು. ಹೀಗೆ ಸಾರ್ವಜನಿಕ ಉಪಯೋಗಕ್ಕಿರುವ ನೀರನ್ನು ಕುಡಿಯಲು ಯೋಗ್ಯವಲ್ಲದುದನ್ನಾಗಿ ನಾವು ಎಂದೂ ಮಾಡಲಿಲ್ಲ.

- ಬೀದಿಯಲ್ಲಿರುವ ಪರಿಚಯಸ್ಥರ ಮತ್ತು ಸ್ನೇಹಿತರ ಮನೆಗಳಿಗೆ ಆಹ್ವಾನವಿಲ್ಲದೆಯೇ ಹೋಗಿ, ಅಲ್ಲಿರುವುದನ್ನು ತೆಗೆದುಕೊಂಡು ತಿನ್ನಲು ನಮಗೆ ಅವಕಾಶವಿತ್ತು. ಬೀದಿಯಲ್ಲಿರುವ ಯಾರೂ ಯಾರನ್ನೂ ಅಪರಿಚಿತರೆಂದು ಪರಿಗಣಿಸುತ್ತಿರಲಿಲ್ಲ ಮತ್ತು ಯಾರನ್ನೂ ಅನುಮಾನದಿಂದ ನೋಡುವ ಅಗತ್ಯವೂ ನಮಗಿರಲಿಲ್ಲ.

- ಸಂಬಂಧಿಕರೊಂದಿಗೆ ಗಂಟೆಗಟ್ಟಲೆ ಹೃದಯದಿಂದ ಮಾತನಾಡಲು ನಮ್ಮಿಂದ ಸಾಧ್ಯವಿತ್ತು ಮತ್ತು ಅದು ಕೇವಲ ಔಪಚಾರಿಕ ಮಾತುಗಳಾಗಿರುತ್ತಿರಲಿಲ್ಲ. ನಮ್ಮ ಸಂಬಂಧಿಕರು ಆತ್ಮೀಯತೆಯ ಪ್ರತಿರೂಪವಾಗಿರುತ್ತಿದ್ದರು. ಏನೋ ನಾಲ್ಕು ಮಾತು ಮಾತನಾಡಿ, ನಂತರ ಏನು ಮಾತನಾಡುವುದೆಂದು ತೋಚದೆ ಮೌನವಾಗಿ ಇರಬೇಕೆಂದು ನಮಗೆ ಎಂದಿಗೂ ಅನ್ನಿಸಲಿಲ್ಲ. ನಾವೂ ನಿಮ್ಮಂತೆ ಯಾವಾಗಲೂ ಫೋನ್ ಅನ್ನು ಕೈಯಲ್ಲಿಟ್ಟುಕೊಂಡು ಅದನ್ನು ಕೆದಕುತ್ತಿರಲಿಲ್ಲ.

- ನಾವು ಮೂರು ಹೊತ್ತೂ ಅನ್ನ, ಇಡ್ಲಿ, ದೋಸೆ ಮತ್ತು ಗಂಜಿ ಹೀಗೆ ಅಕ್ಕಿಯಿಂದ ತಯಾರಿಸಿದ ಆಹಾರವನ್ನೇ ಸೇವಿಸುತ್ತಿದ್ದೆವು. ಆದರೂ ನಮ್ಮ ತೂಕ ಹೆಚ್ಚಾಗಲಿಲ್ಲ.

- ನಮ್ಮ ದೇಹಕ್ಕೆ ಪೌಷ್ಟಿಕಾಂಶ ಒದಗಿಸಲು ಯಾವುದೇ ಪೌಡರ್, ಪಾನೀಯ ಅಥವಾ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದರೂ, ನಾವು ಆರೋಗ್ಯವಾಗಿ ಬೆಳೆದಿದ್ದೇವೆ.

- ನಿಮ್ಮ ಸ್ವಂತ ಸುರಕ್ಷತೆಗಾಗಿ ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸಲು ನ್ಯಾಯಾಲಯ ಆದೇಶಿಸಿದರೂ, ಅನೇಕ ಜನರು ಅದನ್ನು ಗೌರವಿಸುವುದಿಲ್ಲ. ನಮ್ಮ ಕಾಲದಲ್ಲಿ ಹೆಲ್ಮೆಟ್‌ನ ಅಗತ್ಯವೇ ಇರಲಿಲ್ಲ. ಅಜಾಗರೂಕತೆ, ಅತಿಯಾದ ವೇಗ ಅಥವಾ ನಿಯಮಗಳಿಗೆ ನಾವು ಅವಿಧೇಯತೆ ತೋರಿಸುತ್ತಿರಲಿಲ್ಲ.

ಹೀಗೆ ಹಲವು ವಿಷಯಗಳನ್ನು ಕ್ರಮವಾಗಿ ಪಟ್ಟಿ ಮಾಡಿದ ನಂತರ, ಅಜ್ಜ ಹೇಳಿದರು, 'ನಮ್ಮ ಛಾಯಾಚಿತ್ರಗಳು ಕಪ್ಪು ಬಿಳುಪಿನಲ್ಲಿರಬಹುದು. ಆದರೆ ನಮ್ಮ ಪೀಳಿಗೆಯ ನೆನಪುಗಳು ವರ್ಣಮಯವಾಗಿವೆ. ಇವುಗಳಲ್ಲಿ ಕೆಲವನ್ನು ಅನುಭವಿಸಲು ನಿಮಗೆ ಅವಕಾಶವಿಲ್ಲದಿರಬಹುದು. ಆದರೆ ಕಲಿಯಲು ಮತ್ತು ಅನುಸರಿಸಲು ನಿಮಗೂ ಹಲವು ಉತ್ತಮ ವಿಧಾನಗಳಿವೆ. ಅವು, ಪೀಳಿಗೆಯಿಂದ ಪೀಳಿಗೆಗೆ ಅನುಭವಗಳ ಮೂಲಕ ಸಂಗ್ರಹಿಸಲಾಗಿರುವ ನಿಧಿಗಳು. ನಿಧಿಗಳು ಹಳೆಯವಾಗಿದ್ದರೂ ಸಹ ನಾವು ಅವುಗಳನ್ನು ಪಡೆದುಕೊಳ್ಳಲು ಬಯಸುತ್ತೇವೆ ಮತ್ತು ಅದಕ್ಕಾಗಿ ಶ್ರಮಿಸುತ್ತೇವೆ. ಅವು ನಮ್ಮ ಪೂರ್ವಜರ ಆಸ್ತಿಯಾಗಿದ್ದರೂ ಸಹ, ನಾವು ಅವುಗಳನ್ನು ಆನಂದದಿಂದ ಅನುಭವಿಸಲು ಬಯಸುತ್ತೇವೆ. ನಮ್ಮ ಪೀಳಿಗೆಯಿಂದ ಇಂತಹ ಉತ್ತಮ ಗುಣಗಳನ್ನು ಆನುವಂಶಿಕವಾಗಿ ಪಡೆಯಲು ನೀವು ಏಕೆ ನಿರಾಕರಿಸುತ್ತೀರಿ?' ಎಂದು ಅಜ್ಜ ಕೇಳಿದರು.

ಆ ಯುವಕ ಈಗ ಯೋಚಿಸಲು ಪ್ರಾರಂಭಿಸಿದ!. ●

ಅಮ್ಮಂದಿರಿಗೆ ಬಿಡುಗಡೆ ನೀಡಿ!

ಪುರುಷರು ಒಮ್ಮೆ ಈ ರೀತಿ ಯೋಚಿಸಿ ನೋಡಿ: 'ನಿಮ್ಮನ್ನು ಒಂದು ಮನೆಯಲ್ಲಿ ಬಂಧಿಸಿಟ್ಟು, ಇಬ್ಬರು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು ಮಾತ್ರವೇ ನಿಮ್ಮ ಕೆಲಸ' ಎಂದು ಹೇಳಿದರೆ ನಿಮಗೆ ಹೇಗೆನ್ನಿಸುತ್ತದೆ? ಆ ಕೆಲಸದಲ್ಲಿ ನಿಮಗೆ ವಿಶ್ರಾಂತಿಯೇ ಸಿಗದಿದ್ದರೆ ನಿಮಗೆ ಹೇಗೆನ್ನಿಸುತ್ತದೆ? ಅದಕ್ಕಾಗಿಯೇ ಅನೇಕ ಮಹಿಳೆಯರು 'ನನಗೆ ಇದರಿಂದ ಸ್ವಾತಂತ್ರ್ಯ ಬೇಕು' ಎಂದು ಕೂಗುವುದು

ಮಕ್ಕಳನ್ನು ನೋಡಿಕೊಳ್ಳುವುದು ತುಂಬಾ ಭಾರವಾದ ಹೊರೆಯಾಗಿದ್ದು, ನಿದ್ರೆಯನ್ನು ತ್ಯಾಗ ಮಾಡಬೇಕಾಗುತ್ತದೆ. ತಮಗಿಷ್ಟವಾದ ಯಾವುದೇ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಲೂ ಅವರಿಗೆ ಸಮಯವಿರುವುದಿಲ್ಲ. ಸಂಬಂಧಿಕರು ಮತ್ತು ಸ್ನೇಹಿತರ ಕುಟುಂಬದ ಸಮಾರಂಭಗಳಿಗೆ ಹೋಗಲೂ ಸಾಧ್ಯವಾಗುವುದಿಲ್ಲ. ಮಗು ಏಕೆ ಅಳುತ್ತಿದೆ? ಅದು ಏಕೆ ಊಟ ಮಾಡುತ್ತಿಲ್ಲ? ಇತ್ಯಾದಿ ಕಾರಣಗಳಿಂದ ಉಂಟಾಗುವ ಒತ್ತಡವು ತುಂಬಾ ಕೆಟ್ಟದಾಗಿರುತ್ತದೆ.

ನಾವು ಎದುರಿಸುವ ತೊಂದರೆಗಳಲ್ಲಿ ಎರಡು ವಿಧಗಳಿವೆ. ಒಂದು ಸಾಂದರ್ಭಿಕ ಹಾಗೂ ಇನ್ನೊಂದು ದೀರ್ಘಕಾಲೀನ ತೊಂದರೆ. ಎರಡೂ ಆಗಾಗ್ಗೆ ಎದುರಾಗುತ್ತಲೇ ಇರುತ್ತವೆ. ನಿಮ್ಮ ಮ್ಯಾನೇಜರ್ ತಿಂಗಳಿಗೊಮ್ಮೆ ನಡೆಯುವ ಸಭೆಯಲ್ಲಿ ಹತ್ತು ನಿಮಿಷಗಳ ಕಾಲ ನಿಮ್ಮನ್ನು ಗದರಿಸುತ್ತಾನೆ. ನೀವು ಹಲ್ಲು ಕಡಿಯುತ್ತಾ ಅದನ್ನು ನಿಭಾಯಿಸಿದರೆ ಎಲ್ಲವೂ ಮುಗಿದು ಹೋಗುತ್ತದೆ. ಇದು ಮೊದಲ ರೀತಿಯ ಕಿರುಕುಳ. ನಿಮ್ಮ ರೂಮ್‌ಮೇಟ್ ಗೊರಕೆ ಹೊಡೆಯುತ್ತಾರೆ ಮತ್ತು ಆ ಶಬ್ದದಿಂದ ನೀವು ರಾತ್ರಿಯೆಲ್ಲಾ ಎಚ್ಚರವಾಗಿರಬೇಕಾಗುತ್ತದೆ. ಕೆಲವು ಸ್ನೇಹಿತರು ನೀವು ಮೇಲೇರುವುದನ್ನು ನೋಡಿದಾಗಲೆಲ್ಲಾ ನಿಮ್ಮ ಬೆನ್ನಿಗೆ ಹೊಡೆಯುತ್ತಾರೆ. ಇವೆಲ್ಲವೂ ಆಗಾಗ್ಗೆ ನಡೆಯಬಹುದು ಅಥವಾ ದೀರ್ಘಕಾಲೀನ ಕಿರುಕುಳವಾಗಿರಬಹುದು. ಇವುಗಳು ಅಪಾಯಕಾರಿ ಮತ್ತು ತುಂಬಾ ಕಿರಿಕಿರಿ ಉಂಟು ಮಾಡುವ ಕಿರುಕುಳ.

ಮಗುವನ್ನು ಬೆಳೆಸುವುದು ಕೂಡ ಹೀಗೆಯೇ. ಒಬ್ಬ ಯುವ ತಾಯಿ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಅವಳು ಸರಿಯಾಗಿ ನಿದ್ರೆ ಮಾಡಲು ಸಾಧ್ಯವಾಗುವುದಿಲ್ಲ. ತಾಯಿ ಮಗುವಿನ ಜೀವಾಳ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ತಾಯಿಗೆ ಕೆಲವು ಮೂಲಭೂತ 'ಜೀವನದ ಅವಶ್ಯಕತೆಗಳು' ಇರುತ್ತವೆ. ನಿದ್ರೆ, ಮಾನಸಿಕ ವಿಶ್ರಾಂತಿ, ಆಹಾರ, ದೈಹಿಕ ಶುಚಿತ್ವ ಇತ್ಯಾದಿಗಳು ಮಗುವನ್ನು ಬೆಳೆಸುವುದರಿಂದಾಗಿ ಅವಳಿಗೆ ಸಿಗದೆ ಹೋದಾಗ ಆ ಮಹಿಳೆ ಕಂಗಾಲಾಗುತ್ತಾಳೆ.

ತಾಯಿ ಯಾವಾಗಲೂ ಪ್ರೀತಿಯಿಂದ ಇರುತ್ತಾಳೆ ಮತ್ತು ಮಗುವನ್ನು ಬೆಳೆಸುವುದನ್ನು ತುಂಬಾ ಸಂತೋಷದಿಂದ ಮಾಡುತ್ತಾಳೆ ಎಂದು ಭಾವಿಸುವುದು ತಪ್ಪು. ಹಲವು ಬಾರಿ, ಯುವ ತಾಯಂದಿರು ತುಂಬಾ ಒತ್ತಡಕ್ಕೊಳಗಾಗುತ್ತಾರೆ. ಒಬ್ಬ ಯುವ ತಂದೆಯಾಗಿ, ಅಪ್ಪ ಮಾಡಬೇಕಾದ ಪ್ರಮುಖ ಕೆಲಸವೆಂದರೆ ದಿನವೂ ಕೆಲವು ಗಂಟೆಗಳ ಕಾಲವಾದರೂ ತನ್ನ ಮಗುವನ್ನು ಪೂರ್ತಿಯಾಗಿ ತಾನೇ ನೋಡಿಕೊಳ್ಳುವುದು ಮತ್ತು ತನ್ನ ಹೆಂಡತಿಗೆ ಸ್ವಲ್ಪ ಸ್ವಾತಂತ್ರ್ಯ ನೀಡುವುದು.

ಸಂಜೆ ಹೆಂಡತಿ ಮುಖ ತೊಳೆದು ಚಹಾ ಕುಡಿದು ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಟ್ಟು, 'ನಾವು ಅಂಗಡಿಗೆ ಹೋಗುತ್ತಿದ್ದೇವೆ' ಎಂದು ಹೇಳಿ ಮಗುವನ್ನು ಎತ್ತಿಕೊಂಡು ಹೊರಗೆ ಹೋಗಬಹುದು. ಹೀಗೆ ಕನಿಷ್ಠ ಒಂದು ಗಂಟೆ ಹೊರಗೆ ಸುತ್ತಾಡಬೇಕು.

ಮಗುವನ್ನು ಯಾವಾಗಲೂ ನೋಡಿಕೊಳ್ಳುವುದು, ಮಗುವಿನ ಸೇವೆ ಮಾಡುವುದು ತಾಯಿಯನ್ನು ಆಯಾಸಗೊಳಿಸುತ್ತದೆ. ತಾಯಿ ಮಗುವಿಗಾಗಿ ಸ್ವಲ್ಪ ಸಮಯದವರೆಗೆ ತನ್ನ ಆಹಾರವನ್ನು ಬಿಡಬಹುದು. ಆದರೆ ಶೀಘ್ರದಲ್ಲೇ ಅವಳ ಇಂದ್ರಿಯಗಳು ಅವಳನ್ನು ತಿನ್ನುವಂತೆ ಕೇಳಲು ಪ್ರಾರಂಭಿಸುತ್ತವೆ. ಅವಳು ಒಳ್ಳೆಯ ಹಾಡನ್ನು ಕೇಳಲು, ಟಿವಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ನೋಡಲು, ರುಚಿಕರವಾದ ಊಟವನ್ನು ಆನಂದಿಸಲು ಬಯಸುತ್ತಾಳೆ. ಯುವ ತಂದೆಯಂದಿರು ತಾಯಂದಿರ ಈ ಭಾವನೆಯನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನು ಮಾಡಲು ಒಂದು ಮಾರ್ಗವೆಂದರೆ ಮಗುವನ್ನು ಕಾಲಕಾಲಕ್ಕೆ ನಿಮ್ಮ ಹೆಂಡತಿಯಿಂದ ಬೇರ್ಪಡಿಸುವುದು ಮತ್ತು ಅವರಿಗೆ ತಾತ್ಕಾಲಿಕ ಬಿಡುವನ್ನು ನೀಡುವುದು.

ಮಗು,ಒಂದು ಕಡೆ ರಾತ್ರಿಯಲ್ಲಿ ನಿದ್ರೆಗೆ ಭಂಗ ತರುತ್ತದೆ, ಇನ್ನೊಂದು ಕಡೆ ಯಾವಾಗಲೂ ಸೇವೆಯನ್ನು ನಿರೀಕ್ಷಿಸುತ್ತದೆ. ತಮ್ಮ ನಿದ್ರೆಗೆ ಭಂಗವಾಗುವುದರಿಂದ ಯುವ ತಾಯಂದಿರು

ಒಂದು ಹಂತದಲ್ಲಿ ಕಿರಿಕಿರಿಗೊಳ್ಳುತ್ತಾರೆ. ವಿದೇಶಿ ಟಿವಿ ನಾಟಕವೊಂದರಲ್ಲಿ ಒಬ್ಬ ಮಹಿಳೆ ತನ್ನ ತಾಯಿಯ ಬಳಿ, ತನ್ನ ಮಕ್ಕಳನ್ನು ನೋಡಿಕೊಳ್ಳುವಂತೆ ಕೇಳಿ ಕೊಳ್ಳುತ್ತಾಳೆ. 'ಅಮ್ಮಾ, ನಿನಗೆ ಮೊಮ್ಮಕ್ಕಳು ಎಂದರೆ ತುಂಬಾ ಇಷ್ಟ ತಾನೇ?' ಎಂದು ಅವಳು ತನ್ನ ತಾಯಿಯನ್ನು ಕೇಳುತ್ತಾಳೆ. 'ನನಗೆ ಐಸ್ ಕ್ರೀಮ್ ತಿನ್ನುವುದೂ ಇಷ್ಟ. ಅದಕ್ಕಾಗಿ ನಾನು ಅದನ್ನು ಮಧ್ಯರಾತ್ರಿಯಲ್ಲಿ ತಿನ್ನಲಾರೆ' ಎಂದು ತಾಯಿ ಹೇಳುತ್ತಾಳೆ.

ಪ್ರತಿಯೊಬ್ಬ ತಾಯಿಯೂ ತನ್ನ ಮಗುವನ್ನು ಪ್ರೀತಿಸುತ್ತಾಳೆ. ಆದರೆ ಅದಕ್ಕಾಗಿ ಯಾವಾಗಲೂ 'ಮಗು, ಮಗು, ಮಗು' ಎಂದುಕೊಂಡು ಅದಕ್ಕಾಗಿ ಮಾತ್ರವೇ ಕೆಲಸ ಮಾಡುವುದು ಅವಳಲ್ಲಿ ಸ್ವಲ್ಪ ಬೇಸರ ತರಿಸಬಹುದು. ಯುವ ತಂದೆಯಂದಿರು ಇದನ್ನು ಅರ್ಥ ಮಾಡಿಕೊಳ್ಳಬೇಕು.

'ಇನ್ನು ನನ್ನ ಜೀವನ ಯಾವಾಗಲೂ ಹೀಗೆಯೇ ಇರುತ್ತದೇನೋ?' ಎಂದು ಅವರಲ್ಲಿ ಒಂದು ಬಗೆಯ ಬೇಸರ ಮೂಡುತ್ತದೆ. ನೀವು ಹೊಸದಾಗಿ ಒಂದು ಕೆಲಸಕ್ಕೆ ಹೋಗುತ್ತೀರಿ ಎಂದಿಟ್ಟುಕೊಳ್ಳಿ. ನೀವು ದಿನಕ್ಕೆ ಎಂಟು ಗಂಟೆ ಬಿಡುವಿಲ್ಲದೆ ಕೆಲಸ ಮಾಡುತ್ತೀರಿ. ನೀವು ಹಾಗೆ ಅದನ್ನು ಹತ್ತು ದಿನಗಳವರೆಗೆ ಮಾಡಬಹುದು. ನಂತರ ನಿಮಗೆ ಬೇಸರ ಬರುತ್ತದೆ, 'ಇನ್ನು ಮೇಲೆ ಯಾವಾಗಲೂ ಹೀಗೆಯೇ ಇರುತ್ತದೋ?' ಎಂದು ನಿಮಗನ್ನಿಸತೊಡಗುತ್ತದೆ. ನಡುವೆ ಆಯುಧ ಪೂಜೆ ಬರುತ್ತದೆ. ಅವರು ನಿಮ್ಮ ದೈನಂದಿನ ಕೆಲಸವನ್ನು ಬಿಟ್ಟು ಪೂಜೆಗೆ ಅವಶ್ಯಕವಾದ ಹಾಗೂ ಕಂಪೆನಿಯನ್ನು ಶುದ್ಧ ಮಾಡುವ ಕೆಲಸ ಮಾಡಲು ಹೇಳುತ್ತಾರೆ. ಎರಡು ಅಥವಾ ಮೂರು ದಿನಗಳ ಕೆಲಸ ಅಷ್ಟೇ, ಹೆಚ್ಚೇನಲ್ಲ. ಆದರೂ ನಿಮ್ಮೊಳಗೆ ಅದುವರೆಗೂ ಇದ್ದ, 'ಯಾವಾಗಲೂ ಹೀಗೆಯೇ ಇರುತ್ತದೋ?' ಎಂಬ ಭಾವನೆಯಿಂದ ನೀವು ಬಿಡುಗಡೆ ಹೊಂದುತ್ತೀರಿ.

ಯುವ ತಾಯಂದಿರು ಕೂಡ ಇದೇ ರೀತಿಯ ಬೇಸರವನ್ನು ಎದುರಿಸುತ್ತಾರೆ. ಮದುವೆಯಾಗುವವರೆಗೂ ಅವರು ಸ್ವತಂತ್ರವಾಗಿರುತ್ತಾರೆ. ಮದುವೆ, ಗರ್ಭಧಾರಣೆ, ಹೆರಿಗೆ, ಮಗುವನ್ನು ಬೆಳೆಸುವುದು, ಮಕ್ಕಳ ಆರೈಕೆ, ಅಳುವ ಮಗುವನ್ನು ನಿಭಾಯಿಸುವುದು ಮತ್ತು ಮಗು ಅಸ್ವಸ್ಥವಾದಾಗ ಆತಂಕಕ್ಕೊಳಗಾಗುವುದು... ಇತ್ಯಾದಿಗಳು ಯುವ ತಾಯಿಗೆ ತುಂಬಾ ಕಷ್ಟಕರವಾಗಿರುತ್ತದೆ. 'ಇದು ಯಾವಾಗಲೂ ಹೀಗೇ ಇರುತ್ತದೆಯೇ' ಎಂಬ ಭಾವನೆ ಅವಳನ್ನು ಹೆದರಿಸುತ್ತದೆ. 'ಇಲ್ಲ, ಕೆಲವು ವಿಷಯಗಳು ಬದಲಾಗುತ್ತವೆ. ನೀನು ಇನ್ನು ಮೇಲೆ ಸ್ವಲ್ಪ ವಿಶ್ರಾಂತಿ ಪಡೆಯಬಹುದು' ಎಂಬತಂಹ ನಿಮ್ಮ ಮಾತುಗಳು ಆ ತಾಯಿಗೆ ಧೈರ್ಯ ತುಂಬುವಂತಿರಬೇಕು.

ನಿಮ್ಮ ಮಗುವಿಗೆ ಮೂರು ಅಥವಾ ನಾಲ್ಕು ವರ್ಷವಾಗುವವರೆಗೆ ನಿಮ್ಮ ಹೆಂಡತಿಯನ್ನು ಹೀಗೆಯೇ ಬೆಂಬಲಿಸಿ. ಅವರು ಕುಟುಂಬವನ್ನು ಎಂದಿಗಿಂತಲೂ ಹೆಚ್ಚು ಪ್ರೀತಿಸುತ್ತಾರೆ. ಕುಟುಂಬ ಜೀವನ ಎಂದರೆ ಎಲ್ಲರ ಭಾವನೆಗಳನ್ನು ಗೌರವಿಸುವುದು, ಒಬ್ಬರನ್ನೊಬ್ಬರು ಆರಾಮದಾಯಕವಾಗಿಟ್ಟುಕೊಳ್ಳುವುದು ಮತ್ತು ಪರಸ್ಪರ ಆನಂದಿಸುವುದು; ಕೆಲವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಮತ್ತು ನಿರ್ಬಂಧಿಸುವುದು ಅಲ್ಲ!

ಪುರುಷರೇ, ನಿಮ್ಮ ಹೆಂಡತಿ ಅಥವಾ ನಿಮ್ಮ ಮನೆಯ ಮಹಿಳೆಯರು ತಾಯ್ತನವನ್ನು ಆನಂದಿಸಬೇಕೆಂದು ನೀವು ನಿಜವಾಗಿಯೂ ಬಯಸಿದರೆ, ನೀವೂ ಮಗುವನ್ನು ನೋಡಿಕೊಳ್ಳಬೇಕು ಮತ್ತು ನಿಮ್ಮ ಹೆಂಡತಿಗೆ ವಿಶ್ರಾಂತಿ ನೀಡಬೇಕು. ಮಗುವನ್ನು ಬೆಳೆಸುವ ಶೇಕಡಾ 50ರಷ್ಟು ಜವಾಬ್ದಾರಿ ನಿಮ್ಮ ಮೇಲೂ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ●

ಬಿಡುಗಡೆಯ ದಾರಿಗಳು!

ಕೆಲವೊಮ್ಮೆ ನಾವು ನಮ್ಮ ಸ್ವಂತ ಒಳಿತಿಗಾಗಿಯೋ ಅಥವಾ ಬೇರೊಬ್ಬರ ಒಳಿತನ್ನು ಬಯಸಿಯೋ ಕೆಲವು ಕೆಲಸಗಳನ್ನು ಮಾಡುತ್ತೇವೆ. ಅಂತಹ ಸಂದರ್ಭಗಳಲ್ಲಿ ನಾವು ನಮ್ಮ ಕೋಪ ಅಥವಾ ದ್ವೇಷವನ್ನು ವ್ಯಕ್ತಪಡಿಸುವುದಿಲ್ಲ. ಅಲ್ಲಿ ತೋರಿಸುವ ಈ ಪ್ರಬುದ್ಧತೆಯು ಕೂಡ ಒಂದು ರೀತಿಯಲ್ಲಿ ವಿಮೋಚನೆಯ ಭಾವವೇ ಆಗಿದೆ.

ನಮ್ಮ ದೌರ್ಬಲ್ಯಗಳನ್ನು ನಾವು ತಿಳಿದಾಗ ಮಾತ್ರ ಅವುಗಳನ್ನು ಸರಿಪಡಿಸುವ ಅಗತ್ಯವನ್ನು ಮನಗಾಣುತ್ತೇವೆ. ನಾವು ಯಾವುದರಲ್ಲಿ ಬಲಶಾಲಿಯಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳುವುದರಿಂದ ನಮಗೆ ತೃಪ್ತಿಯಾಗುತ್ತದೆ. ಈ ಮನಸ್ಥಿತಿಯೂ ಒಂದು ರೀತಿಯ ಸ್ವಾತಂತ್ರ್ಯವೇ ಸರಿ.

ಸ್ವಾತಂತ್ರ್ಯವೆಂದರೆ, 'ಇದು ಏಕೆ ಬದಲಾಗಿಲ್ಲ?', ಅಥವಾ 'ಇದು ಯಾವಾಗ ಬದಲಾಗುತ್ತದೆ?' ಎಂದು ಯಾವುದೇ ಪರಿಸ್ಥಿತಿಯ ಬಗ್ಗೆ ದೂರುತ್ತಿರದೆ, ಪರಿಸ್ಥಿತಿಯನ್ನು ನಾವೇ ಬದಲಾಯಿಸಲು ಪ್ರಯತ್ನಗಳನ್ನು ಪ್ರಾರಂಭಿಸುವುದೇ ಆಗಿದೆ.

ವಾಸ್ತವವಾಗಿ, ಈ ಜಗತ್ತಿನಲ್ಲಿ ಮಕ್ಕಳು ತುಂಬಾ ಸ್ವತಂತ್ರರು. ಅವರು ಹಿಂದಿನ ಘಟನೆಗಳ ಬಗ್ಗೆ ಚಿಂತಿಸುವುದಿಲ್ಲ, ಭವಿಷ್ಯದ ಅಗತ್ಯಗಳ ಬಗ್ಗೆ ಹೆದರುವುದಿಲ್ಲ. ಅವರು ಆ ಕ್ಷಣದಲ್ಲಿ ಸಂತೋಷದಿಂದ ಬದುಕುತ್ತಾರೆ. ಅವರ ಕೋಪ ಮತ್ತು ಜಗಳಗಳು ಶಾಶ್ವತವಲ್ಲ. ಅವರು ಇನ್ನೊಂದು ಮಗುವಿನೊಂದಿಗೆ ಜಗಳವಾಡಬಹುದು ಮತ್ತು ಕೆಲವು ನಿಮಿಷಗಳಲ್ಲಿ ಮತ್ತೆ ಸಾಮಾನ್ಯವಾಗಿ ಮಾತನಾಡಬಹುದು. ಆ ಕೋಪವನ್ನು ಜೀವನದುದ್ದಕ್ಕೂ ಹೊತ್ತುಕೊಳ್ಳುವವರು ವಯಸ್ಕರು ಮಾತ್ರ.

ನೀವು ಯಾವುದೇ ವಿಷಯವನ್ನು ಮುಗ್ಧ ಮಗುವಿನ ಮನಸ್ಥಿತಿಯೊಂದಿಗೆ, ಕೋಪ ಮತ್ತು ಅಸಮಾಧಾನವನ್ನು ಹೊತ್ತುಕೊಳ್ಳದೆ, ಇತರ ಜವಾಬ್ದಾರಿಗಳನ್ನು ಭಾರವಾದ ಹೊರೆ ಎಂದು ಪರಿಗಣಿಸದೆ ಸಮೀಪಿಸಲು ಸಾಧ್ಯವಾದರೆ... ನಿಮಗೆ ಶಾಶ್ವತ ಸ್ವಾತಂತ್ರ್ಯ ಸಿಗುತ್ತದೆ. ನೀವು ಯಾವುದೇ ಪರಿಸ್ಥಿತಿಯನ್ನು ನಗುವಿನೊಂದಿಗೆ ಎದುರಿಸಲು ಸಾಧ್ಯವಾಗುತ್ತದೆ. ಸ್ವಾತಂತ್ರ್ಯ ಎಂದರೆ, ಯಾವುದೇ ಒತ್ತಡ ಅಥವಾ ಒತ್ತಡವಿಲ್ಲದೆ ನಾವು ನಮ್ಮ ಅಪೇಕ್ಷಿತ ಗುರಿಯನ್ನು ಸಾಧಿಸುವತ್ತ ಕೆಲಸ ಮಾಡಬಹುದಾದ ವಾತಾವರಣ, ಮತ್ತು ಅಂತಹ ಕೆಲಸದಲ್ಲಿ ನಾವು ಶಾಂತಿ ಮತ್ತು ತೃಪ್ತಿಯನ್ನು ಕಂಡುಕೊಳ್ಳುತ್ತೇವೆ. ಒಬ್ಬ ವ್ಯಕ್ತಿಯು ಕಠಿಣ ಪರಿಶ್ರಮದ ನಡುವೆಯೂ ತನ್ನ ಮನಸ್ಸನ್ನು ವಿಶ್ರಾಂತಿಯಿಂದಿರಿಸಲು ಮತ್ತು ತನ್ನ ಕುಟುಂಬದೊಂದಿಗೆ ಆಹ್ಲಾದಕರ ಪ್ರವಾಸಕ್ಕೆ ಹೋಗಲು ಸಾಧ್ಯವಾದರೆ, ಅವನಿಗೆ ಉತ್ತಮ ಆರ್ಥಿಕ ಸ್ವಾತಂತ್ರ್ಯವಿದೆ ಎಂದರ್ಥ.

ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯಗಳನ್ನು ಮತ್ತು ಇಚ್ಛೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಬಹುದಾದ ವಾತಾವರಣ ಇರಬೇಕು. ಅವರ ಅಭಿಪ್ರಾಯಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಸ್ವೀಕರಿಸಬೇಕು ಮತ್ತು ಗೌರವಿಸಬೇಕು. ಇದು ಮುಕ್ತ ಸಮಾಜದ ಸಂಕೇತ. ಅಲ್ಮೆರಾಗೆ ಒಂದು ಬೀಗ, ಅದು ಇರುವ ಕೋಣೆಗೆ ಮತ್ತೊಂದು ಬೀಗ, ಮನೆಗೆ ಒಂದು ದೊಡ್ಡ ಬೀಗ, ಅದರ ಹೊರಗೆ ಒಂದು ಗೇಟ್ ಮತ್ತು ಅದರಲ್ಲಿ ಬಲವಾದ ಬೀಗ... ಹೀಗೆ ಅನೇಕ ವ್ಯವಸ್ಥೆಗಳನ್ನು ಮಾಡುವ ಅಗತ್ಯವಿಲ್ಲ. ಇದು ಒಂದು ರಾಷ್ಟ್ರದ ಮುಕ್ತ ಜೀವನವನ್ನು ತೋರಿಸುತ್ತದೆ. 'ತಪ್ಪು ಮಾಡಿದರೆ ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ' ಎಂದು ಎಲ್ಲರೂ ಭಯಪಡುವಾಗ, ನಿಯಂತ್ರಿತ ಸ್ವಾತಂತ್ರ್ಯ ಸಾಧ್ಯ.

'ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಾಗುವುದು ಮನಸ್ಸು ನಿರ್ಭೀತವಾಗಿದ್ದರೆ ಮಾತ್ರ. ಆಗ ಮಾತ್ರ ಮನುಷ್ಯರು ಬೇರೆ ಯಾರೂ ತಲುಪಲು ಸಾಧ್ಯವಾಗದ ಮಿತಿಗಳನ್ನು ತಲುಪುತ್ತಾರೆ. ಅವರು ಹೆಮ್ಮೆಯಿಂದ ಕೆಲಸ ಮಾಡುತ್ತಾರೆ ಮತ್ತು ತಲೆ ಎತ್ತುತ್ತಾ-ರೆ ಮತ್ತು ಅವರು ತಮ್ಮ ಹೃದಯದ ಆಸೆಗಳನ್ನು ಅರಿತುಕೊಳ್ಳುವ ಮೂಲಕ ತಮ್ಮ ಕರ್ತವ್ಯವನ್ನು ಪೂರೈಸುತ್ತಾರೆ' ಎಂದು ರವೀಂದ್ರನಾಥ ಟ್ಯಾಗೋರ್ ಹೇಳಿದ್ದಾರೆ. ಅಂತಹ ಸ್ವಾತಂತ್ರ್ಯದ ಹಾದಿಯಲ್ಲಿ ನಾವೂ ಪ್ರಯಾಣಿಸೋಣ.

●


LINEN PARK®
DHOTIS • SHIRTS • TROUSERS • FABRICS
by
RAMRAJ
CULTURAL Vibe
CULTURE WITH
A MODERN TWIST
Shop Online @ www.ramrajcotton.in

Culture India™
TRADITIONAL KURTAS • DHOTIS
BY
RAMRAJ©
CULTURAL
VIBE
CULTURE WITH
A MODERN TWIST
Shop Online @ www.ramrajcotton.in


RAMRAJ
ACHARYA®
PANCHAKACHAM DHOTIS
Shop Online @ www.ramrajcotton.in

Kokhila®
WOMEN'S INNERWEAR
BY
RAMRAJ©
SOFT.
Stylish.
STRONG.
Experience the feather-light touch of Kokhila innerwear, crafted with premium cotton for unmatched comfort every day. Designed to move with you, it's the perfect blend of elegance and style.
SCAN QR CODE FOR STORE LOCATION
Available at Ramraj Showrooms and All Leading Textile Shops

ನಿಮ್ಮ ಮನೆಗೇ ಬರಬೇಕೇ?

ಬಿಳುಪು

ಚಂದಾದಾರರಾಗಿ!

'ಉನ್ನತವಾದ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯ ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

ವಾರ್ಷಿಕ ಚಂದಾ ರೂ. 200
ದ್ವೈವಾರ್ಷಿಕ ಚಂದಾ ರೂ. 380

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

ವಿಳಾಸ : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

ಫೋನ್ : 0421-4304106, 9842274137.

ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

ಬ್ಯಾಂಕ್ ಖಾತೆಯ ವಿವರ Venmaii
A/C No: 1809135000000299
Karur Vysya Bank,Tirupur SR Nagar Branch
IFSC Code: KVBL0001809.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

	ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
~~ರೂ.200~~	ರೂ.125 ಮಾತ್ರ	~~ರೂ.380~~ ರೂ.250 ಮಾತ್ರ

ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

	ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
~~ರೂ.200~~	ರೂ.125 ಮಾತ್ರ	~~ರೂ.380~~ ರೂ.250 ಮಾತ್ರ

ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.

ನಮಗೆ ಇಷ್ಟವಾಗದ ವಾತಾವರಣ, ಅಪತ್ಕಾರಿಯಾದ ಕರೆ, ತಪ್ಪುತಪ್ಪಾದ ಹವ್ಯಾಸಗಳು... ಹೀಗೆ ಜೀವನಕ್ಕೆ ಹೊಂದಿಕೆಯೇ ಆಗದ ಯಾವುದೇ ಸ್ಥಳದಿಂದ ದೂರ ಹೋಗುವುದನ್ನು ಕೂಡ ಒಂದು ರೀತಿಯ ಬಿಡುಗಡೆಯೆಂದೇ ಪರಿಗಣಿಸಬಹುದು!

ದೂರ ಹೋಗುವುದೂ ಸ್ವಾತಂತ್ರ್ಯವೇ!

ಹಣಕಾಸು ಸಂಸ್ಥೆಗಳು ಮಾಡುವ ವಂಚನೆಗಳು ಮತ್ತು ಮೋಸಗಳು ಇತ್ತೀಚೆಗೆ ಸಾಮಾನ್ಯವಾಗುತ್ತಿವೆ. ಕೆಲವು ವರ್ಷಗಳಲ್ಲಿ ಹೆಚ್ಚಿನ ಬಡ್ಡಿ ದರಗಳು ಮತ್ತು ಹೂಡಿಕೆ ಮಾಡಿದ ಹಣಕ್ಕೆ ಬಹು ಲಾಭದ ಭರವಸೆ ನೀಡುವ ವಂಚನೆಗಳ ಬಗ್ಗೆ ನಾವು ಅನೇಕ ಘಟನೆಗಳನ್ನು ಕೇಳುತ್ತಲೇ ಇದ್ದೇವೆ. ಚಲನಚಿತ್ರಗಳಲ್ಲಿ, ದೂರದರ್ಶನದಲ್ಲಿ ಮತ್ತು ಪತ್ರಿಕೆಗಳಲ್ಲಿ ನೋಡಿದ ನಂತರವೂ ಅನೇಕ ಜನರು ಈ ವಂಚನೆಗಳಿಗೆ ಏಕೆ ಬಲಿಯಾಗುತ್ತಾರೆ? ಅವರು ಈ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವ ಬದಲು ಅವುಗಳಲ್ಲಿ ಏಕೆ ಸಿಕ್ಕಿಹಾಕಿಕೊಳ್ಳುತ್ತಾರೆ?

ಹಲವು ವರ್ಷಗಳ ಹಿಂದೆ ಇಂತಹ ಹಗರಣಗಳನ್ನು ನೋಡಿದ ನಂತರ ಇನ್ನು ಮುಂದೆ ಜನರು ಜಾಗೃತರಾಗುತ್ತಾರೆ ಎಂದು ನಾವು ಭಾವಿಸುತ್ತಿದ್ದೆವು. ಆದರೆ ಕಳೆದ ಕೆಲವು ತಿಂಗಳುಗಳ ಹಿಂದೆ ಕೂಡ, ಸಾವಿರಾರು ಜನರು ನೂರಾರು ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಕಾರಣವೇನು? ದುರಾಸೆ ಮತ್ತು ಚಪಲ ಬುದ್ಧಿಗಳು ಜನರನ್ನು ಕಟ್ಟಿ ಹಾಕುತ್ತವೆ. 'ನಮ್ಮ ಬಗ್ಗೆ ಇತರರು ಏನು ಯೋಚಿಸುತ್ತಾರೆ' ಎಂಬ ಅನಗತ್ಯ ಆಲೋಚನೆಯು ಅವರನ್ನು ಇಂತಹ ಅನೇಕ ಸರಪಳಿಗಳೊಳಗೆ ಸಿಲುಕಿಸಿ ಬಿಡುತ್ತದೆ.

ಜನರು ಅಪರಿಚಿತರಿಂದ ಇಂತಹ ವಂಚನೆಗೊಳಗಾಗುವುದಿಲ್ಲ. ಆ ಕಂಪನಿಗಳಲ್ಲಿ ಕೆಲಸ ಮಾಡುವವರು ತಮಗೆ ತಿಳಿದಿರುವ ಕೆಲವು ಜನರಿಂದ ಇಲ್ಲಿ ಹೂಡಿಕೆ ಮಾಡಿಸಿದರೆ, ಅದರಿಂದ ಇವರಿಗೆ ಹೆಚ್ಚುವರಿ ಹಣ ಸಿಗುತ್ತದೆ. ಹಾಗೆ ಬಂದವರು ತಮಗೆ ತಿಳಿದವರಿಂದ ಹಣವನ್ನು ಹೂಡಿಕೆ ಮಾಡಿಸುತ್ತಾರೆ. ಹೀಗೇ ಈ ಸರಪಳಿ ಮುಂದುವರೆಯುತ್ತದೆ. ಸಾವಿರಾರು ಜನರು ಹಣ ಹೂಡುತ್ತಾರೆ.

ಇಂತಹ ಮೋಸಗಳು ಈ ರೀತಿಯ ಸರಪಳಿ ಯೋಜನೆಗಳಾಗಿವೆ. 'ಈ ಕಂಪನಿಯು ಇತರ ಹಗರಣದ ಕಂಪನಿಗಳಂತೆ ಮೋಸ ಮಾಡುವುದಿಲ್ಲ. ಇಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡುವವರು ನಮಗೆ ತಿಳಿದಿದ್ದಾರೆ ಎಂದು ಭರವಸೆ ನೀಡಿದರೆ, ಜನರು ತಕ್ಷಣ ಹಣ ನೀಡುತ್ತಾರೆ. ನಾವು ಹೂಡಿಕೆ ಮಾಡಿದ ಹಣವನ್ನು ತೆಗೆದುಕೊಳ್ಳಲು ಯಾವುದೇ ತೊಂದರೆಯಿಲ್ಲ ಎಂದು ಅವರು ನಟಿಸುತ್ತಾರೆ. ವಿಶ್ವಾಸಾರ್ಹ ವ್ಯಕ್ತಿ ಭರವಸೆ ನೀಡಿದಾಗ, ನಾವು ನಿರಾಕರಿಸಲು ಸಾಧ್ಯವಾಗದೆ ಸೇರಲೇಬೇಕಾಗುತ್ತದೆ. ಒಮ್ಮೆ ಅದರೊಳಗೆ ಸಿಲುಕಿಕೊಂಡ ನಂತರ ಆ ಸರಪಳಿಯಿಂದ ಹೊರಬರಲು ಯಾವುದೇ ಮಾರ್ಗ ಇರುವುದಿಲ್ಲ. ನಿವೃತ್ತಿಗಾಗಿ ಉಳಿಸಿದ್ದ ಎಲ್ಲಾ ಹಣವನ್ನು ಹೀಗೆ ಕಳೆದುಕೊಂಡು ದುಃಖದಲ್ಲಿ ಸಿಲುಕಿರುವ ಅನೇಕ ವೃದ್ಧರಿದ್ದಾರೆ.

ಚೀಟಿ ಹಾಕುವ ಅನೇಕ ಮಹಿಳೆಯರ ವಿಷಯದಲ್ಲೂ ಇದೇ ಆಗಿದೆ. ಮೋಸ ಹೋದ ಮಹಿಳೆಯರನ್ನು ಕೇಳಿದರೆ, ಅನೇಕರು ಅಪರಿಚಿತರಿಂದ ಮೋಸ ಹೋಗಿರುವುದಿಲ್ಲ ಎಂಬುದು ತಿಳಿಯುತ್ತದೆ. ಅವರಿಗೆ ಚೆನ್ನಾಗಿ ತಿಳಿದಿರುವ, ಪರಿಚಿತರಾಗಿರುವ ಮತ್ತು ಅವರಿಗೆ ಆಪ್ತರಾಗಿರುವ 'ಸಹೋದರಿ', 'ಚಿಕ್ಕಮ್ಮ' ಅಥವಾ 'ತಾಯಿ' ಎಂದು ಕರೆಯಲ್ಪಡುವ ಜನರು ನೀಡಿದ ಭರವಸೆಯಿಂದಲೇ ಅವರು ಮೋಸ ಹೋಗಿರುತ್ತಾರೆ.

ಇತ್ತೀಚೆಗೆ ಇಂತಹ ವಂಚಕರು ಹೆಚ್ಚಾಗಿದ್ದಾರೆ. ವಿದೇಶಗಳಲ್ಲಿ ಉದ್ಯೋಗ ಕೊಡಿಸುವ ನೆಪದಲ್ಲಿ ವಂಚನೆ ನಡೆಯುತ್ತಿದೆ. ಸರ್ಕಾರಿ ಕೆಲಸ ಕೊಡಿಸುತ್ತೇವೆ ಎಂದು ಹೇಳಿ ಮೋಸ ಮಾಡುತ್ತಾರೆ. ಪ್ರಸಿದ್ಧ ಕಾಲೇಜಿನಲ್ಲಿ ಓದಲು ಸೀಟು ಸಿಗುತ್ತದೆ ಎಂದು ಹೇಳಿ ಮೋಸ ಮಾಡುತ್ತಾರೆ. ಈ ರೀತಿ ಮೋಸ ಮಾಡುವ ಯಾರೂ ಅಪರಿಚಿತರಲ್ಲ. ಅವರೇನೂ ಅಷ್ಟು ದೊಡ್ಡ ವ್ಯಕ್ತಿಯಲ್ಲ, 'ಈ ವ್ಯಕ್ತಿಗೆ ಇದು ಸಾಧ್ಯವಾಗುತ್ತದೆಯೇ, ಈ ರೀತಿ ಪ್ರಯತ್ನಿಸುವುದು ನ್ಯಾಯವೇ, ಇದು ಚೆನ್ನಾಗಿ ಆಗುತ್ತದೆ-ಯೇ' ಎಂಬ ಪ್ರಶ್ನೆಗಳನ್ನು ನಾವು ನಮ್ಮ ಮನಸ್ಸಿನಲ್ಲಿ ಎತ್ತಿದರೆ, ನಾವು ಮೋಸ ಹೋಗುವುದಿಲ್ಲ. ಆದರೆ ಕ್ಷಣಿಕ ಉತ್ಸಾಹ ಮತ್ತು ಬಯಕೆ ಯಾರನ್ನಾದರೂ ಕಟ್ಟಿ ಹಾಕಬಹುದು.

ಇದು ಹಣದ ಬಗ್ಗೆ ಅಲ್ಲ. ಅನೇಕ ಜನರು ಬಿಡಿಸಿಕೊಳ್ಳಬೇಕಾದ ಕ್ಷಣಗಳಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಉದಾಹರಣೆಗೆ, ಸ್ನೇಹಿತರ ಗುಂಪಿನಲ್ಲಿ, ಕೆಲವರಿಗೆ ಕುಡಿಯುವ ಅಭ್ಯಾಸವಿರುತ್ತದೆ ಮತ್ತು ತಮ್ಮಲ್ಲಿ ಯಾರಾದರೂ ಒಬ್ಬರು ಕುಡಿಯದಿದ್ದರೆ, ಇವರು ಅವರನ್ನು ಕುಡಿಯಲು ಒತ್ತಾಯಿಸುತ್ತಾರೆ. ಕಚೇರಿ ಪಾರ್ಟಿಯಲ್ಲಿ ಬಾಸ್ ಕುಡಿಯುತ್ತಾನೆ. ಬಾಸ್ ತಮ್ಮೊಂದಿಗೆ ಇರುವಾಗ ತಾವು ಕುಡಿಯದಿದ್ದರೆ, ಅವರು ಏನನ್ನಾದರೂ ಅಂದುಕೊಳ್ಳಬಹುದು ಎಂದು ಭಾವಿಸಿ ತಾವೂ ಕುಡಿಯುವ ಜನರಿದ್ದಾರೆ. ಅವರನ್ನು ಸಂತೋಷಪಡಿಸಲು ಇದು ಒಳ್ಳೆಯ ಅವಕಾಶ ಎಂದು ಭಾವಿಸಿ ಮದ್ಯ ಸೇವಿಸುವವರೂ ಇದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಕೆಟ್ಟ ಅಭ್ಯಾಸಗಳಿಗೆ ವ್ಯಸನಿಯಾಗುವ ಅನೇಕರಿಗೆ ತಾವು ಇದರಿಂದ ಬಿಡಿಸಿಕೊಳ್ಳಬೇಕಾದ ಅರಿವೂ ಇರುವುದಿಲ್ಲ!

ಮಹಿಳೆಯರು ಇನ್ನೊಂದು ರೀತಿಯಲ್ಲಿ ಮುಜುಗರವನ್ನು ಎದುರಿಸುತ್ತಾರೆ. 'ನನಗೆ ತಿಳಿದಿರುವ ಒಬ್ಬರು ತುಂಬಾ ಚೆನ್ನಾಗಿ ಉಪ್ಪಿನಕಾಯಿ ತಯಾರಿಸಿ ಮಾರುತ್ತಾರೆ' ಎಂದು ಹೇಳಿ ಇವರ ಮನೆಗೇ ಬಂದು, ಇವರ ತಲೆಗೆ ಕಟ್ಟಿ ಹೋಗುತ್ತಾರೆ. ಇವರಿಗೆ ಅದು ಇಷ್ಟವಿಲ್ಲದಿದ್ದರೂ, ಅವರಿಗೆ ಮುಜುಗರ ಉಂಟು ಮಾಡಬಾರದು ಎಂದು ಭಾವಿಸಿ ಅದನ್ನು ಖರೀದಿಸುತ್ತಾರೆ. ಹಪ್ಪಳದಿಂದ ಸೀರೆಯವರೆಗೂ ಈ ಪಟ್ಟಿ ಹೀಗೆಯೇ ಮುಂದುವರೆಯುತ್ತದೆ.

ಕೆಲವು ಮಹಿಳೆಯರು ಕಸೂತಿ ಅಥವಾ ಕಂಪ್ಯೂಟರ್‌ನಂತಹ ತರಗತಿಗಳಿಗೆ ಸೇರಿಕೊಳ್ಳುತ್ತಾರೆ. ಹೋಗಿ ಬರುವಾಗ ಜೊತೆಯಲ್ಲಿ ಇನ್ನೂ ಯಾರಾದರೂ ಇದ್ದರೆ ಚೆನ್ನಾಗಿರುತ್ತದೆ ಎಂದು ಭಾವಿಸಿ, ಅದರಲ್ಲಿ ಆಸಕ್ತಿಯೇ ಇಲ್ಲದ ವ್ಯಕ್ತಿಗಳನ್ನು ಕೂಡ ಬಲವಂತವಾಗಿ ಆ ತರಗತಿಗೆ ಸೇರಿಕೊಳ್ಳುವಂತೆ ಉತ್ತೇಜಿಸುತ್ತಾರೆ. ಕೆಲವು ಮಹಿಳೆಯರು ಮತ್ತು ಪುರುಷರು ತಾವಾಗಿಯೇ ಹೋಗಿ ಅವರು ಬೀಸುವ ಇಂತಹ ಬಲೆಯೊಳಗೆ ಬೀಳುತ್ತಾರೆ. ತಮ್ಮ ನೆರೆಹೊರೆಯವರು ಜಿಮ್‌ಗೆ ಹೋಗುವುದನ್ನು ನೋಡಿ ಮರುದಿನವೇ ತಾವೂ ಜಿಮ್‌ಗೆ ಸೇರುವ ಮಹಿಳೆಯರಿದ್ದಾರೆ. ತೂಕ ಕಳೆದುಕೊಳ್ಳುವ ಉದ್ದೇಶದಿಂದ ಸೈಕಲ್ ತುಳಿಯುವ ಗೆಳೆಯನನ್ನು ನೋಡಿ ತಾವೂ ಹೊಸದಾಗಿ ಸೈಕಲ್ ಖರೀದಿಸಿ ತುಳಿಯುವ ವ್ಯಕ್ತಿಗಳೂ ಇದ್ದಾರೆ. ಆರಂಭಿಕ ಉತ್ಸಾಹದ ನಂತರ ಅದು ಧೂಳು ಹಿಡಿಯುತ್ತಾ ಕುಳಿತು ಬಿಡುತ್ತದೆ.

ನಾವು ಉಳಿತಾಯದ ಬಗ್ಗೆ ಜಾಗರೂಕರಾಗಿರಬೇಕು. ಅದು ಒಂದು ರೂಪಾಯಿಯಾಗಿರಲಿ ಅಥವಾ ಒಂದು ಲಕ್ಷ ರೂಪಾಯಿಯಾಗಿರಲಿ, ನಮ್ಮ ಹಣವನ್ನು ಬುದ್ಧಿವಂತಿಕೆಯಿಂದ ಖರ್ಚು ಮಾಡಬೇಕು ಎಂಬ ಸ್ಪಷ್ಟತೆ ನಮಗಿರಬೇಕು. ಅದು ನಮ್ಮಲ್ಲಿದ್ದರೆ, ಬಿಡುಗಡೆ ಖಚಿತ. •

ಓದುಗರ ಪತ್ರಗಳು!



ಜೂನ್ ತಿಂಗಳ 'ಬಿಳುಪು ಭಾವನೆಗಳು' ಸಂಚಿಕೆಯನ್ನು ಓದಿದೆ. ತಂದೆಯಂದಿರ ದಿನದ ವಿಶೇಷಾಂಕವು ಭಾವಪರವಶತೆಯಿಂದ ಕೂಡಿತ್ತು. ನನ್ನ ತಂದೆ-ಯ ಬಗೆಗಿನ ನೆನಪುಗಳು ಮನದ ಮುಂದೆ ಹಾದು ಹೋದವು. ತಂದೆಯಂದಿರು ತಮ್ಮ ಮಕ್ಕಳಿಗಾಗಿ ಮಾಡುವ ತ್ಯಾಗಗಳು, ಅವರು ನಿರ್ವಹಿಸುವ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಟ್ಟು, ಎಂದಿಗೂ ಮರೆಯದಂತೆ ಮನಸ್ಸಿನಲ್ಲಿ ಉಳಿಯುವ ಹಾಗೆ ಬರೆದಿರುವ ಲೇಖನಗಳು ಹೃದಯಂಗಮವಾಗಿ ಮೂಡಿ ಬಂದಿವೆ

– ಸತ್ಯನಾರಾಯಣ ಜಿ. ಅರಸೀಕೆರೆ

ಬಿಳುಪು ಭಾವನೆಗಳು ನಿಯತಕಾಲಿಕದ ಜೂನ್ ತಿಂಗಳ ಸಂಚಿಕೆಯು ತಂದೆಯಂದಿರ ದಿನದ ವಿಶೇಷಾಂಕವಾಗಿ ಮೂಡಿ ಬಂದದ್ದು ಪ್ರಕಾಶಮಾನವಾಗಿತ್ತು. ನಮ್ಮನ್ನು ಬೆಳೆಸಿ, ಮನುಷ್ಯನನ್ನಾಗಿ ರೂಪಿಸಿ, ನಮಗೆ ಬೇಕಾದ್ದೆಲ್ಲವನ್ನೂ ಪೂರೈಸುವ ತಂದೆಯಂದಿರಿಗೆ ಇದಕ್ಕಿಂತಲೂ ಉತ್ತಮವಾಗಿ ಕೃತಜ್ಞತೆಯನ್ನು ಸಲ್ಲಿಸಲು ಸಾಧ್ಯವಿಲ್ಲ ಎಂದು ಭಾವಿಸುತ್ತೇನೆ.

– ಶಂಕರ ನಾರಾಯಣ, ಬೀದರ್.

ಪ್ರತಿ ತಿಂಗಳೂ ಬಿಳುಪು ಭಾವನೆಗಳು ಸಂಚಿಕೆಯನ್ನು ತುಂಬಾ ಆಸಕ್ತಿಯಿಂದ ಓದುತ್ತಿದ್ದೇನೆ. ಜೂನ್ ತಿಂಗಳ ಸಂಚಿಕೆಯನ್ನು ಕೂಡ ಅಷ್ಟೇ ಆಸಕ್ತಿಯಿಂದ ಓದಿದೆ. ತುಂಬಾ ಆಕರ್ಷಕವಾಗಿತ್ತು. ಪ್ರತಿಯೊಬ್ಬರ ಬದುಕಿನಲ್ಲೂ ಅವರ ತಂದೆಯಂದಿರೇ ಮಕ್ಕಳಿಗೆ ಹೀರೋಗಳಾಗಿರುತ್ತಾರೆ. ತಂದೆಯ ಪ್ರೀತಿ, ತ್ಯಾಗಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂಬುದನ್ನು ಆಳವಾಗಿ ತಿಳಿಸಿಕೊಟ್ಟ ಲೇಖನಗಳೊಂದಿಗೆ ಅತ್ಯುಪಯುಕ್ತವಾಗಿ ಈ ಸಂಚಿಕೆ ಮೂಡಿ ಬಂದಿದೆ! ಅದಕ್ಕಾಗಿ ತಮಗೆ ಅಭಿನಂದನೆಗಳು.

– ರವಿಕುಮಾರ್, ಎಂ., ಹಾಸನ

ಯಾವ ವಯಸ್ಸಿನಲ್ಲಾದರೂ ಕಲಿಯಲು ಅಡ್ಡಿಯಿಲ್ಲ. ಬಿಳುಪು ಸಂಚಿಕೆಯು ಪ್ರತಿ ತಿಂಗಳೂ ಹೊಸ ಹೊಸ ವಿಷಯಗಳನ್ನು ನಮಗೆ ಕಲಿಸಿ ಕೊಡುತ್ತಿದೆ. ಜನರಲ್ಲಿ ತಿಳಿವಳಿಕೆಯನ್ನು ಪ್ರಸಾರ ಮಾಡುವ ಇಂತಹುದೊಂದು ಸಂಚಿಕೆಯನ್ನು ಹೊರ ತರುತ್ತಿರುವ ಕಾರಣಕ್ಕಾಗಿ ರಾಮ್‌ರಾಜ್ ಸಂಸ್ಥೆಯ ಸಂಸ್ಥಾಪಕರಾದ ಕೆ.ಆರ್. ನಾಗರಾಜನ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು! ಎಲ್ಲರಲ್ಲೂ ಇದು ಸ್ಫೂರ್ತಿಯನ್ನು ತುಂಬುತ್ತದೆ.

– ಕೆ. ಶರ್ಮಿಳಾ, ಪಾಂಡವಪುರ, ಮಂಡ್ಯ.

ವೃದ್ಧಾಪ್ಯದಲ್ಲಿ ಬಿಡುಗಡೆ!

ಒಬ್ಬ ವ್ಯಕ್ತಿಗೆ ಐವತ್ತು ವರ್ಷ ದಾಟಿದಾಗಲೇ ಆತನಿಗೆ ಜೀವನದಲ್ಲಿ ಹೆಚ್ಚು ಗಳಿಸುವ ಅವಕಾಶ ಸಿಗುವುದು. ಅಷ್ಟು ವರ್ಷಗಳ ಅನುಭವದೊಂದಿಗೆ ಬರುವ ಬಡ್ತಿ ಮತ್ತು ಸಂಬಳದ ಹೆಚ್ಚಳವು ಅವನನ್ನು ಉನ್ನತ ಸ್ಥಾನಕ್ಕೂ ಕೊಂಡೊಯ್ಯುತ್ತದೆ. ಆ ಸಮಯದಲ್ಲಿ ಕುಟುಂಬದ ಜವಾಬ್ದಾರಿಗಳು ಸಹ ಹೆಚ್ಚಾಗುತ್ತವೆ. ಆ ಎಲ್ಲಾ ಜವಾಬ್ದಾರಿಗಳ ಹೊರೆಯನ್ನು ಹೊತ್ತುಕೊಂಡು ಬುಗುರಿಯಂತೆ ಸುತ್ತಬೇಕಾದ ಸನ್ನಿವೇಶವೂ ಅವನಿಗೆ ಎದುರಾಗುತ್ತದೆ. ದೇಹವು ಮನಸ್ಸಿನ ವೇಗವನ್ನು ನಿಭಾಯಿಸಲು ಸಾಧ್ಯವಿಲ್ಲ. ಆ ವಯಸ್ಸಿನ ವಿಶಿಷ್ಟವಾದ ದೈಹಿಕ ಕಾಯಿಲೆಗಳು ಒಂದೊಂದಾಗಿ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತವೆ.

ಎಲ್ಲವೂ ಸುಗಮವಾಗಿ ನಡೆಯುತ್ತಿರುವ ಸಮಯದಲ್ಲಿ, ನಿವೃತ್ತಿಯ ವಯಸ್ಸು ಇದ್ದಕ್ಕಿದ್ದಂತೆ ಸಮೀಪಿಸುತ್ತದೆ. ದೈಹಿಕ ಕಾಯಿಲೆಗಳು ಹೆಚ್ಚಾಗುತ್ತವೆ. ಅಲ್ಲಿಯವರೆಗೂ ನಿಮಗಿದ್ದ ಪ್ರಾಮುಖ್ಯತೆ ಕಡಿಮೆಯಾಗುವುದರಿಂದ ಉಂಟಾಗುವ ಖಿನ್ನತೆ, ಕೆಟ್ಟ ಅನುಭವಗಳಿಂದ ಉಂಟಾದ ಮಾನಸಿಕ ಬಳಲಿಕೆ ಮುಂತಾದ ಎಲ್ಲವನ್ನೂ ಜಯಿಸಿ ದೃಢನಿಶ್ಚಯದಿಂದ ಚೇತರಿಸಿಕೊಳ್ಳಬೇಕಾದ ಸಮಯ ಇದು.

ನಮ್ಮ ದೇಹ ಮತ್ತು ಮನಸ್ಸು ಪ್ರಬುದ್ಧವಾಗಲು ಪ್ರಾರಂಭಿಸಿವೆ ಎಂದು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ನಾವು ಎಲ್ಲಾ ಹೊರೆಗಳು ಮತ್ತು ಕರ್ತವ್ಯಗಳನ್ನು ಮುಗಿಸಿ ಅನುಭವವನ್ನು ಪಡೆದು–ಕೊಂಡು, ನಿಮಿರಿ ನಿಲ್ಲುವ ಸಮಯದಲ್ಲಿ ಎಲ್ಲರಿಗೂ ಎದುರಾಗುವ ಪರಿಸ್ಥಿತಿ ಇದು. ಈ ವಯಸ್ಸಿನಲ್ಲಿ ದೇಹವು ಹೇಗಿದ್ದರೂ, ನಿಮ್ಮ ಮನಸ್ಸನ್ನು ಯೌವನವಾಗಿರಿಸಿಕೊಂಡರೆ, ನೀವು ವೃದ್ಧಾಪ್ಯವನ್ನು ಉತ್ಸಾಹದಿಂದ ಎದುರಿಸಬಹುದು. ವೃದ್ಧಾಪ್ಯವು ದೇಹಕ್ಕೆ ಮಾತ್ರ ಬರುವ ಬದಲಾವಣೆಯಾಗಿದೆ. ಜೀವನದಲ್ಲಿ ನೀವು ಮರೆತಿರುವ ಮತ್ತು ಆನಂದಿಸಲು ಬಯಸುವ ಸುಂದರವಾದ ವಿಷಯಗಳನ್ನು ಮತ್ತೆ ಅನುಭವಿಸಲು ನೀವು ಸಿದ್ಧರಾದಾಗ, ಮನಸ್ಸು ಯೌವನವನ್ನು ಹೊಂದುತ್ತದೆ.



ನಾವು ಹೊಸದಾಗಿ ಏನನ್ನಾದರೂ ಕಲಿಯುವುದರಲ್ಲಿ ಮತ್ತು ಹೊಸ ಅನುಭವಗಳನ್ನು ಹುಡುಕುವುದರಲ್ಲಿ ಸಂತೋಷವಾಗಿದ್ದರೆ ನಮಗೆ ಎಂದಿಗೂ ವಯಸ್ಸಾಗುವುದಿಲ್ಲ. ಇಲ್ಲಿಯವರೆಗೆ ಯಂತ್ರದಂತೆ ಕೆಲಸ ಮಾಡುತ್ತಿದ್ದ ನಮ್ಮ ಮನಸ್ಸು ಮತ್ತು ದೇಹವು ವಿಶ್ರಾಂತಿಯನ್ನು ಪಡೆದುಕೊಳ್ಳಲು ಬಯಸುತ್ತದೆ ಎಂಬ ಅಂಶವನ್ನು ನಾವು ಆನಂದಿಸಬೇಕು ಮತ್ತು ಪ್ರಶಂಸಿಸಬೇಕು. ಬೆಳಿಗ್ಗೆ ನಡೆಯಲು ಹೋಗುವುದರಿಂದ ಹೊಸ ತಾಜಾ ಗಾಳಿಯನ್ನು ಉಸಿರಾಡಲು ಸಹಾಯವಾಗುತ್ತದೆ. ಮಾತ್ರವಲ್ಲದೆ ಮುಂಜಾನೆಯ ಸೌಂದರ್ಯವನ್ನು ಆನಂದಿಸಲೂ ಸಹ ಅವಕಾಶ ದೊರಕುತ್ತದೆ.

ನಿಮ್ಮ ಮೊಮ್ಮಕ್ಕಳನ್ನು ಮುದ್ದಿಸಿ. ಅವರಿಗೆ ಬೇಕಾದ್ದನ್ನು ಮಾಡಿ. ನೀವು ಮಕ್ಕಳ ಲೋಕಕ್ಕೆ ಹೋದಾಗ, ನೀವೇ ಮಗುವಾಗುವಿರಿ. 'ನಮಗೆ ಎಲ್ಲವೂ ತಿಳಿದಿದೆ' ಎಂಬ ದುರಹಂಕಾರವನ್ನು ನೀವು ಅಳಿಸಿ ಹಾಕಿ ಮಗುವಿನಂತೆ ಆದಲ್ಲಿ... ಅವರು ನಿಮ್ಮನ್ನು ಪ್ರೀತಿಯಿಂದ ತಮ್ಮ ಲೋಕದೊಳಕ್ಕೆ ಬಿಟ್ಟುಕೊಳ್ಳುತ್ತಾರೆ.

ಯಾರಿಗೂ ಅನಗತ್ಯ ಸಲಹೆ ನೀಡಬೇಡಿ. ನಿಮ್ಮ ಅನುಭವಗಳಿಂದ ಸಂಕ್ಷಿಪ್ತವಾಗಿ ಮಾರ್ಗದರ್ಶನ ನೀಡಿ. ಅದು ಸಲಹಾ ಸ್ವರದಲ್ಲಿ ಇರಬಾರದು. ಈ ವಯಸ್ಸಿನಲ್ಲಿ ನಾಲಿಗೆಯನ್ನು ಕಟ್ಟುಪಾಡಿನಲ್ಲಿ ಇಟ್ಟುಕೊಳ್ಳಬೇಕಾದುದು ಬಹಳ ಅವಶ್ಯಕ! ಇದುವರೆಗೂ ನೀವು ಆನಂದಿಸಿ ರುಚಿರುಚಿಯಾಗಿ ಸವಿಯುತ್ತಿದ್ದ ಹಾಗೆ ಈಗಲೂ ಬಯಸಿದ್ದನ್ನೆಲ್ಲ ತಿನ್ನುವ ಯೋಚನೆ ಮಾಡಬೇಡಿ. ನಿಮ್ಮ ದೇಹಕ್ಕೆ ಒಗ್ಗುವಂತಹ ಆಹಾರವನ್ನು ಮಾತ್ರ ಸೇವಿಸಿ. ಆಗ ವೈದ್ಯರ ಬಳಿಗೆ ಹೋಗುವ ಅಗತ್ಯವೇ ಬರುವುದಿಲ್ಲ.

ಕಲೆಗಳಿಗೆ ಮನಸ್ಸನ್ನು ಶಾಂತಗೊಳಿಸುವ ಶಕ್ತಿ ಇದೆ. ನೀವು ಇಷ್ಟಪಡುವ ಯಾವುದಾದರೂ ಒಂದು ಕಲಾ ಪ್ರಕಾರದಲ್ಲಿ ತೊಡಗಿಸಿಕೊಳ್ಳಿ. ಅದು ಸಂಗೀತ, ಚಿತ್ರಕಲೆ, ಧ್ಯಾನ, ಬರವಣಿಗೆ ಅಥವಾ ಇನ್ಯಾವುದೇ ಆಗಿರಬಹುದು. ನೀವು ಹೊಸದನ್ನೂ ಕಲಿಯಬಹುದು.

ಎಲ್ಲಕ್ಕಿಂತ ಮುಖ್ಯವಾಗಿ ಆರ್ಥಿಕ ಬಲ ನಿಮಗಿರಬೇಕು. ಕೊನೆಯವರೆಗೂ ಯಾರನ್ನೂ ನೀವು ಅವಲಂಬಿಸಬೇಕಾಗಿಲ್ಲದ ರೀತಿಯಲ್ಲಿ ನಿಮ್ಮ ಉಳಿತಾಯ ಇರಬೇಕು. ಅದು ನಿಮ್ಮ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟಿರಬೇಕು.

ಕೆಲಸ ಮಾಡದೇ ಇರುವಾಗ ವೃದ್ಧಾಪ್ಯದಲ್ಲಿ ನೆನಪುಗಳು ಅವರ ಮನಸ್ಸಿನಲ್ಲಿ ತುಂಬಿ ತುಳುಕಲು ಪ್ರಾರಂಭಿಸುತ್ತವೆ. ಹಿಂದಿನ ನೋವುಗಳು, ದ್ರೋಹಗಳು ಮತ್ತು ನಿರಾಕರಣೆಗಳ ಬಗ್ಗೆ ಅವರು ವಿಷಾದಿಸುತ್ತಾರೆ. ಅವುಗಳನ್ನು ಮರೆತರೆ ವೃದ್ಧಾಪ್ಯವು ಬಿಡುಗಡೆಯ ಸಮಯವೇ ಆಗಿರುತ್ತದೆ! ●

ಇವೆಲ್ಲ ಬಿಡುಗಡೆ ಅಲ್ಲವೇ ಅಲ್ಲ!

ಒಂದು ಸೇನಾ ದಳಕ್ಕೆ ಒಬ್ಬ ಹೊಸ ಕಮ್ಯಾಂಡರ್ ಅನ್ನು ನೇಮಿಸಲಾಯಿತು. ಮೊದಲ ದಿನ ಅವರು ಸೇನಾ ಶಿಬಿರದಲ್ಲಿ ರೌಂಡ್ ಹಾಕುತ್ತಿದ್ದಾಗ, ಒಂದೆಡೆ ಒಂದು ಬೆಂಚಿನ ಎರಡೂ ಬದಿಗಳಲ್ಲೂ ಇಬ್ಬರು ಸೈನಿಕರು ಕಾವಲು ಕಾಯುತ್ತಿದ್ದುದು ಕಾಣಿಸಿತು. ಆ ಬೆಂಚ್ ಖಾಲಿಯಾಗಿತ್ತು. ಸುತ್ತಮುತ್ತ ಕೂಡ ಯಾರೂ ಇರಲಿಲ್ಲ. 'ಇಲ್ಲೇಕೆ ಕಾವಲು ಕಾಯುತ್ತಿದ್ದೀರಿ?' ಎಂದು ಅವರು ಆ ಸೈನಿಕರನ್ನು ಕೇಳಿದರು. ಅವರು, 'ನಮಗೇನೂ ತಿಳಿಯದು. ಆದರೆ ಇಲ್ಲಿ ಇಬ್ಬರು ಸೈನಿಕರು ಯಾವಾಗಲೂ ಕಾವಲು ಕಾಯುವುದು ತುಂಬಾ ದಿನಗಳಿಂದಲೂ ವಾಡಿಕೆ' ಎಂದು ಅವರು ತಿಳಿಸಿದರು.

ಕಮ್ಯಾಂಡರ್‌ಗೆ ಏನೂ ತಿಳಿಯಲಿಲ್ಲ. ಅವರು ಗೊಂದಲಕ್ಕೊಳಗಾದರು. ತನಗಿಂತ ಹಿಂದೆ ಇಲ್ಲಿ ಕಮ್ಯಾಂಡರ್ ಆಗಿದ್ದವರ ಬಳಿ ಸಂದೇಹವನ್ನು ಕೇಳಿದರು. ಅವರು, 'ನನಗೂ ಕಾರಣ ತಿಳಿಯದು. ಆದರೆ ಅಲ್ಲಿ ಯಾವಾಗಲೂ ಇಬ್ಬರು ಸೈನಿಕರನ್ನು ಕಾವಲಿಗೆ ನೇಮಿಸುವುದು ನಿಯಮ ಎಂದು ನನಗೂ ಹೇಳಿದರು. ಆದ್ದರಿಂದ ನಾನೂ ಅದನ್ನು ಹಾಗೇ ಮುಂದುವರೆಸಿದೆ, ಅಷ್ಟೇ' ಎಂದರು. ಅವರಿಗಿಂತ ಹಿಂದಿದ್ದ ನಾಲ್ಕು ಕಮ್ಯಾಂಡರ್‌ಗಳ ಬಳಿಯೂ ಈ ಬಗ್ಗೆ ಪ್ರಶ್ನಿಸಲಾಯಿತು. ಅವರಿಗೂ ಏನೂ ತಿಳಿದಿರಲಿಲ್ಲ. ಐದನೇ ಕಮಾಂಡರ್‌ಗೆ ಕರೆ ಮಾಡಿ ವಿಷಯವನ್ನು ತಿಳಿಸಿದಾಗ ಅವರು ಅದನ್ನು ಕೇಳಿ ಆಘಾತಕ್ಕೊಳಗಾದರು. 'ಏನು? ನನ್ನ ನಿವೃತ್ತಿಯ ಕೊನೆಯ ದಿನದಂದು, ಕಾರ್ಮಿಕರು ಆ ಬೆಂಚ್‌ಗೆ ಹೊಸದಾಗಿ ಬಣ್ಣ ಬಳಿದರು ಮತ್ತು ಬಣ್ಣ ಒಣಗುವ ಮೊದಲು ಯಾರೂ ಬೆಂಚ್ ಮೇಲೆ ಕುಳಿತುಕೊಳ್ಳದಂತೆ ನೋಡಿಕೊಳ್ಳುವುದಕ್ಕಾಗಿ ನಾನು ಇಬ್ಬರು ಸೈನಿಕರನ್ನು ಅಲ್ಲಿ ಕಾವಲಿಗೆ ನಿಲ್ಲಿಸಿದೆ. ಆ ಬಣ್ಣ ಇನ್ನೂ ಒಣಗಲಿಲ್ಲವೇನು?' ಎಂದು ಅವರು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಇಂತಹ ಅರ್ಥಹೀನ ಆಚರಣೆಗಳು ಮತ್ತು ವಿಪರೀತದ ಕೆಲಸಗಳನ್ನು ಸ್ವಾತಂತ್ರ್ಯವೆಂದು ಪರಿಗಣಿಸಲಾಗುವುದಿಲ್ಲ. ಇವುಗಳೂ ಸ್ವಾತಂತ್ರ್ಯವಲ್ಲ?

- ಸಾರ್ವಜನಿಕ ಸ್ಥಳಗಳಲ್ಲಿ ಕೆಟ್ಟ ಪದಗಳನ್ನು ಮಾತನಾಡುವುದು ಸ್ವಾತಂತ್ರ್ಯವಲ್ಲ.
- ಯಾರನ್ನೂ ಮಾನಸಿಕವಾಗಿ ಅಥವಾ ದೈಹಿಕವಾಗಿ ಹಿಂಸಿಸುವುದು ಸ್ವಾತಂತ್ರ್ಯವಲ್ಲ.
- ನಮ್ಮ ಸ್ವಾರ್ಥಕ್ಕಾಗಿ ಪರಿಸರವನ್ನು ನಾಶ ಮಾಡುವುದು ಸ್ವಾತಂತ್ರ್ಯವಲ್ಲ.
- ಅಗತ್ಯಕ್ಕಿಂತ ಹೆಚ್ಚಾಗಿ ಯಾವುದನ್ನಾದರೂ ಬಳಸಿ ವ್ಯರ್ಥ ಮಾಡಿ ಮುಂದಿನ ಪೀಳಿಗೆಯನ್ನು ಬಿಕ್ಕಟ್ಟಿಗೆ ಸಿಲುಕಿಸುವುದು ಸ್ವಾತಂತ್ರ್ಯವಲ್ಲ.
- ಯಾವುದೇ ಪುರಾವೆಗಳಿಲ್ಲದೆ ಇತರರ ಬಗ್ಗೆ ದೂಷಿಸುವುದು ಸ್ವಾತಂತ್ರ್ಯವಲ್ಲ.
- ಸಾರ್ವಜನಿಕ ಸ್ಥಳಗಳನ್ನು ಕಲುಷಿತಗೊಳಿಸುವುದು ಮತ್ತು ಸರ್ಕಾರಿ ಆಸ್ತಿಗೆ ಹಾನಿ ಮಾಡುವುದೂ ಸ್ವಾತಂತ್ರ್ಯವಲ್ಲ.
- ಇತರರ ಭಾವನೆಗಳನ್ನು ನೋಯಿಸುವುದು ಸ್ವಾತಂತ್ರ್ಯವಲ್ಲ.
- ನಾವು ಸಂತೋಷದಿಂದ ಮೋಜು ಮಾಡಬೇಕು ಎಂಬ ಕಾರಣಕ್ಕಾಗಿ ಇತರರನ್ನು ಗೇಲಿ ಮಾಡಿ ಹಾಸ್ಯ ಮಾಡುವುದು ಸ್ವಾತಂತ್ರ್ಯವಲ್ಲ.
- 'ಇದೆಲ್ಲ ನನಗೆ ತಿಳಿದಿಲ್ಲದ ಕಾರಣ ನಾನು ಶಾಂತವಾಗಿದ್ದೇನೆ' ಎಂದುಕೊಂಡು ಮೂಲಭೂತ ವಿಷಯಗಳನ್ನು ಸಹ ತಿಳಿದುಕೊಳ್ಳದೆ ಅಸಂಬದ್ಧತೆಯಿಂದ ಜೀವನ ನಡೆಸುವುದು ಕೂಡ ಬಿಡುಗಡೆಯಲ್ಲ.
- 'ಯಾರ ತೊಂದರೆಯೂ ಇಲ್ಲದೆ ನಾನು ಒಂಟಿಯಾಗಿ ಶಾಂತಿಯಿಂದ ಇದ್ದೇನೆ' ಎಂದುಕೊಳ್ಳುವುದು ಕೂಡ ಸ್ವಾತಂತ್ರ್ಯವಲ್ಲ. ಒಂಟಿತನದ ಭಾವನೆಯು ಕ್ರಮೇಣ ಮಾನಸಿಕ ತೊಂದರೆಗಳನ್ನುಂಟು ಮಾಡಬಹುದು.
- ಅಸೂಯೆ ಪಡುವುದು ಮತ್ತು ಯಾವಾಗಲೂ ಇತರರ ಬಗ್ಗೆ ದೂರುವುದು ಕೂಡ ಸ್ವಾತಂತ್ರ್ಯದ ಭಾವವಲ್ಲ.
- ಇತರರನ್ನು ತಾರತಮ್ಯದಿಂದ ನೋಡಿ, ನಡೆದುಕೊಳ್ಳುವುದು ಮತ್ತು ಅಸಭ್ಯವಾಗಿ, ಅವರನ್ನು ನಡೆಸಿಕೊಳ್ಳುವುದು ಕೂಡ ಸ್ವಾತಂತ್ರ್ಯವಲ್ಲ.

‘ನೀವೇಕೆ ಎರಡು ವಾರಗಳಿಂದ ಶಾಲೆಗೆ ಬರಲಿಲ್ಲ? ಈ ಎರಡು ವಾರಗಳಲ್ಲಿ ಎಷ್ಟು ಪಾಠಗಳನ್ನು ಮುಗಿಸಬಹುದಿತ್ತು ಎಂದು ಗೊತ್ತಾ?’ ಹೀಗೆ ಕಠಿಣ ಸ್ವರದಲ್ಲಿ ಪ್ರಶ್ನೆ ಕೇಳಿದವರು ಮುಖ್ಯ ಶಿಕ್ಷಕರಲ್ಲ, ವಿದ್ಯಾರ್ಥಿನಿ. 8 ವರ್ಷದ ವಿದ್ಯಾರ್ಥಿನಿ. ಎರಡೂ ಕೈಗಳನ್ನೂ ಸೊಂಟದ ಮೇಲೆ ಇಟ್ಟುಕೊಂಡು ಹೀಗೆ ಪ್ರಶ್ನಿಸಿದ ಆ ಬಾಲಕಿಗೆ ಏನು ಉತ್ತರ ಕೊಡುವುದೆಂದು ತಿಳಿಯದೆ ತಡವರಿಸಿದಳು ಶಿಕ್ಷಕಿ. ಮೂರನೇ ತರಗತಿಗೆ ಕಲಿಸುವ ಆ ಶಿಕ್ಷಕಿ ದಯಾಳು. ಆದ್ದರಿಂದ ಮಕ್ಕಳು ಯಾವಾಗಲೂ ಅವಳ ಸುತ್ತಲೂ ಸುತ್ತುವರೆದುಕೊಳ್ಳುತ್ತಿದ್ದರು. ಅಧಿಕಾರಯುತವಾಗಿ ಅವಳೊಂದಿಗೆ ಮಾತನಾಡುತ್ತಿದ್ದರು.

ಅಂತರಾಳದಿಂದ ಬರುವ ಬಿಡುಗಡೆ!

ತಂದೆಯ ಹಠಾತ್ ಮರಣದ ಆಘಾತವನ್ನು ಸಹಿಸಿಕೊಳ್ಳುವುದು ಅವಳಿಂದ ಸಾಧ್ಯವಿರಲಿಲ್ಲ. ಅವಳು ತನ್ನ ತಾಯಿಯನ್ನು ಕೂಡ ಸಮಾಧಾನಪಡಿಸಬೇಕಾಗಿತ್ತು. ಈ ಕಾರಣಗಳಿಂದಾಗಿ ಆಕೆ ತನ್ನ ಊರಿಗೆ ಬಹಳ ದೂರ ಪ್ರಯಾಣ ಮಾಡಬೇಕಾಗಿ ಬಂತು. ಈ ಆಘಾತ ಮತ್ತು ಪ್ರಯಾಣದ ಆಯಾಸದಿಂದಾಗಿ ನಾಲ್ಕು ತಿಂಗಳ ಗರ್ಭಿಣಿಯಾಗಿದ್ದಾಗ ಆಕೆಗೆ ಗರ್ಭಪಾತವಾಯಿತು. ಆ ಸಮಯದಲ್ಲಿ, ಅವಳ ಪತಿ ವ್ಯವಹಾರದ ನಿಮಿತ್ತ ಬೇರೆ ಊರಿಗೆ ಹೋಗಿದ್ದರು. ಆದ್ದರಿಂದ ಅವಳು ತನ್ನ ನೋವು ಮತ್ತು ಸಂಕಟವನ್ನು ಹಂಚಿಕೊಳ್ಳಲು ಅವಳ ಜೊತೆ ಯಾರೂ ಇರಲಿಲ್ಲ... ಇವೆಲ್ಲವೂ ಎರಡು ವಾರಗಳ ಅವಧಿಯಲ್ಲಿ ಸಂಭವಿಸಿತ್ತು. ಇನ್ನು ಮುಂದೆ ರಜೆ ತೆಗೆದುಕೊಳ್ಳುವ ಅವಕಾಶವಿಲ್ಲದ ಕಾರಣದಿಂದಾಗಿ ಅವಳು ನೋವನ್ನು ಸಹಿಸಿಕೊಂಡು ಇಂದು ಶಾಲೆಗೆ ಬಂದಿದ್ದಳು. ಅವಳ ಮುಖವು ಉದ್ವಿಗ್ನವಾಗಿತ್ತು.

‘ನನಗೆ ಇದ್ದಕ್ಕಿದ್ದಂತೆ ಅನಾರೋಗ್ಯವಾಯಿತು’ ಎಂದು ಶಿಕ್ಷಕಿ ಆ ಬಾಲಕಿಗೆ ಸಂಕ್ಷಿಪ್ತವಾಗಿ ಉತ್ತರಿಸಿದಳು. ‘ಏನು... ನಿಮಗೆ ಜ್ವರ ಬಂದಿದೆಯೇ?’ ಎಂದು ಮತ್ತೊಬ್ಬ ಹುಡುಗಿ ಆತಂಕದಿಂದ ಕೇಳಿದಳು. ‘ಹೌದು, ಜ್ವರ ಬಂದಿತ್ತು... ಸರಿ, ಇನ್ನು ಪಾಠ ಆರಂಭಿಸೋಣವೇ?’ ಶಿಕ್ಷಕಿ ವಿಷಯವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸಿದಳು. ಕಳೆದ ಎರಡು ವಾರಗಳಲ್ಲಿ ನಡೆದ ಘಟನೆಗಳು ಅವಳ ನೆನಪಿನಲ್ಲಿ ಹಾದು ಹೋಗಿ ಕಣ್ಣುಗಳು ತುಂಬಿ ಬಂದವು. ಕಣ್ಣುಗಳಲ್ಲಿ ಮುತ್ತುಗಳಂತೆ ಕಣ್ಣೀರು ಸುರಿಯಿತು.

‘ಈಗ ನೀವು ಚೆನ್ನಾಗಿದ್ದೀರಾ?’ ಮೊದಲು ಪ್ರಶ್ನೆ ಕೇಳಿದ ಹುಡುಗಿ ಶಿಕ್ಷಕಿಯ ಬಳಿಗೆ ನಡೆದು ಬಂದು ಕೇಳಿದಳು. ‘ಹೌದು. ಈಗ ಪರವಾಗಿಲ್ಲ. ನಾವು ಇನ್ನು ಪಾಠವನ್ನು ಗಮನಿಸೋಣವೇ?’ ಶಿಕ್ಷಕಿ ತನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಕೇಳಿದಳು. ‘ನಿಮಗೆ ಸರಿಯಾಗಿದ್ದರೆ ನೀವೇಕೆ ಅಳುತ್ತಿದ್ದೀರಿ?’ ವಿದ್ಯಾರ್ಥಿನಿ ಕೇಳಿದಾಗ ಶಿಕ್ಷಕಿ ಇನ್ನಷ್ಟು ಅಳಲು ಪ್ರಾರಂಭಿಸಿದಳು. ‘ಸಾರಿ, ನನಗೆ ಆ ನೋವು ನೆನಪಾಯಿತು. ಅದಕ್ಕಾಗಿಯೇ ನನಗೆ ಕಣ್ಣಲ್ಲಿ ನೀರು ಬಂತು’ ಎಂದು ಅವಳು ಕಣ್ಣುಗಳನ್ನು ಒರೆಸಿಕೊಂಡು ನಗಲು ಪ್ರಯತ್ನಿಸಿದಳು. ಸಮಾಧಾನ ಮಾಡಿಕೊಂಡು ತನ್ನ ಕುರ್ಚಿಯಲ್ಲಿ ಕುಳಿತುಕೊಂಡಳು.

ಎಲ್ಲಾ ಹುಡುಗಿಯರೂ ಹತ್ತಿರ ಬಂದು

ಶಿಕ್ಷಕಿಯ ಕರಗಳನ್ನು ಬಲವಾಗಿ ಹಿಡಿದುಕೊಂಡರು. ಒಬ್ಬ ಹುಡುಗಿ ಜ್ವರವಿದೆಯೇ ಎಂದು ನೋಡಲು ಅವಳ ಕುತ್ತಿಗೆಯನ್ನು ಮುಟ್ಟಿದಳು. 'ನಿಮಗೆ ಹೊಟ್ಟೆ ನೋಯುತ್ತಿದೆಯೇ? ನನಗೂ ಸಹ ಅಸಹನೀಯ ಹೊಟ್ಟೆ ನೋವು ಬಂದಿತ್ತು. ಆಗ ನಾನೂ ಅಳುತ್ತಿದ್ದೆ. ನನ್ನ ಅಮ್ಮ ನನಗೆ ಕಷಾಯ ಮಾಡಿ ಕೊಟ್ಟರು. ನೋವು ತಕ್ಷಣ ಮಾಯವಾಯಿತು. ನಾನು ಹೋಗಿ ನನ್ನ ಅಮ್ಮನ ಬಳಿ ಸ್ವಲ್ಪ ಕಷಾಯ ಮಾಡಿಸಿಕೊಂಡು ಬರಲೇ?' ಎಂದು ಇನ್ನೊಬ್ಬ ಹುಡುಗಿ ಕೇಳಿದಳು. ಆ ಪ್ರೀತಿ ಅವಳನ್ನು ಇನ್ನಷ್ಟು ಅಳುವಂತೆ ಮಾಡಿತು.

'ಅಳಬೇಡಿ ಟೀಚರ್. ನಿಮಗೆ ನಿಮ್ಮ ತಾಯಿಯ ನೆನಪಾಯಿತೇ?' ಎಂದು ಎರಡು ಜಡೆಗಳ ಪುಟ್ಟ ಹುಡುಗಿ ಕೇಳಿದಳು. 'ಹೌದು, ನೆನಪಾಯಿತು' ಎಂದರು ಟೀಚರ್. 'ಅದಕ್ಕೇ ನಾನು ಈಗಲೇ ನನ್ನ ತಾಯಿಗೆ ಹೇಳಿಬಿಟ್ಟಿದ್ದೇನೆ ಮಿಸ್, ನಾನು ಮದುವೆಯೇ ಆಗುವುದಿಲ್ಲ' ಎಂದು. ಮದುವೆ ಮಾಡಿಕೊಂಡರೆ ನಂತರ ನಾನು ನನ್ನ ತಾಯಿಯನ್ನು ಬಿಟ್ಟು ಬೇರೆಯವರ ಮನೆಗೆ ಹೋಗಬೇಕಾಗುತ್ತದೆ. ಅಷ್ಟೆಲ್ಲಾ ತೊಂದರೆ ಏಕೆ?' ಎಂದು ಒಬ್ಬ ಪುಟ್ಟ ಹುಡುಗಿ ತಲೆ ಬಾಗಿಸಿಕೊಂಡು ಕೇಳಿದಾಗ ಟೀಚರ್‌ಗೆ ನಗು ಉಕ್ಕಿ ಬಂದು ಜೋರಾಗಿ ನಕ್ಕಳು.

'ಹೇ... ಟೀಚರ್ ನಕ್ಕರು' ಎಲ್ಲಾ ಹುಡುಗಿಯರೂ ಅವಳ ಹತ್ತಿರ ಬಂದು, ಅವಳನ್ನು ತಬ್ಬಿಕೊಂಡರು. ಒಬ್ಬ ಹುಡುಗಿ ಅವಳ ಹೊಟ್ಟೆಯನ್ನು ನಿಧಾನವಾಗಿ ಸವರಿದಳು. ಇನ್ನೊಬ್ಬ ಹುಡುಗಿ ಅವಳ ಹಣೆಯನ್ನು ಉಜ್ಜಿದಳು. 'ನೋಡಿ ಟೀಚರ್, ಈಗ ಎಲ್ಲಾ ನೋವೂ ಮಾಯವಾಗುತ್ತದೆ' ಎಂದು ಅವರೆಲ್ಲರೂ ಕೋರಸ್ ಆಗಿ ಹೇಳಿದರು!

'ಹೌದು, ಪ್ರಿಯ ಮಕ್ಕಳೇ! ನನಗೆ ಈಗ ಯಾವುದೇ ನೋವಿಲ್ಲ. ಎಲ್ಲವೂ ಹಾರಿ ಹೋಯಿತು' ಎಂದು ಶಿಕ್ಷಕಿ ವಿಶಾಲವಾಗಿ ನಗುತ್ತಾ ಹೇಳಿದಳು. ಆ ಮಕ್ಕಳ ಪ್ರೀತಿ ಮತ್ತು ಬೆಚ್ಚನೆಯ ಅಪ್ಪುಗೆಯಲ್ಲಿ ಅವಳ ನೋವು ಮತ್ತು ಒಂಟಿತನ ಎಲ್ಲವೂ ಮರೆತು ಹೋಗಿತ್ತು. ಅವಳು ತನ್ನ ಸಮಸ್ಯೆಗಳಿಂದ ಬಿಡುಗಡೆ ಹೊಂದಿದ್ದಳು. ಅವರ ಪರಿಶುದ್ಧ ಪ್ರೀತಿಯಲ್ಲಿ ಮುಳುಗಿ ಹೋದಳು.

ಒಳಗಿನಿಂದ ಉದ್ಭವಿಸುವ ಭಾವನೆಗಳು ಒಬ್ಬರ ಬಿಕ್ಕಟ್ಟು ಮತ್ತು ಸ್ವಾತಂತ್ರ್ಯದ ಭಾವನೆಗೆ ಕಾರಣಗಳಾಗಿರುತ್ತವೆ. ಪ್ರತಿಯೊಬ್ಬರಿಗೂ ಜೀವನದಲ್ಲಿ ಸಂತೋಷ, ಯಶಸ್ಸು ಮತ್ತು ಸಮೃದ್ಧಿಯಂತಹ ಹಲವು ವಿಷಯಗಳು ಬೇಕಾಗುತ್ತವೆ. ನಾವು ಪ್ರೀತಿ, ಸಮರ್ಪಣೆ ಮತ್ತು ಬದ್ಧತೆಯಿಂದ ಏನನ್ನಾದರೂ ಮಾಡಿದರೆ ಇವುಗಳನ್ನು ಸಾಧಿಸಬಹುದು. ನಮ್ಮ ದಾರಿಯಲ್ಲಿ ಯಾವುದೇ ಸಮಸ್ಯೆ ಬಂದರೂ, ನಾವು ಅದರಿಂದ ಹೇಗೆ ಚೇತರಿಸಿಕೊಳ್ಳುತ್ತೇವೆ ಎಂಬುದರಲ್ಲಿ ನಮ್ಮ ಸ್ವಾತಂತ್ರ್ಯ ಅಡಗಿದೆ.

ನಮ್ಮ ಜೀವನ ಪ್ರಯಾಣದ ಬಗ್ಗೆ ಯಾವುದೇ ನಿರ್ಬಂಧಗಳಿಲ್ಲದೆ ನಾವು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾದಾಗ, ನಾವು ಇನ್ನು ಮುಂದೆ ಭವಿಷ್ಯದ ಬಗ್ಗೆ ಭಯ ಪಡಬೇಕಾಗಿರುವುದಿಲ್ಲ. ನಿಜವಾದ ಸ್ವಾತಂತ್ರ್ಯವೆಂದರೆ ಈ ಜಗತ್ತು ನಿರೀಕ್ಷೆಗಳ ಹೆಸರಿನಲ್ಲಿ ನಮ್ಮ ಮೇಲೆ ಹೇರುವ ಎಲ್ಲಾ ಹೊರೆಗಳಿಂದ ಸ್ವಾತಂತ್ರ್ಯ ಹೊಂದುವುದೇ ಆಗಿದೆ.

ದೈಹಿಕವಾಗಿ ಹಾನಿಗೊಳಗಾಗಿ ಇತರರ ಸಹಾಯವಿಲ್ಲದೆ ಚಲಿಸಲು ಸಾಧ್ಯವಾಗದ ಅಂಗವಿಕಲ ವ್ಯಕ್ತಿಯ ಬಗ್ಗೆ ಯೋಚಿಸಿ ನೋಡಿ. ಅದೇ ಸಮಯದಲ್ಲಿ, ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೂ ಒಂದೇ ಕೆಲಸ ಮಾಡುವ ಕೈದಿಗಳು ಮತ್ತು ಉದ್ಯೋಗಿಯನ್ನು ಹೋಲಿಕೆ ಮಾಡಿ. ಈ ಮೂವರೂ ತಮಗೆ ಸ್ವಾತಂತ್ರ್ಯವಿಲ್ಲ ಎಂದು ಹೇಳುತ್ತಾರೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಗೂ ಅವರ ಸ್ವಾತಂತ್ರ್ಯ ವಿಭಿನ್ನವಾಗಿರುತ್ತದೆ.

'ಬೇರೆಯವರ ಸಹಾಯವಿಲ್ಲದೆ ನಾನು ನನ್ನ ಮನೆಯ ಹೊಸ್ತಿಲನ್ನು ಕೂಡ ದಾಟಲಾಗುವುದಿಲ್ಲ. ಒಂದು ಲೋಟ ನೀರು ಕುಡಿಯುವುದಕ್ಕೂ ನಾನು ಯಾರಾದಾದರೂ ಸಹಾಯಕ್ಕಾಗಿ ಕಾಯಬೇಕು' ಎಂದು ಒಬ್ಬ ಅಂಗವಿಕಲ ವ್ಯಕ್ತಿ ದುಃಖಿಸುತ್ತಾನೆ. 'ನನ್ನ ಬಳಿ ಎಲ್ಲವೂ ಇವೆ. ಆದರೂ ನಾನು ಹೀಗೆ ಒಂದೇ ಕೋಣೆಯಲ್ಲಿ ಬಂಧಿಯಾಗಿದ್ದೇನೆ... ಈ ಹೊಸ್ತಿಲಿನ ಆಚೆಗಿನ ಜಗತ್ತನ್ನು ನಾನು ನೋಡಲಾರೆ. ನನಗೆ ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಹೋಗುವ ಸ್ವಾತಂತ್ರ್ಯವಿಲ್ಲ' ಎಂದು ಖೈದಿ ದುಃಖಿಸುತ್ತಾನೆ.

ಒಬ್ಬ ಉದ್ಯೋಗಿ ಬೇರೆಯದೇ ರೀತಿಯಲ್ಲಿ ಚಿಂತಿಸುತ್ತಾನೆ. 'ಜೈಲಿನಲ್ಲಿದ್ದಿದ್ದರೂ ಸಹ, ನಾನು ದಿನವೂ ಮೂರು ಹೊತ್ತೂ ಶಾಂತಿ ಮತ್ತು ವಿಶ್ರಾಂತಿಯಿಂದ ಊಟ ಮಾಡುತ್ತಿದ್ದೆ. ಪ್ರತಿದಿನ ಬೆಳಿಗ್ಗೆ ಎದ್ದು, ಬಸ್ ಹಿಡಿದು ಕಚೇರಿಗೆ ಬಂದು, ದನದಂತೆ ಕೆಲಸ ಮಾಡಿ, ನಂತರ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ, ಮೈಕೈಯೆಲ್ಲ ನೋಯಿಸಿಕೊಂಡು ಮನೆಗೆ ಬರುವ ಈ ದುಃಖಕರ ಜೀವನವನ್ನು ನಾನು ನಡೆಸಬೇಕಾಗಿದೆ' ಎಂದು ಅವನು ವಿಷಾದಿಸುತ್ತಾನೆ.

ಎಲ್ಲರಿಗೂ ಕೆಲವು ವಿಷಯಗಳಲ್ಲಿ ಸ್ವಾತಂತ್ರ್ಯವಿದೆ. ಕೆಲವು ವಿಷಯಗಳಲ್ಲಿ ನಿರ್ಬಂಧಗಳಿವೆ. ನಮ್ಮ ಮನಸ್ಸು ಯೋಚಿಸುವಂತೆಯೇ ನಮ್ಮ ಜೀವನವೂ ಇರುತ್ತದೆ.

ಚಂಚಲತೆಯಿಲ್ಲದೆ ಗಳಿಸಬೇಕು ಸ್ವಾತಂತ್ರ್ಯವನ್ನು!

ಒಬ್ಬ ವ್ಯಕ್ತಿ ಪ್ರತಿದಿನ ಬೆಳಿಗ್ಗೆ ವಾಕಿಂಗ್ ಹೋಗುತ್ತಿದ್ದ. ಅವನು ವಾಕಿಂಗ್ ಮಾಡಲು ಉದ್ಯಾನವನಕ್ಕೆ ಹೋಗುತ್ತಿರಲಿಲ್ಲ. ಅವನು ತನ್ನ ಮನೆ ಇರುವ ಪ್ರದೇಶದ ಕೆಲವು ಬೀದಿಗಳಲ್ಲಿ ನಡೆಯುತ್ತಿದ್ದ. ಒಂದು ದಿನ, ಅವನು ತನ್ನ ಏರಿಯಾವನ್ನು ದಾಟಿಕೊಂಡು ಪಕ್ಕದ ಏರಿಯಾಗೆ ಹೋದ. ಅಲ್ಲಿ ಒಂದು ಸುಂದರವಾದ ಬಂಗಲೆ ಅವನ ಕಣ್ಣಿಗೆ ಬಿತ್ತು. ಕಟ್ಟಡಕ್ಕಿಂತ ಹೆಚ್ಚಾಗಿ ಅವನನ್ನು ಆಕರ್ಷಿಸಿದ್ದು ಕಾಂಪೌಂಡ್ ಗೋಡೆಯ ಉದ್ದಕ್ಕೂ ಇದ್ದ ಸಾಲು ಮರಗಳು.

ಅದು ಬೇರೆಯುವರ ಮನೆ ಅಂತ ಕೂಡ ಯೋಚಿಸದೆ, ಅವನು ಗೇಟ್ ತೆರೆದು ನೇರ ಒಳಗೆ ಹೋಗಿ ಆ ಮರವನ್ನು ನೋಡಿದ. ಅದು ಆಗ ತಾನೇ ಬೆಳೆಯಲು ಪ್ರಾರಂಭಿಸಿತ್ತು. ಹಸಿರು ಎಲೆಗಳು ಅರಳಿದ್ದವು ಮತ್ತು ಕೊಂಬೆಗಳು ಎಲ್ಲಾ ದಿಕ್ಕುಗಳಲ್ಲಿಯೂ ದಟ್ಟವಾಗಿ ಹರಡಿದ್ದವು. ಅಲ್ಲಲ್ಲಿ ಕೆಲವು ಹೂವುಗಳು ಅರಳಿದ್ದವು. ಅವನು ಅದರ ಸೌಂದರ್ಯವನ್ನು ನೋಡುತ್ತಿರುವಾಗ, 'ಯಾರದು... ಯಾರಲ್ಲಿ? ನಿಮಗೆ ಏನು ಬೇಕು?' ಎಂದು ಒಂದು ಕಠಿಣ ಧ್ವನಿ ಕೇಳಿಸಿತು. ಅದು ಮನೆಯ ಮಾಲೀಕರ ಧ್ವನಿ ಎಂಬುದು ಅವನಿಗೆ ಅರ್ಥವಾಯಿತು.

'ನಿಮ್ಮ ಮನೆ ಬಾಗಿಲಲ್ಲಿ ಸುಂದರವಾದ ಮರಗಳನ್ನು ನೋಡಿದೆ. ಈ ನಗರದಲ್ಲಿ ಇಂತಹ ಅಪರೂಪದ ಮರವನ್ನು ನೋಡಿ ನಿಮ್ಮನ್ನು ಹೊಗಳಬೇಕು ಎಂದು ಆಸೆಯಾಯಿತು' ಎಂದು ಈತ ಹೇಳಿದ. ಮನೆ ಮಾಲೀಕರು ಸಂತೋಷಪಟ್ಟರು. ಅವರು ಅವನನ್ನು ಒಳಗೆ ಆಹ್ವಾನಿಸಿ ಕಾಫಿ ನೀಡಿದರು. ಮಾತನಾಡಿದ ನಂತರ ಅವನು ಬಾಗಿಲಿನಿಂದ ಹೊರಗೆ ಹೋಗುವಾಗ ಮನೆ ಮಾಲೀಕರು ತಮ್ಮ ಸೇವಕನನ್ನು ಕರೆದು, 'ಈ ಮರದ ಕೊಂಬೆಗಳನ್ನು ಕತ್ತರಿಸು' ಎಂದು ಹೇಳಿದ್ದು ಅವನ ಕಿವಿಗೇ ಬಿತ್ತು.

ಈತ ಆ ಬೀದಿಯ ಕೊನೆವರೆಗೂ ನಡೆದುಕೊಂಡು ಹೋಗಿ, ಮತ್ತೆ ಹಿಂತಿರುಗಿ ಬರುವಷ್ಟರಲ್ಲಿ, ಮರದ ಕೊಂಬೆಗಳು ಕತ್ತರಿಸಲ್ಪಟ್ಟು ಬಾಗಿಲಿನ ಮುಂದೆ ಸುತ್ತಲೂ ಹರಡಿಬಿದ್ದಿದ್ದವು. ಅವನು ಒಳಗೆ ನೋಡಿದಾಗ, ಮರವು ತನ್ನ ಸೌಂದರ್ಯವನ್ನು ಕಳೆದುಕೊಂಡು ಕಳಾಹೀನವಾಗಿ ಕಾಣುತ್ತಿತ್ತು. ಸುತ್ತಲೂ ಹರಡಿದ್ದ ಎಲ್ಲಾ ಕೊಂಬೆಗಳನ್ನೂ ಕತ್ತರಿಸಿ ಹಾಕಿದ್ದರು. ಅವುಗಳ ಮೇಲಿದ್ದ ಹೂವುಗಳು ಮಾಯವಾಗಿದ್ದವು. ಬೆಳೆಯುತ್ತಿದ್ದ ಕೆಲವೇ ಕೆಲವು ಕೊಂಬೆಗಳನ್ನು ಮಾತ್ರ ಬಿಟ್ಟಿದ್ದರು. ಅದನ್ನು ನೋಡಿ ಇವನು ಆಘಾತಕ್ಕೊಳಗಾದ. 'ಈ ಮನೆಯ ಮಾಲೀಕರಿಗೆ ಏನಾಗಿದೆ? ಅವರಿಗೇನಾದರೂ ಹುಚ್ಚೇ? ನಾನು ಮರವನ್ನು ಹೊಗಳಿ ಮಾತನಾಡಿದ್ದರೂ ಅವರು ಅದನ್ನೂ ಲೆಕ್ಕಿಸದೆ ಹೀಗೆ ಕತ್ತರಿಸಿ ಹಾಕಿದ್ದಾರಲ್ಲ! ಅವರು ಹೀಗೆ ಏಕೆ ಮಾಡಿದರು? ನಾನು ಒಳಗೆ ಹೋಗಿ ಅವರ ಬಳಿ ಇದನ್ನು ಹೇಳದೆ ಇರಬಹುದಿತ್ತು' ಎಂದು ಅವನು ಅಂದುಕೊಂಡ.

ಅದಾದ ನಂತರ, ಅವನು ಎಂದಿಗೂ ಆ ಬೀದಿಯ ಕಡೆಗೇ ಹೋಗಲಿಲ್ಲ. ಸುಮಾರು ಮೂರು ತಿಂಗಳ ನಂತರ ಅವನ ಗೆಳೆಯರೊಬ್ಬರು ಆ ಕಡೆ ಬರುವಂತೆ ಫೋನ್‌ನಲ್ಲಿ ಹೇಳಿದುದರಿಂದ ಆ ರಸ್ತೆಯಲ್ಲಿ ನಡೆದುಕೊಂಡು ಹೋಗಬೇಕಾಗಿ ಬಂತು. ಫೋನಿನಲ್ಲಿ ಮಾತನಾಡುತ್ತಾ ಬರುವಾಗ ಅವನಿಗೆ ತಾನು ಯಾವ ರಸ್ತೆಯಲ್ಲಿ ನಡೆಯುತ್ತಿದ್ದೇನೆಂಬ

ಅರಿವಿರಲಿಲ್ಲ. ಫೋನ್ ಕಟ್ ಮಾಡಿದ ನಂತರವೇ ಅವನಿಗೆ ಅದು ಅರಿವಿಗೆ ಬಂದದ್ದು. 'ಸರಿ, ಇಲ್ಲಿಯವರೆಗೂ ಬಂದಾಯಿತು. ಇನ್ನು ಆ ಮನೆಯವರೆಗೂ ಹೋಗಿ ಆ ಮನೆಯನ್ನು ನೋಡೋಣ' ಎಂದು ಅವನಿಗನ್ನಿಸಿತು. ಆ ಮನೆಯನ್ನು ನೋಡಿ ಅವನಿಗೆ ವಿಸ್ಮಯವಾಯಿತು. ಆ ಮರವು ಈಗ ತುಂಬಾ ಎತ್ತರವಾಗಿ ಬೆಳೆದಿತ್ತು. ಅದು ಅದನ್ನು ಕಡಿದು ಹಾಕಲಾಗಿದೆ ಎಂಬ ಗುರುತೂ ಅಲ್ಲಿರಲಿಲ್ಲ.

ನೋಡಲು ಹಸಿರಾಗಿದ್ದು ತಂಪಾಗಿತ್ತು. ಮರದ ಮೇಲೆಲ್ಲಾ ಹೂವುಗಳು ಅರಳಿದ್ದವು. ಯಾರೋ ಮರವನ್ನು ಸುಂದರವಾಗಿ ಅಲಂಕರಿಸಿದಂತೆ ಕಾಣುತ್ತಿತ್ತು.

ಯಾವುದೋ ಕೆಲಸದ ಮೇಲೆ ಬಾಗಿಲಿಗೆ ಬಂದಿದ್ದ ಮನೆಯ ಮಾಲೀಕರು ಅವನನ್ನು ಗಮನಿಸಿದರು. 'ಹಲೋ... ಹಲೋ... ಸಾರ್ ನೀವು ಇತ್ತ ಕಡೆ ಬಹಳ ದಿನಗಳಿಂದ ಏಕೆ ಬಂದಿಲ್ಲ?' ಎಂದು ಕೇಳಿದರು. ಅವನು ಹಿಂಜರಿದ. 'ನನಗೆ ನಿಮ್ಮ ಮೇಲೆ ಕೋಪ ಬಂದಿದೆ. ಆ ದಿನ, ನಿಮ್ಮ ಬಂಗಲೆಯ ಬಾಗಿಲಲ್ಲಿರುವ ಮರ ಚೆನ್ನಾಗಿ ಬೆಳೆಯುತ್ತಿದೆ ಎಂದು ನಾನು ನಿಮಗೆ ಹೇಳಿದಾಗ, ನೀವು ಅದನ್ನು ಕತ್ತರಿಸಿ ತಳ್ಳಿದ್ದಿರಿ. ನನಗೆ ಆಘಾತವಾಯಿತು. ಅದಕ್ಕಾಗಿಯೇ ಇಲ್ಲಿಗೆ ಬಂದಿಲ್ಲ' ಎಂದು ಹೇಳಿದ. 'ಈಗ ?' ಅವರು ನಗುತ್ತಾ ಕೇಳಿದರು. 'ಮರ ಚೆನ್ನಾಗಿ ಬೆಳೆದಿದೆ. ಅದು ಬಹಳಷ್ಟು ಅರಳಿದೆ. ನನಗಾಗಿರುವ ಆಶ್ಚರ್ಯವನ್ನು ಹೇಳಲಾಗುತ್ತಿಲ್ಲ' ಎಂದು ಸಂದರ್ಶಕ ಹೇಳಿದ.

'ಆ ದಿನ ಎಲ್ಲಾ ದಿಕ್ಕುಗಳಲ್ಲಿಯೂ ಹರಡಿದ್ದ ಕೊಂಬೆಗಳನ್ನು ನಾನು ಕತ್ತರಿಸದಿದ್ದರೆ, ಮರವು ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿತ್ತು. ಹೂವುಗಳು ಸರಿಯಾಗಿ ಅರಳುತ್ತಿರಲಿಲ್ಲ ಮತ್ತು ಅದು ಎಲೆಗಳ ಕಾಡಾಗುತ್ತಿತ್ತು. ಆ ದಿನ ನಾನು ಅವುಗಳನ್ನು ಕತ್ತರಿಸಿದ್ದರಿಂದ, ಇಂದು ಮರವು ಅರಳಿ ನಿಂತಿದೆ' ಎಂದು ಮನೆಯವರು ಹೆಮ್ಮೆಯಿಂದ ಹೇಳಿದರು.

ಇದು ನಮ್ಮ ಜೀವನದಲ್ಲೂ ನಿಜವಾಗುತ್ತದೆ. ಜೀವನದ ಬೆಳವಣಿಗೆಗೆ ಗುರಿಯಾಗಿರುವ ಯಾವುದನ್ನಾದರೂ ತಲುಪಲು ಪ್ರಯತ್ನಿಸುವಾಗಲೂ, ಎಲ್ಲರೂ ಅದರ ಮೇಲೆ ಪೂರ್ಣ ಗಮನವನ್ನು ಕೇಂದ್ರೀಕರಿಸುವುದಿಲ್ಲ. ಕೆಲವು ಆಸೆಗಳು ಮತ್ತು ಪ್ರಲೋಭನೆಗಳು ಮನಸ್ಸನ್ನು ಚಂಚಲಗೊಳಿಸಿ ಅಲೆದಾಡುವಂತೆ ಮಾಡುತ್ತವೆ. ಈ ತಾಂತ್ರಿಕ ಯುಗದಲ್ಲಿ, ನಮ್ಮನ್ನು ಬೇರೆಡೆಗೆ ಸೆಳೆಯುವ ಹಲವು ವಿಷಯಗಳಿವೆ. ನಾವು ಅವುಗಳನ್ನು ನಿರ್ಲಕ್ಷಿಸಿ ನಮ್ಮ ಮನಸ್ಸನ್ನು ಕೇಂದ್ರೀಕರಿಸದಿದ್ದರೆ ಮತ್ತು ಕಷ್ಟಪಟ್ಟು ಕೆಲಸ ಮಾಡದಿದ್ದರೆ, ನಮ್ಮ ಎಲ್ಲಾ ಯೌವನ, ಪ್ರತಿಭೆ ಮತ್ತು ಜ್ಞಾನವು ವ್ಯರ್ಥವಾಗುತ್ತದೆ. ನೇರವಾಗಿ ಬೆಳೆದು ಸಂಪೂರ್ಣವಾಗಿ ಅರಳಿದ ಮರವು ಕಲಿಸುವ ಪಾಠ ಇದು.

ಸ್ವಾತಂತ್ರ್ಯ, ಪ್ರೀತಿ, ಸಂತೋಷ, ಅರಿವು ಮುಂತಾದ ಸಕಾರಾತ್ಮಕ ಭಾವನೆಗಳು ಒಂದೇ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹುಡುಕುವ ವಿಷಯಗಳು. ಸ್ವಾತಂತ್ರ್ಯವು ಹೊರಗಿನಿಂದ ಬರುವಂಥದ್ದಲ್ಲ! ಅದು ನಮ್ಮೊಳಗಿರುವಂಥದ್ದು. ಕಷ್ಟಪಟ್ಟು ದುಡಿದು ಹಲಸಿನ ಹಣ್ಣನ್ನು ಬೆಳೆಯುವ ಮೂಲಕ ಮಾತ್ರ ರುಚಿಕರವಾದ ಹಲಸಿನ ಹಣ್ಣನ್ನು ಪಡೆಯಬಹುದು. ಹೀಗಾಗಿ, ಸ್ವಾತಂತ್ರ್ಯಕ್ಕೆ ವಿರುದ್ಧವಾದ ಎಲ್ಲವನ್ನೂ ಮೀರಿ ನಮ್ಮೊಳಗೆ ಹುಡುಕುವ ಮೂಲಕ ಮಾತ್ರ ಸ್ವಾತಂತ್ರ್ಯವನ್ನು ಪಡೆಯಬಹುದು.

ಸ್ವಾತಂತ್ರ್ಯಕ್ಕೆ ವಿರುದ್ಧವಾದ ಕ್ರಿಯೆಗಳು ಯಾವುವು ಎಂಬುದನ್ನು ಕಂಡುಕೊಳ್ಳಿ ಮತ್ತು ಅವುಗಳಿಂದ ನಿಮ್ಮನ್ನು ಬಿಡುಗಡೆಗೊಳಿಸಿಕೊಳ್ಳಿ. ನಂತರ ನಿಮ್ಮಲ್ಲಿ ಸ್ವಾಭಾವಿಕವಾಗಿ ಉಳಿಯುವುದು ನಿಮ್ಮ ಸ್ವಾತಂತ್ರ್ಯ ಮಾತ್ರ. ಏನಾದರೂ ನಿಮ್ಮಲ್ಲಿ ಇಲ್ಲದಿದ್ದಾಗ ಅಥವಾ ಕಳೆದು ಹೋದಾಗ ಮಾತ್ರ ನೀವು ಅದನ್ನು ಹೊರಗಿನಿಂದ ತರಬಹುದು. ಸಾಮಾನ್ಯ ಜೀವನದಲ್ಲಿ ನೀವು ಎಂದಿಗೂ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ.

ಧೂಳು, ಮಣ್ಣು ಮತ್ತು ಬಂಡೆಗಳಿಗಿಂತ ವಜ್ರವು ವಿಭಿನ್ನವಾಗಿದೆ. ಅದರ ಹೊಳಪು ತೇಜಸ್ಸು ಉಳಿದವುಗಳಿಗಿರುವುದಿಲ್ಲ. ಹಾಗೆಯೇ ನಿಮ್ಮ ಸ್ವಾತಂತ್ರ್ಯವೂ ಹೊಳೆಯುತ್ತಿರುತ್ತದೆ. ವಜ್ರವು ಹೊಳಪು ಪಡೆದಂತೆ, ನಿಮ್ಮ ಸ್ವಾತಂತ್ರ್ಯವೂ ಅರಳಬೇಕು. ಅನಗತ್ಯ ಮಾನಸಿಕ ಅಡೆತಡೆಗಳನ್ನು ತೆಗೆದು ಹಾಕುವುದು ಮನಸ್ಸು ಸ್ವಾತಂತ್ರ್ಯದಲ್ಲಿ ಅರಳಲು ಇರುವ ಏಕೈಕ ಮಾರ್ಗವಾಗಿದೆ. ●

ಬಿಳುಪು

ಭಾವನೆಗಳು

ಸಂಚಿಕೆ 8 ಸಂಪುಟ 3
ಆಗಸ್ಟ್ 2025

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
ಕೆ.ಆರ್. ನಾಗರಾಜನ್

ಲೇಖಕರು
ತ.ಸೆ. ಜ್ಞಾನವೇಲ್

ಗೌರವ ಸಂಪಾದಕರು ಮತ್ತು ಕನ್ನಡಾನುವಾದ
ಡಾ. ತಮಿಳ್ ಸೆಲ್ವಿ
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ಪುಸ್ತಕ ರಚನೆ ಮತ್ತು ವಿನ್ಯಾಸ
ತರು ಮೀಡಿಯಾ (ಪ್ರೈ) ಲಿ.,
ಎ2, ನೆಲಮಹಡಿ,
ಸಂ:110, ಟ್ರಿನಿಟಿ ಕಾಂಪ್ಲೆಕ್ಸ್,
4ನೇ ಅವೆನ್ಯೂ, ಅಶೋಕ್ ನಗರ್,
ಚೆನ್ನೈ– 83.
ದೂರವಾಣಿ: 9952920801

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

ಆ ಕಾಲದ ಸ್ವಾತಂತ್ರ್ಯ!

ಕೆಲವರು 'ನಾವು ಮಕ್ಕಳಾಗಿದ್ದಾಗ ಸ್ವತಂತ್ರರಾಗಿದ್ದೆವು' ಎಂದು ಭಾವಿಸುತ್ತಾರೆ. ಇನ್ನು ಕೆಲವರು 'ಆ ಕಾಲದ ಜನರು ಸ್ವತಂತ್ರವಾಗಿ ಬದುಕುತ್ತಿದ್ದರು. ನಾವು ಜೈಲಿನಲ್ಲಿ ಇರುವವರಂತೆ ಬದುಕುತ್ತಿದ್ದೇವೆ' ಎಂದು ದುಃಖಿಸುತ್ತಾರೆ.

ಆದಿ ಮಾನವರ ಗುಹಾ ಜೀವನ ನಮಗೆ ಮುಕ್ತವಾಗಿ ಕಾಣಿಸಬಹುದು. ಅವರು ಕೆಲಸಕ್ಕೆ ಹೋಗಿ ಹಣ ಸಂಪಾದಿಸುವ ಅಗತ್ಯವಿರಲಿಲ್ಲ. ಸಾಲದ ಸಮಸ್ಯೆಗಳಿರಲಿಲ್ಲ, ಇಎಂಐ ಸಮಸ್ಯೆಗಳಿರಲಿಲ್ಲ. ಯಾವುದೋ ಗುಹೆಯಲ್ಲಿ ವಾಸಿಸುತ್ತಾ, ದೊರಕಿದ ಯಾವುದನ್ನೋ ಉಡುಪನ್ನಾಗಿ ಧರಿಸಿಕೊಂಡು ಮತ್ತು ಕೆಲವು ಪ್ರಾಣಿಗಳನ್ನು ಬೇಟೆ–ಯಾಡಿ ತಿನ್ನುವ ಅವರ ಜೀವನ ನಮಗೆ ಸ್ವತಂತ್ರ ಜೀವನದಂತೆ ಕಾಣಿಸಬಹುದು. ಆದರೆ ಆ ಜೀವನದಲ್ಲಿ ಇದ್ದ ಸಮಸ್ಯೆಗಳ ಬಗ್ಗೆ ಯೋಚಿಸಿ. ಯಾವುದೋ ಕಾಡುಪ್ರಾಣಿಯ ದಾಳಿಗೆ ಹೆದರಿ ಬದುಕಿಯೂ ಸತ್ತು, ತಿನ್ನಲು ಏನೂ ಸಿಗದೆ ಹಲವು ದಿನಗಳ ಕಾಲ ಹಸಿವಿನಿಂದ ಬಳಲಿ, ಆಹಾರ ಯಾವುದು ವಿಷ ಯಾವುದು ಎಂದು ತಿಳಿಯದೆ ಸಿಕ್ಕಿದ್ದನ್ನೆಲ್ಲಾ ತಿಂದು, ಕಾಲ್ನಡಿಗೆಯಲ್ಲಿ ಅಲೆದಾಡುತ್ತಿದ್ದ ಆ ಕಾಲವನ್ನು ಯಾರೂ ಊಹಿಸಿಕೊಳ್ಳಲಾಗುವುದಿಲ್ಲ. ಅಂತಹ ಜೀವನಕ್ಕೆ ಮರಳಲು ಎಂದಿಗೂ ಯಾರೂ ಬಯಸುವುದಿಲ್ಲ.

ಮನೆ ಕಟ್ಟುವುದು, ಹಳ್ಳಿಗಳಲ್ಲಿ ಸಂಬಂಧಿಕರೊಂದಿಗೆ ವಾಸಿಸುವುದು ಮತ್ತು ಕೃಷಿ ಮಾಡಲು ಒಗ್ಗಿಕೊಂಡಾಗ ಮಾತ್ರ ಮಾನವ ಜೀವನದಲ್ಲಿ ಶಾಂತಿ ಬಂದಿತು. ಕುಟುಂಬದ ರಚನೆ ಮತ್ತು ಜವಾಬ್ದಾರಿಗಳು ನಮ್ಮನ್ನು ಜೈಲಿನಲ್ಲಿರಿಸುತ್ತವೆ ಎಂದು ನಾವು ಭಾವಿಸಬಹುದು. ಆದರೆ ಅದು ಮನಸ್ಸಿಗೆ ಸ್ವಾತಂತ್ರ್ಯವನ್ನು ನೀಡಿತು ಮತ್ತು ಮಾನವರು ಅನೇಕ ಆವಿಷ್ಕಾರಗಳನ್ನು ಸೃಷ್ಟಿಸಲು ಕಾರಣವಾಯಿತು. ಇಂದಿನ ಆಧುನಿಕ ಜೀವನವು ಆ ಸ್ವಾತಂತ್ರ್ಯದ ಕೊಡುಗೆಯಾಗಿದೆ!



ಸ್ವಾತಂತ್ರ್ಯ ಎಂಬುದು ಸಹಜವಾದುದು!

ಮನುಷ್ಯರಿಗೆ ಸ್ವಭಾವತಃ ಸ್ವಾತಂತ್ರ್ಯದ ಭಾವನೆ ಇರುತ್ತದೆ. ಅದಕ್ಕಾಗಿಯೇ ಸರ್ಕಾರವು ಯಾರನ್ನಾದರೂ ಶಿಕ್ಷಿಸಲು ಬಯಸಿದಾಗ ಅವರನ್ನು ಜೈಲಿಗೆ ಹಾಕುತ್ತದೆ. ಯಾರಿಗಾದರೂ ನೀಡಬಹುದಾದ ದೊಡ್ಡ ಶಿಕ್ಷೆಯೆಂದರೆ ಅವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು. ಆ ಸ್ವಾತಂತ್ರ್ಯವನ್ನು ಕಸಿದುಕೊಂಡರೆ, ಅವರು ಪ್ರತಿ ನಿಮಿಷವೂ ಬಳಲುತ್ತಾರೆ.

ನೀವು ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ, ಯಾವುದೇ ನಿರ್ಬಂಧಗಳಿಲ್ಲದೆ ಹೋಗುವುದಕ್ಕಿಂತ ದೊಡ್ಡ ಸ್ವಾತಂತ್ರ್ಯ ಇನ್ನೊಂದಿಲ್ಲ. ನಾಲ್ಕು ಗೋಡೆಗಳ ಒಳಗೆ ಬಂಧಿಯಾಗಿ, ದಿನವಿಡೀ ಮುಳ್ಳುತಂತಿಯ ಮೂಲಕ ವರಾಂಡಾವನ್ನು ನೋಡುವುದಕ್ಕಿಂತ ಕೆಟ್ಟ ಶಿಕ್ಷೆ ಇನ್ನೊಂದಿಲ್ಲ. ಅದು ಯಾರ ಆತ್ಮವನ್ನೂ ಮುರಿಯುತ್ತದೆ.

ಅನೇಕ ಜನರು ಕಲ್ಪನಾ ಲೋಕದಲ್ಲಿ ವಾಸಿಸುತ್ತಾರೆ, ತಮ್ಮನ್ನು ತಾವು ದುರ್ಬಲರು ಮತ್ತು ಅಸಮರ್ಥರು ಎಂದು ಕಲ್ಪಿಸಿಕೊಳ್ಳುತ್ತಾರೆ ಮತ್ತು ತಮ್ಮದೇ ಆದ ಕನಸುಗಳ ಸೆರೆಮನೆಯಲ್ಲಿ ವಾಸಿಸುತ್ತಾರೆ. ನಮ್ಮ ಆಲೋಚನೆಗಳು ನಮ್ಮನ್ನು ಬಂಧಿಸಲು ನಾವು ಬಿಡಬಾರದು. ನಾವು ನಮ್ಮಿಂದ ಬಿಡುಗಡೆ ಹೊಂದಿದಾಗ, ಈ ಜೈಲಿನ ಬಾಗಿಲು ನುಚ್ಚು ನೂರಾಗುತ್ತದೆ.

ಮನಸ್ಸಿನ ಸ್ವಾತಂತ್ರ್ಯ!

ಒಬ್ಬ ಮನುಷ್ಯ ಕಾಡಿನ ಮೂಲಕ ನಡೆದುಕೊಂಡು ಹೋಗುತ್ತಿದ್ದ. ಆಗ, ಯಾರೋ 'ಸ್ವಾತಂತ್ರ್ಯ... ಸ್ವಾತಂತ್ರ್ಯ...' ಎಂದು ಕೂಗುತ್ತಿರುವುದು ಅವನಿಗೆ ಕೇಳಿಸಿತು. ಆ ಧ್ವನಿ ಹತ್ತಿರದ ಗುಹೆಯಿಂದ ಬಂದಿತು ಮತ್ತು ಅವನು ಅದರ ಹತ್ತಿರ ಬಂದಾಗ ಅದು ಒಂದು ಗಿಣಿಯ ಧ್ವನಿ ಎಂದು ಅವನಿಗೆ ತಿಳಿಯಿತು. ಅವನು ಗುಹೆಯೊಳಗೆ ಹೋದಾಗ, ಚಿನ್ನದ ಪಂಜರದಲ್ಲಿ ಬಂಧಿಸಲ್ಪಟ್ಟಿದ್ದ ಸುಂದರವಾದ ಒಂದು ಗಿಣಿಯನ್ನು ನೋಡಿದ. ಗುಹೆಯಲ್ಲಿ ಬೇರೆ ಯಾರೂ ಇರಲಿಲ್ಲ. ಅದನ್ನು ಬಂಧಿಸಿದ ವ್ಯಕ್ತಿ ಬರುವ ಮೊದಲು ಗಿಣಿಯನ್ನು ಬಿಡಿಸಲು ಅವನು ಬಯಸಿದ. ಅವನು ಕಷ್ಟಪಟ್ಟು ಪಂಜರದ ಬಾಗಿಲನ್ನು ತೆರೆದ. ಆದರೆ ಗಿಣೀ ಹೊರಗೆ ಹಾರಲಿಲ್ಲ. 'ನೀನು ಕೇಳಿದ ಸ್ವಾತಂತ್ರ್ಯ ನಿನಗೆ ಸಿಕ್ಕಿದೆ. ಹಾರಿ ಹೋಗು' ಎಂದು ಅವನು ಹೇಳಿದ. ಆದರೂ ಅದು ಇನ್ನೂ ಅಲ್ಲೇ ಕುಳಿತು, 'ಸ್ವಾತಂತ್ರ್ಯ... ಸ್ವಾತಂತ್ರ್ಯ...' ಎಂದು ಕೂಗುತ್ತಿತ್ತು.

ಅವನು ತನ್ನ ಕೈಯನ್ನು ಪಂಜರದಲ್ಲಿ ಇಟ್ಟು ಅದನ್ನು ಹಿಡಿದು ಹೊರಗೆ ತೆಗೆದು ಹಾರಿಸಲು ಪ್ರಯತ್ನಿಸಿದ. ಅದು ತನ್ನ ಚೂಪಾದ ಉಗುರುಗಳಿಂದ ಅವನ ಕೈಯನ್ನು ಪರಚಿತು. ಆದರೂ, ಅದನ್ನು ಉಳಿಸಿದ ಸಂತೋಷದಲ್ಲಿ ಅವನು ಅದನ್ನು ಮೇಲಕ್ಕೆತ್ತಿ ಎಸೆದು ಹಾರಿಸಲು ನೋಡಿದ. ಅದು ಮತ್ತೆ ಹಾರಿ ಪಂಜರದಲ್ಲಿ ಕುಳಿತು, 'ಸ್ವಾತಂತ್ರ್ಯ... ಸ್ವಾತಂತ್ರ್ಯ...' ಎಂದು ಕೂಗಿತು. ನಾವು ಕೂಡ ಹೀಗೆಯೇ ನಮ್ಮ ಮನಸ್ಸನ್ನು ಸರಪಳಿಯಿಂದ ಬಂಧಿಸಿಕೊಳ್ಳುತ್ತೇವೆ ಮತ್ತು ಅವುಗಳನ್ನು ಅನೇಕ ವಿಷಯಗಳಿಂದ ಕಟ್ಟಿ ಹಾಕುತ್ತೇವೆ ಮತ್ತು ತಮ್ಮ ಸ್ವಾತಂತ್ರ್ಯವನ್ನು ಬಯಸುವವರು ಎಂದು ಭಾವಿಸುತ್ತೇವೆ. ಆ ಸರಪಳಿಗಳನ್ನು ಮುರಿಯುವುದೇ ಮನಸ್ಸಿನ ಸ್ವಾತಂತ್ರ್ಯ.

ಸ್ವಾತಂತ್ರ್ಯದ ಜವಾಬ್ದಾರಿಗಳು!

ಸ್ವಾತಂತ್ರ್ಯವನ್ನು ಜವಾಬ್ದಾರಿಗಳ ಹೊರೆಯಿಂದ ಮುಕ್ತ ಎಂದು ಪರಿಗಣಿಸಲಾಗುವುದಿಲ್ಲ. ಕರ್ತವ್ಯಗಳನ್ನು ನಿರ್ವಹಿಸುವ ಅಗತ್ಯವಿಲ್ಲದ ಜೀವನವನ್ನು ಮುಕ್ತ ಜೀವನ ಎಂದು ಕರೆಯಲಾಗುವುದಿಲ್ಲ. ಮುಕ್ತ ಜೀವನದ ಅರ್ಥವೆಂದರೆ ನಮಗೆ ಲಭ್ಯವಿರುವ ಅವಕಾಶಗಳು ಮತ್ತು ಸೌಲಭ್ಯಗಳನ್ನು ಬಳಸಿಕೊಂಡೇ ನಾವು ನಮ್ಮಿಂದ ಸಾಧ್ಯವಾಗುವ ಸಾಧನೆಯನ್ನು ಸಾಧಿಸುವುದು.

ನಾವು ಒಂದು ನಿರ್ಧಾರ ತೆಗೆದು-ಕೊಂಡು ಒಂದು ಕ್ರಮ ಕೈಗೊಂಡರೆ, ಅದರ ಪರಿಣಾಮಗಳಿಗೆ ನಾವೇ ಜವಾಬ್ದಾರರಾಗುತ್ತೇವೆ. ಅದು ಒಳ್ಳೆಯ ಫಲಿತಾಂಶವಾಗಲಿ ಅಥವಾ ಕೆಟ್ಟ ಫಲಿತಾಂಶವಾಗಲಿ, ಆ ಫಲಿತಾಂಶಕ್ಕೆ ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಪರಿಣಾಮಗಳ ಸ್ವರೂಪವನ್ನು ತಿಳಿದುಕೊಳ್ಳುವುದರಲ್ಲಿ ಮತ್ತು ಕ್ರಿಯೆಗಳನ್ನು ಸ್ವಇಚ್ಛೆಯಿಂದ ಮಾಡುವುದರಲ್ಲೇ ನಮ್ಮ ಸ್ವಾತಂತ್ರ್ಯ ಅಡಗಿದೆ.

ಬಿಡುಗಡೆ ಎನ್ನುವುದು...

- ಪ್ರತಿಯೊಂದು ವಿಷಯದಲ್ಲೂ ನಾವು ಇಷ್ಟ ಪಡುವುದನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ನಮಗಿದೆ.
- ನಾವು ಇಷ್ಟ ಪಡುವ ನಿರ್ಣಯವನ್ನು, ನಾವು ಇಷ್ಟ ಪಡುವ ಸಮಯದಲ್ಲಿ, ನಮ್ಮಿಷ್ಟದಂತೆ ತೆಗೆದುಕೊಳ್ಳುವ ಅವಕಾಶವನ್ನು ಹೊಂದಿರುವುದು
- ನಮ್ಮ ಜೊತೆ ಇರುವ ಎಲ್ಲಾ ಸಹ ಮಾನವರಂತೆ ನಮಗೂ ಸಮಾನ ಹಕ್ಕುಗಳಿವೆ.
- ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವ ಶಕ್ತಿಯನ್ನು ಪಡೆದುಕೊಳ್ಳಬೇಕು.
- ಒತ್ತಡ, ಆತಂಕ, ಉದ್ವೇಗ, ಅಸೂಯೆ ಮತ್ತು ಅಸಹಾಯಕತೆಯಂತಹ ನಕಾರಾತ್ಮಕ ಭಾವನೆಗಳಿಲ್ಲದೆ ಬದುಕಲು ಸಾಧ್ಯವಾಗುತ್ತದೆ.
- ಸದಾ ತಾವೂ ದುಃಖದಲ್ಲಿ ಮುಳುಗಿರುವ ಮತ್ತು ನಮ್ಮನ್ನೂ ದುಃಖ ಮತ್ತು ಖಿನ್ನತೆಗೆ ತಳ್ಳುವ ಜನರಿಂದ ಸ್ವಾಭಾವಿಕವಾಗಿ ದೂರವಿರಲು ಸಾಧ್ಯವಾಗುತ್ತದೆ.
- ಯಾವುದೇ ಅಪಹಾಸ್ಯ, ನಿಂದನೆ ಅಥವಾ ದೂರುಗಳಿಲ್ಲದೆ ಶಾಂತಿಯುತವಾಗಿ ಬದುಕುವ ಅವಕಾಶವನ್ನು ಹೊಂದಿರುವುದು.
- ನಾವು ಬಯಸಿದ ಜೀವನವನ್ನು ನಡೆಸುವ ವರವನ್ನು ಹೊಂದಿರುವುದು.

ಸಮಸ್ಯೆಗಳಿಂದ ಬಿಡುಗಡೆ!

ಒಂದು ಚಲನಚಿತ್ರದಲ್ಲಿ ಒಬ್ಬ ವ್ಯಕ್ತಿಯು ತನ್ನ ತಲೆಯಿಂದ ಪಾದದವರೆಗೆ ಇರುವ ಎಲ್ಲಾ ಕಾಯಿಲೆಗಳನ್ನು ಪಟ್ಟಿ ಮಾಡಿ ಹೇಳಿ, ಅವುಗಳನ್ನು ಗುಣಪಡಿಸಲು ಒಂದೇ ಒಂದು ಔಷಧವನ್ನು ಕೇಳುವ ಹಾಸ್ಯಮಯ ದೃಶ್ಯ ಬರುತ್ತದೆ. ಅಂತೆಯೇ ಒಬ್ಬ ರೈತ ತನ್ನ ಎಲ್ಲಾ ಸಮಸ್ಯೆಗಳಿಂದ ಮುಕ್ತಿ ಪಡೆಯಲು ಬಯಸುತ್ತಾನೆ. ಅವನು ಅದಕ್ಕಾಗಿ ಒಂದೇ ಒಂದು ಪರಿಹಾರವನ್ನು ಹುಡುಕುತ್ತಲೇ ಇರುತ್ತಾನೆ. ಅವನು ನಿರಂತರವಾಗಿ ತನ್ನ ಸ್ನೇಹಿತರಿಗೆ ಅದರ ಬಗ್ಗೆ ಹೇಳುತ್ತಲೇ ಇರುತ್ತಾನೆ.

ಒಂದು ದಿನ, ಒಬ್ಬ ಸನ್ಯಾಸಿ ತನ್ನ ಶಿಷ್ಯರೊಂದಿಗೆ ಆ ರೈತ ವಾಸಿಸುತ್ತಿದ್ದ ಹಳ್ಳಿಗೆ ಬಂದ. ಅವನು ಹಳ್ಳಿಯ ಮಧ್ಯದಲ್ಲಿರುವ ರಾಜವೃಕ್ಷದ ಕೆಳಗೆ ಕುಳಿತು ಗ್ರಾಮಸ್ಥರನ್ನು ಆಶೀರ್ವದಿಸಿದ. "ಆ ಸನ್ಯಾಸಿ ತುಂಬಾ ಶಕ್ತಿಶಾಲಿ, ನೀವು ಹೋಗಿ ಅವನನ್ನು ಕೇಳಿದರೆ, ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ" ಎಂದು ಅವನ ಸ್ನೇಹಿತರು ಹೇಳಿದರು.

ರೈತ ಅವನ ಬಳಿಗೆ ಹೋದ. ಸನ್ಯಾಸಿ ತನಗೆ ಹೇಳುವ ಮಂತ್ರವನ್ನು ಬೇರೆ ಯಾರಾದರೂ ಕೇಳಿದರೆ ಏನು ಮಾಡಬೇಕೆಂದು ಯೋಚಿಸುತ್ತಾ ಎಲ್ಲರೂ ಹೋಗುವವರೆಗೂ ಅವನು ಕಾಯುತ್ತಿದ್ದ. ಸನ್ಯಾಸಿ ಹಳ್ಳಿಯ ಎಲ್ಲರೊಂದಿಗೆ ಮಾತನಾಡಿ ಮುಗಿಸಿದ ನಂತರ, ಅವನು ಸನ್ಯಾಸಿಯ ಬಳಿಗೆ ಹೋದ. ಅವನು ಅವರ ಪಾದಗಳಿಗೆ ಬಿದ್ದು ತನ್ನ ಸಮಸ್ಯೆಗಳನ್ನು ಹೇಳಲು ಪ್ರಾರಂಭಿಸಿದ.

"ನನ್ನ ಹೆಂಡತಿ ಕಾರಣವಿಲ್ಲದೆ ನನ್ನನ್ನು ಗದರಿಸುತ್ತಾಳೆ. ನನ್ನ ಮಕ್ಕಳು ನನ್ನ ಮಾತನ್ನು ಕೇಳುವುದಿಲ್ಲ. ಯಾಕೆ ಹಾಗೆ? ನಾನು ಕೃಷಿಗಾಗಿ ಸಾಕಿರುವ ಹಸುಗಳು ಸಹ ನಾನು ಹೇಳಿದಂತೆ ಮಾಡುವುದಿಲ್ಲ. ಭೂಮಿ ಕೂಡ ಫಲವತ್ತಾಗಿಲ್ಲ. ಆದ್ದರಿಂದ ನಾನು ಯಾವುದೇ ಬೀಜಗಳನ್ನು ಬಿತ್ತಿದರೂ ಉತ್ತಮ ಫಸಲು ಬರುವುದಿಲ್ಲ. ನನ್ನ ಕುಟುಂಬವನ್ನು ಪೋಷಿಸಲು ನನಗೆ ಸಿಗುವ ಆದಾಯದ ಬಗ್ಗೆ ನನಗೆ ಬೇಸರ ಇದೆ. ಆದರೆ ಜನರು ಅಸೂಯೆಯಿಂದ ನನ್ನ ಬಗ್ಗೆ ಏನೇನೋ ಮಾತನಾಡುತ್ತಾರೆ" ಎಂದು ರೈತ ಕಣ್ಣೀರು ಸುರಿಸುತ್ತಾ ಹೇಳಿದ. ನಂತರ "ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಮಂತ್ರವನ್ನು ಹೇಳಿ" ಎಂದು ಅವನು ಬೇಡಿಕೊಂಡ.

ಆ ಸನ್ಯಾಸಿ ಅವನನ್ನು ದಯೆಯಿಂದ ನೋಡಿ, "ಮಗನೇ! ನೀನು ಬಹಳ ಮುಖ್ಯವೆಂದು ಭಾವಿಸುವ ಈ ವಿಷಯಗಳನ್ನು ಬಿಟ್ಟು ಸತ್ಯವನ್ನು ಹುಡುಕಲು ಹೋಗಬೇಕು. ಅದೇ ನಿನಗೆ ಇರುವ ಏಕೈಕ ಮಾರ್ಗ" ಎಂದು ಹೇಳಿದ. ರೈತ ಕೆಲವು ಸೆಕೆಂಡುಗಳ ಕಾಲ ಯೋಚಿಸಿದ. "ಇಗೋ ನಾನು ಈಗ ಮತ್ತೆ ಬರುತ್ತೇನೆ, ಸ್ವಾಮಿ" ಎಂದು ಹೇಳಿ ಮನೆಗೆ ಓಡಿಹೋದ. ಅವನು ತನ್ನ ಹೆಂಡತಿಗೆ, "ನಾನು ಇಂದು ಸನ್ಯಾಸಿಯಾಗಲಿದ್ದೇನೆ" ಎಂದು ಹೇಳಿದ. ಆಘಾತಕ್ಕೊಳಗಾದ ಅವನ ಹೆಂಡತಿ ಏನಾಯಿತು ಎಂದು ಕೇಳಿದಳು.

"ನೋಡಿ, ನಿಮಗೆ ಜೀವನದಲ್ಲಿ ಯಾವುದೇ ಸಮಸ್ಯೆಗಳಿದ್ದರೆ, ನಾನು ಸಹಾಯ ಮಾಡಲು ಸಿದ್ಧಳಿದ್ದೇನೆ. ನೀವು ಕುಟುಂಬವನ್ನು ಬಿಟ್ಟು ಹೋಗಬೇಡಿ" ಎಂದು ಹೇಳಿದ ತನ್ನ ಹೆಂಡತಿಯ ಕೋರಿಕೆಯನ್ನು ಅವನು ನಿರ್ಲಕ್ಷಿಸಿದ. ಅವನು ತನಗಾಗಿ ಕೇವಲ ಎರಡು ಜೊತೆ ಬಟ್ಟೆಗಳನ್ನು ತೆಗೆದುಕೊಂಡ. "ಹೋಗಬೇಡಿ"

ಎಂದು ಕಣ್ಣೀರು ಸುರಿಸುತ್ತಿರುವ ಮಕ್ಕಳನ್ನು ನಿರ್ಲಕ್ಷಿಸಿ ಸನ್ಯಾಸಿಯ ಬಳಿಗೆ ಬಂದ. ಒಂದೇ ಒಂದು ಹನಿ ಕಣ್ಣೀರು ಕೂಡ ಸುರಿಸದೆ ತನ್ನ ಕುಟುಂಬವನ್ನು ಬಿಟ್ಟು ಹೋಗಲು ತನ್ನಿಂದ ಸಾಧ್ಯವಾಯಿತು ಎಂದು ಅವನಿಗೆ ಹೆಮ್ಮೆಯಾಯಿತು. ಸನ್ಯಾಸಿಯ ಬಳಿಗೆ ಅವನು ಮರಳಿ ಬಂದು ಹೇಳಿದ, "ಇಂದಿನಿಂದ ನಾನು ಕೂಡ ನಿಮ್ಮ ಶಿಷ್ಯನಾಗುತ್ತೇನೆ. ನಾನೂ ನಿಮ್ಮೊಂದಿಗೆ ಬರುತ್ತೇನೆ" ಎಂದ. ಸನ್ಯಾಸಿ ಅವನಿಗೆ, "ನಾನು ನಿನಗೆ ತ್ಯಾಗ ಮಾಡಲು ಹೇಳಿದ್ದು..." ಎಂದು ಏನೋ ಹೇಳಲು ಪ್ರಾರಂಭಿಸಿದಾಗ, ಅವನು ಅವರನ್ನು ಮಾತನಾಡದಂತೆ ತಡೆದು, "ನೀವು ಏನನ್ನೂ ಹೇಳುವುದು ಬೇಡ. ನಾನು ಇನ್ನು ನಿಮ್ಮಲ್ಲಿ ಒಬ್ಬನಾಗಿ ಹೋಗಿದ್ದೇನೆ" ಎಂದು ಹೇಳಿದ. ಸನ್ಯಾಸಿ ಒಂದು ಅರ್ಥಪೂರ್ಣವಾದ ನಗುವಿನೊಂದಿಗೆ ಅವನನ್ನು ತಮ್ಮೊಂದಿಗೆ ಕರೆದುಕೊಂಡು ಹೊರಟರು.

ಆ ಹಳ್ಳಿಯಿಂದ ಕಾಡಿನ ಮೂಲಕ ಸನ್ಯಾಸಿಯ ಗುಂಪು ಪ್ರಯಾಣ ಆರಂಭಿಸಿತು. ತನ್ನನ್ನು ತಾನು ಸನ್ಯಾಸಿ ಎಂದು ಭಾವಿಸಿಕೊಂಡ ರೈತ ಉತ್ಸಾಹದಿಂದ ಅವರೊಂದಿಗೆ ನಡೆದ. ಆದರೆ ಅದು ಹೆಚ್ಚು ಕಾಲ ಉಳಿಯಲಿಲ್ಲ. ದೀರ್ಘ ನಡಿಗೆಯಿಂದ ಅವನ ಕಾಲುಗಳು ನೋಯುತ್ತಿದ್ದವು. ಸೂರ್ಯ ಮುಳುಗಲು ಪ್ರಾರಂಭಿಸುತ್ತಿದ್ದಂತೆ ಅವನಿಗೆ ಚಳಿಯಾಯಿತು. ಅವನ ಹೊಟ್ಟೆ ಹಸಿದಿತ್ತು. ಸನ್ಯಾಸಿಗಳ ಗುಂಪು ಅವನಿಗೆ ನೀಡಿದ ಸರಳ ಆಹಾರ ಸಾಕಾಗಲಿಲ್ಲ. ಮನೆಯ ನೆನಪು ಬಂದು ಅವನು ರಾತ್ರಿಯಿಡೀ ಮರದ ಕೆಳಗೆ, ಚಳಿಯಲ್ಲಿ ನಡುಗುತ್ತಾ ಮಲಗಿದ.

ಮರುದಿನ ಬೆಳಿಗ್ಗೆ ಅವನ ಮುಖ ಬದಲಾಗಿತ್ತು. ಸನ್ಯಾಸಿ ಅವನನ್ನು ನೋಡಿ, "ಏನಾಯಿತು? ಒಂದೇ ದಿನದಲ್ಲಿ ನೀನು ಹೀಗೇಕೆ ಆದೆ?" ಎಂದು ಕೇಳಿದ. ರೈತ ಕೋಪದಿಂದ ಉತ್ತರಿಸಿದ, "ಎಲ್ಲದಕ್ಕೂ ನೀವೇ ಕಾರಣ. ನಿಮ್ಮ ಮಾತು ಕೇಳಿ ನಾನು ನನ್ನ ಪ್ರೀತಿಯ ಹೆಂಡತಿಯನ್ನು ಬಿಟ್ಟು ಬಂದೆ. ನನ್ನ ಮಕ್ಕಳನ್ನು ಬಿಟ್ಟು ಬಂದೆ. ಹೊಲದಲ್ಲಿ ಬೆಳೆಗಳಿಗೆ ನೀರು ಹಾಕಬೇಕಾಗಿತ್ತು. ನಾನು ನೀರು ಹಾಕುವುದನ್ನು ಕೂಡ ಮರೆತು ಬಂದೆ. ನೀವು ನನ್ನನ್ನು ಎಚ್ಚರಿಸದೆ ಅಥವಾ ಸರಿಪಡಿಸದೆ ನಿಮ್ಮೊಂದಿಗೆ ಕರೆದುಕೊಂಡು ಬಂದಿದ್ದೀರಿ. ಇದು ನ್ಯಾಯವೇ?" ಎಂದು ಅವನು ಕೂಗಾಡಿದ.

ಸನ್ಯಾಸಿ ನಕ್ಕು ನಂತರ ಹೇಳಿದ: "ಮಗನೇ, ನೀನು ನನ್ನ ಮಾತನ್ನು ಎಲ್ಲಿ ಕೇಳಿದೆ? ನೀನು ನನ್ನನ್ನು ಎಂದಿಗೂ ಮಾತನಾಡಲು ಬಿಡಲಿಲ್ಲ! ನಿನ್ನೊಳಗಿನ 'ನಾನು' ಎಂಬ ಅಹಂಕಾರವೇ ನಿನ್ನ ಹೆಂಡತಿಯ ಕೆಲಸಗಳಲ್ಲಿ ತಪ್ಪು ಹುಡುಕುತ್ತದೆ. ಅದು ನಿನ್ನ ಮಕ್ಕಳನ್ನು ಪ್ರೀತಿಸುವ ಬದಲು ಅವರನ್ನು ನಿಗ್ರಹಿಸಲು ಹೇಳುತ್ತದೆ. ಅದಕ್ಕಾಗಿಯೇ ಅವರು ನಿನ್ನನ್ನು ಗೌರವಿಸುವುದಿಲ್ಲ ಎಂದು ನೀನು ಭಾವಿಸುತ್ತೀಯ. ಆ 'ನಾನು' ಎಂಬ ಆಲೋಚನೆಯನ್ನು ತ್ಯಜಿಸಲು ನಾನು ನಿನಗೆ ಹೇಳಿದೆ. ಆದರೆ ನೀನು ನಿನ್ನ ಕುಟುಂಬವನ್ನು ತ್ಯಜಿಸಿದೆ. ಅಹಂಕಾರದಿಂದ ಮುಕ್ತನಾಗಿ ಮನೆಗೆ ಹೋಗು. ನಿನ್ನ ಹೆಂಡತಿಯ ಬಳಿ ಕ್ಷಮೆ ಕೇಳು. ನಿನ್ನ ಮಕ್ಕಳನ್ನು ಪ್ರೀತಿಸು. ಸಮರ್ಪಣಾ ಭಾವದಿಂದ ಕೃಷಿ ಮಾಡು. ಎಲ್ಲವೂ ಬದಲಾಗುತ್ತದೆ" ಎಂದು ಹೇಳಿ ಅವನನ್ನು ವಾಪಸ್ ಕಳುಹಿಸಿದ.

ಕೆಲವು ವರ್ಷಗಳ ನಂತರ ಆ ಸನ್ಯಾಸಿ ಅದೇ ಹಳ್ಳಿಗೆ ಮತ್ತೆ ಬಂದಾಗ, ಆ ರೈತ ಹಳ್ಳಿಯ ಎಲ್ಲರಿಗೂ ಸಲಹೆ ನೀಡುವ ಪ್ರಭಾವಿ ವ್ಯಕ್ತಿಯಾಗಿದ್ದ. ಅವನು ತನ್ನ ಪ್ರೀತಿಯ ಕುಟುಂಬದೊಂದಿಗೆ ಬಂದು ಸನ್ಯಾಸಿಯ ಆಶೀರ್ವಾದವನ್ನು ಪಡೆದುಕೊಂಡ.

'ನಾನು' ಮತ್ತು 'ಇದು ನನ್ನಿಂದಾಗುತ್ತಿದೆ' ಎಂಬಂತಹ ಆಲೋಚನೆಗಳು ನಮ್ಮಿಂದ ಹೊರಟು ಹೋದರೆ, ನಮಗೆ ಯಾವುದೇ ಸಮಸ್ಯೆಗಳಿರುವುದಿಲ್ಲ.

ಪ್ರತಿಯೊಬ್ಬರಿಗೂ ಒಂದೊಂದು ಬಿಡುಗಡೆ!

ಒಬ್ಬ ಮಹಿಳೆ ನಾಲ್ಕು ಮನೆಗಳಲ್ಲಿ ಮನೆಗೆಲಸದವಳಾಗಿ ಕೆಲಸ ಮಾಡುತ್ತಿದ್ದಳು. ಆಕೆಯ ಪತಿ ಅನಾರೋಗ್ಯದಿಂದ ಬಳಲುತ್ತಿದ್ದರು ಮತ್ತು ಅದರಿಂದ ಅವರು ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಆ ಮಹಿಳೆಯ ಆದಾಯವು ಕುಟುಂಬದ ಏಕೈಕ ಆದಾಯದ ಮೂಲವಾಗಿತ್ತು.

ಇದ್ದಕ್ಕಿದ್ದಂತೆ ಆಕೆಯ ಪತಿಯ ಆರೋಗ್ಯ ಹದಗೆಟ್ಟು ಪತಿ ತೀರಿಕೊಂಡರು. ಒಂದೆಡೆ ಪತಿಯ ಸಾವಿನ ದುಃಖ... ಮತ್ತೊಂದೆಡೆ ವೈದ್ಯಕೀಯ ವೆಚ್ಚಕ್ಕಾಗಿ ಪಡೆದ ಸಾಲಗಳ ಹೊರೆ... ಮತ್ತೊಂದೆಡೆ ಮೂವರು ಮಕ್ಕಳನ್ನು ಒಂಟಿಯಾಗಿ ಬೆಳೆಸಿ ರಕ್ಷಿಸಬೇಕಾದ ಕುಟುಂಬದ ಜವಾಬ್ದಾರಿಗಳು... ಈ ಎಲ್ಲಾ ಚಿಂತೆಗಳಿಂದ ಬಿಡುಗಡೆ ಹೊಂದಬೇಕೆಂಬ ಕಾರಣಕ್ಕಾಗಿ ಅವಳು ಯಾವುದೇ ಕಠಿಣ ನಿರ್ಧಾರ ತೆಗೆದುಕೊಳ್ಳಲಿಲ್ಲ. ಬದಲಾಗಿ, ಅವಳು ಈಗಾಗಲೇ ನಾಲ್ಕು ಮನೆಗಳಲ್ಲಿ ಕೆಲಸ ಮಾಡುತ್ತಿದ್ದಳು ಮತ್ತು ಇನ್ನೊಂದು ಮನೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದಳು.

ಆಕೆ ಯಾವುದೇ ಸಂದರ್ಭದಲ್ಲೂ ಗೊಣಗದೆ, ಯಾವಾಗಲೂ ಮುಖದಲ್ಲಿ ನಗುವನ್ನು ಇಟ್ಟುಕೊಂಡು ಕೆಲಸ ಮಾಡುವ ವ್ಯಕ್ತಿ. ಆದ್ದರಿಂದ ಎಲ್ಲ ಮನೆಯವರೂ ಆಕೆಯನ್ನು ಇಷ್ಟ ಪಡುತ್ತಿದ್ದರು. ಬಾಗಿಲಿನ ಮುಂದೆ ರಂಗೋಲಿ ಹಾಕುವುದರಿಂದ ಹಿಡಿದು ಅಡುಗೆ ಪಾತ್ರೆಗಳನ್ನು ಸ್ವಚ್ಛಗೊಳಿಸುವವರೆಗೆ, ಎಲ್ಲವನ್ನೂ ಆಕೆ ಮೊದಲಿನಂತೆಯೇ ಅಚ್ಚುಕಟ್ಟಾಗಿ ಮಾಡುತ್ತಿದ್ದಳು!

ಇದು ಇನ್ನೊಂದು ಕಥೆ... 70 ವರ್ಷಗಳ ಮುರುಗಯ್ಯ ಎಳನೀರು ವ್ಯಾಪಾರಿ. ಈ ವಯಸ್ಸಿನಲ್ಲೂ ಕೈಯಲ್ಲಿ ಯಾವುದೇ ನಡುಕವಿಲ್ಲದೆ ಹರಿತವಾದ ಕತ್ತಿಯಿಂದ ಎಳನೀರು ಕತ್ತರಿಸುವ ಅವರ ರೀತಿ ಎಲ್ಲರನ್ನೂ ಬೆರಗುಗೊಳಿಸುತ್ತಿತ್ತು. ಒಂದು ಹನಿಯೂ ವ್ಯರ್ಥವಾಗದಂತೆ ಅವರು ಕೌಶಲ್ಯದಿಂದ ಎಳನೀರು ಕತ್ತರಿಸಿ ತಮ್ಮ ಗ್ರಾಹಕರಿಗೆ ಹಸ್ತಾಂತರಿಸುತ್ತಿದ್ದರು. ನೀರು ಕುಡಿದ ನಂತರ, ಅದರ ಒಳಗಿನ ತಿರುಳನ್ನು ತುಂಬ ಚೆನ್ನಾಗಿ ಕೆರೆದುಕೊಡುತ್ತಿದ್ದರು.

ಈ ವಯಸ್ಸಿನಲ್ಲಿ ಅವರು ಏಕೆ ಕೆಲಸ ಮಾಡಬೇಕು? ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರೆಲ್ಲರೂ ಒಳ್ಳೆಯ ಕೆಲಸಗಳಲ್ಲಿದ್ದಾರೆ. ಅವರು ಪ್ರತ್ಯೇಕ ಕುಟುಂಬಗಳಾಗಿ ಬೇರೆ ಬೇರೆ ಪಟ್ಟಣಗಳಲ್ಲಿ ನೆಲೆಸಿದ್ದರು. ಹಳ್ಳಿಯ ಮನೆಯಲ್ಲಿ ತನ್ನ ಹೆಂಡತಿಯೊಂದಿಗೆ ಇದ್ದ ಮುರುಗಯ್ಯ, ಇತ್ತೀಚೆಗೆ ತನ್ನ ಹೆಂಡತಿ ನಿಧನವಾಗಿದ್ದರೂ ಎಳನೀರು ಮಾರಾಟ ಮಾಡುವ ತನ್ನ ವೃತ್ತಿಯನ್ನು ಮುಂದುವರೆಸಿದ್ದರು. ಅವರ ಮಕ್ಕಳು ತಮ್ಮೊಂದಿಗೆ ಬಂದು ವಾಸಿಸುವಂತೆ ಇವರನ್ನು ಕರೆಯುತ್ತಿದ್ದರು. ಆದರೆ ತಾನು ಅವರಲ್ಲಿಗೆ ಹೋದರೆ, ತನ್ನ ಸೊಸೆಯಂದಿರು ತನ್ನನ್ನು ಹೊರೆಯೆಂದು ಭಾವಿಸಬಹುದು ಎಂದು ಅವರು ಹಿಂಜರಿಯುತ್ತಿದ್ದರು ಮತ್ತು ತಮ್ಮ ಸ್ವಾತಂತ್ರ್ಯ ಕಳೆದು ಹೋಗುತ್ತದೆ ಎಂದು ಅವರು ಭಯ ಪಡುತ್ತಿದ್ದರು. 'ನಾನು ನನ್ನಿಂದ ಸಾಧ್ಯವಾದಷ್ಟೂ ಕಾಲ ನನ್ನ ಕೆಲಸ ಮಾಡುತ್ತೇನೆ. ನನ್ನ ವೃದ್ಧಾಪ್ಯಕ್ಕಾಗಿ ನಾನು ಸ್ವಲ್ಪ ಉಳಿಸಿಟ್ಟಿದ್ದೇನೆ. ನನ್ನ ಕೊನೆಯ ಊಟವನ್ನು ಕೂಡ ನನ್ನ ಗಳಿಕೆಯಲ್ಲಿ ತಿನ್ನಲು ಸಾಧ್ಯವಾದರೆ ಅದಕ್ಕಿಂತ ಹೆಚ್ಚಿನ ತೃಪ್ತಿ ನನಗೆ ಇನ್ನೊಂದಿಲ್ಲ' ಎಂದು ಅವರು ಹೇಳುತ್ತಿದ್ದರು.

ಹೀಗೆ ಹೇಳುವವರು ಅನೇಕರಿದ್ದಾರೆ. ಸ್ವಾತಂತ್ರ್ಯದ ಅರ್ಥ ಎಲ್ಲರಿಗೂ ಹೀಗೆ ಭಿನ್ನವಾಗಿರುತ್ತದೆ. ಸರಳ ಕುಟುಂಬದಿಂದ ಬಂದ ಯಾರನ್ನಾದರೂ ಕೇಳಿದರೆ, 'ನಿಜವಾದ ಸ್ವಾತಂತ್ರ್ಯ ಎಂದರೆ ಯಾವುದೇ ನಿರ್ಬಂಧಗಳಿಲ್ಲದೆ ತಮ್ಮ ಮನಸ್ಸಿಗೆ ಬಂದಷ್ಟು ತಿನ್ನಲು ಸಾಧ್ಯವಾಗುವುದು' ಎಂದು ಅವರು ಹೇಳಬಹುದು. ತಮ್ಮ ಕುಟುಂಬವನ್ನು ಹಾಗೆ ತಾವು ಪೋಷಿಸಲು ಸಾಧ್ಯವಾಗುವುದು ತೃಪ್ತಿ ಎಂದು ಕೆಲವರು ಹೇಳುವುದು.

ಮಧ್ಯಮ ವರ್ಗದ ಕುಟುಂಬದಿಂದ ಬಂದ ಯಾರನ್ನಾದರೂ

ಕೇಳಿದರೆ, ನಿಜವಾದ ಸ್ವಾತಂತ್ರ್ಯ ಎಂದರೆ ಯಾವುದೇ ರಾಜಿ ಇಲ್ಲದೆ ತಮಗೆ ಬೇಕಾದುದನ್ನು ಮಾಡಲು ಸಾಧ್ಯವಾಗುವುದು ಎಂದು ಅವರು ಹೇಳುತ್ತಾರೆ. ಅವರು ಆಹಾರಕ್ಕಾಗಿ ಹೋರಾಡಬೇಕಾದ ಪರಿಸ್ಥಿತಿಯಲ್ಲಿ ಇರುವುದಿಲ್ಲ. ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಲು ಅವರ ಬಳಿ ಹಣವಿರುತ್ತದೆ. ಆದರೆ ಅವರು ತಮ್ಮ ದೊಡ್ಡ ಕನಸುಗಳನ್ನು ನನಸಾಗಿಸಿಕೊಳ್ಳಲು ಸಾಧ್ಯವಾಗದಷ್ಟು ಒತ್ತಡದಲ್ಲಿರುತ್ತಾರೆ. ಅವರು ಅನೇಕ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಕುಟುಂಬದ ಹಿತದೃಷ್ಟಿಯಿಂದ ಅವರು ಕೆಲವು ವಿಷಯಗಳನ್ನು ತ್ಯಾಗ ಮಾಡಬೇಕಾಗುತ್ತದೆ.

ನೀವು ಒಬ್ಬ ಶ್ರೀಮಂತ ವ್ಯಕ್ತಿಯನ್ನು ಕೇಳಿದರೆ, ನಿಜವಾದ ಸ್ವಾತಂತ್ರ್ಯವೆಂದರೆ ಸರ್ಕಾರದಿಂದ ಯಾವುದೇ ನಿರ್ಬಂಧಗಳಿಲ್ಲದೆ ವ್ಯಾಪಾರ ವ್ಯವಹಾರ ನಿರ್ವಹಿಸಲು ಅವಕಾಶ ನೀಡುವುದು ಎಂದು ಅವರು ಹೇಳುತ್ತಾರೆ. ಅನೇಕ ನಿರ್ಬಂಧಗಳು ಮತ್ತು ಪರಿಸ್ಥಿತಿಗಳು ತನ್ನ ಬೆಳವಣಿಗೆಗೆ ಅಡ್ಡಿಯಾಗುತ್ತಿವೆ ಎಂದು ಅವರು ದೂರುತ್ತಾರೆ.

ಪ್ರತಿಯೊಬ್ಬರ ಜೀವನದಲ್ಲಿ ಮತ್ತು ಪ್ರತಿಯೊಬ್ಬರ ದೃಷ್ಟಿಕೋನದಲ್ಲಿ ಸ್ವಾತಂತ್ರ್ಯವು ವಿಭಿನ್ನ ಅರ್ಥಗಳನ್ನು ಹೊಂದಿದೆ. ಆದರೆ, ಮೂಲಭೂತವಾಗಿ ನಿಜವಾದ ಸ್ವಾತಂತ್ರ್ಯವೆಂದರೆ ಯಾವುದೇ ನಿರ್ಬಂಧಗಳಿಲ್ಲದೆ ನಿಮಗೆ ಬೇಕಾದುದನ್ನು ಮಾಡುವ ಅವಕಾಶ ಇರುವುದು. ಪ್ರತಿಯೊಬ್ಬರೂ ಇತರರ ಸ್ವಾತಂತ್ರ್ಯವನ್ನು ಗೌರವಿಸುತ್ತಾ ಮತ್ತು ಸರಿ ತಪ್ಪುಗಳನ್ನು ಗುರುತಿಸುತ್ತಾ ವರ್ತಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಕಠಿಣ ಪರಿಶ್ರಮದ ಮೂಲಕ ಯಶಸ್ಸನ್ನು ಆನಂದಿಸುವವರು ವೈಫಲ್ಯವನ್ನು ಎದುರಿಸಿದಾಗ ನಿರುತ್ಸಾಹಗೊಳ್ಳುತ್ತಾರೆ. ಅಂತಹ ಸನ್ನಿವೇಶಗಳಲ್ಲಿ ಇತರರು ಅವರನ್ನು ಬೆಂಬಲಿಸಿ ಪ್ರೋತ್ಸಾಹಿಸಬೇಕು. ಆಗ ಅವರು ಅದರ ಪರಿಣಾಮಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಪ್ರತಿಯೊಬ್ಬರಿಗೂ ತಮ್ಮ ಜೀವನದಲ್ಲಿ ಮುಂದಿನ ಹಂತಕ್ಕೆ ಹೋಗಬೇಕೆಂಬ ಆಸೆ ಇರುತ್ತದೆ. ಹೆಚ್ಚಿನ ಜನರು ಅದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಕಾರಣ, ಅವರು ಎತ್ತರಕ್ಕೆ ಹಾರಲು ಬಯಸಿದಾಗ, ಅವರನ್ನು ಹಿಡಿದುಕೊಂಡು ಕೆಳಗೆ ಎಳೆಯುವ ಅನೇಕ ಜನರಿರುತ್ತಾರೆ. ಕುಟುಂಬ ಮತ್ತು ಸ್ನೇಹಿತರು ಅವರನ್ನು ಮೇಲಕ್ಕೆ ಹಾರಲು ಬಿಡಬೇಕು. ಅದಕ್ಕಾಗಿ ಅವರಿಗೆ ಅಗತ್ಯವಿದ್ದಲ್ಲಿ ಆರ್ಥಿಕ ಬೆಂಬಲವನ್ನೂ ನೀಡಬೇಕು. ಹಣ ಮಾತ್ರ ಯಶಸ್ಸನ್ನು ನಿರ್ಧರಿಸುವುದಿಲ್ಲ, ಸರಿ. ಆದರೆ, ಅದು ನಾವು ಜೀವನದಲ್ಲಿ ಎದುರಿಸುವ ಅನೇಕ ಸಮಸ್ಯೆಗಳಿಂದ ನಮಗೆ ಸ್ವಾತಂತ್ರ್ಯವನ್ನು ನೀಡುತ್ತದೆ.

ಯಾವುದೇ ಚಟುವಟಿಕೆಯಲ್ಲಿ, ಲಾಭ ಮತ್ತು ನಷ್ಟಗಳಿರಬಹುದು. ಗೆಲುವು ಮತ್ತು ಸೋಲುಗಳಿರಬಹುದು, ಸಂತೋಷ ಮತ್ತು ದುಃಖವಿರಬಹುದು. ಆದರೆ ಉನ್ನತ ಗುರಿಯತ್ತ ಕೆಲಸ ಮಾಡುವಾಗ, ಎರಡನ್ನೂ ಸಮಾನವಾಗಿ ನೋಡುವ ಮನಸ್ಸು ನಮ್ಮಲ್ಲಿರಬೇಕು. ಅದುವೇ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಅಂತಹ ಚಟುವಟಿಕೆಯಲ್ಲಿ, ಏನನ್ನಾದರೂ ಸಾಧಿಸುವುದರಿಂದ ತೃಪ್ತಿ ಇರುತ್ತದೆ. ಅದು ಪರಿಪೂರ್ಣ ಸ್ವಾತಂತ್ರ್ಯ. ಅದು ನಮ್ಮ ಜೀವನವನ್ನು ಅರ್ಥಪೂರ್ಣವಾಗಿಸುತ್ತದೆ.

ಬಿಡುಗಡೆಯ ಅರ್ಥ!

'ನನ್ನ ಜೀವನದಲ್ಲಿ ಒಂದು ದಿನವೂ ಕೂಡ ನಾನು ನನಗಿಷ್ಟವಿಲ್ಲದ ಕೆಲಸವನ್ನು ಕಷ್ಟಪಟ್ಟು ಮಾಡಬೇಕಾದ ಪರಿಸ್ಥಿತಿ ನನಗಿರಬಾರದು. ನನಗೆ ಇಷ್ಟವಾದ ಕೆಲಸವನ್ನು, ನನಗೆ ಬೇಕಾದಾಗ ಮಾಡಿ, ಬಹಳಷ್ಟು ಹಣ ಸಂಪಾದಿಸಬೇಕು. ನಾನು ನಿವೃತ್ತನಾದ ಮೇಲೆ ಸಮುದ್ರ ತೀರದ ಬಳಿ ಒಂದು ಸುಂದರವಾದ ಬಂಗಲೆಯನ್ನು ಕಟ್ಟಿಕೊಂಡು ಅದರಲ್ಲಿ ವಾಸಿಸಬೇಕು ಮತ್ತು ನನ್ನ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಉಳಿತಾಯವನ್ನು ಹೊಂದಲು ಬಯಸುತ್ತೇನೆ. ಇದರಿಂದ ನನ್ನ ನಿವೃತ್ತಿಯ ಉದ್ದಕ್ಕೂ ಹಣದ ಬಗ್ಗೆ ನಾನು ಚಿಂತಿಸಬೇಕಾಗಿರುವುದಿಲ್ಲ. ಇದು ನನ್ನ ಸ್ವಾತಂತ್ರ್ಯ'.

ಈ ರೀತಿ ಯೋಚಿಸುವ ಅನೇಕ ಯುವಕರಿದ್ದಾರೆ. ಅವರು ದೈನಂದಿನ ಜೀವನದ ಹೊರೆಗಳನ್ನು ದ್ವೇಷಿಸುತ್ತಾರೆ. ಅವರು ತಮ್ಮ ಕೆಲಸವನ್ನು ದ್ವೇಷಿಸುತ್ತಾರೆ. ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಕಷ್ಟಪಟ್ಟು ಕೆಲಸ ಮಾಡುವುದನ್ನು ದ್ವೇಷಿಸುತ್ತಾರೆ. ನೀವು ಅವರಿಗೆ ಒಂದು ನಿರ್ದಿಷ್ಟ ಗುರಿಯನ್ನು ನೀಡಿ, ಇದನ್ನು ಶೀಘ್ರವಾಗಿ ಮಾಡಬೇಕೆಂದು ಹೇಳಿದರೆ, ಅವರು ಕೋಪಗೊಳ್ಳುತ್ತಾರೆ. ಅವರು ಸಂಖ್ಯೆಗಳ ಹಿಂದೆ ತಮ್ಮನ್ನು ಓಡುವಂತೆ ಮಾಡಲಾಗುತ್ತಿದೆ ಎಂದು ದೂರುತ್ತಾರೆ. ಅವರು ವಾರಾಂತ್ಯದಲ್ಲಿ ಪರ್ವತ ಪ್ರದೇಶ ಅಥವಾ ಬೀಚ್‌ಗಳಲ್ಲಿರುವ ರೆಸಾರ್ಟ್‌ಗೆ ಹೋದಾಗ, ಪ್ರತಿ ದಿನವೂ ಹೀಗೇ ಇರಬೇಕೆಂದು ಹಾತೊರೆಯುತ್ತಾರೆ.

ಇದು ಅಸಾಧ್ಯವಾದ ಕನಸು. ಸುಳ್ಳು ಕನಸು ಕೂಡ! ಸ್ವಾತಂತ್ರ್ಯ ಎಂದರೆ ದಿನದ 24 ಗಂಟೆಗಳ ಕಾಲವನ್ನೂ ವಿಶ್ರಾಂತಿ ಮತ್ತು ಮನರಂಜನೆಯೊಂದಿಗೆ ಆನಂದಿಸುವುದಲ್ಲ! ನಾವು ಯಾವ ಕೆಲಸವನ್ನು ಮಾಡಲು ಪ್ರೇರೇಪಿಸಲ್ಪಟ್ಟಿದ್ದರೂ, ಅದನ್ನು ಉತ್ಸಾಹದಿಂದ ಮಾಡುವುದು. ನಾವು ತೊಡಗಿಸಿಕೊಂಡಿರುವ ಕ್ಷೇತ್ರದಲ್ಲಿನ ಇತ್ತೀಚಿನ ಎಲ್ಲಾ ತಂತ್ರಜ್ಞಾನಗಳನ್ನು ತಿಳಿದುಕೊಳ್ಳುವುದು. ನಮಗೆ ತೃಪ್ತಿಯನ್ನು ನೀಡುವ ಯಾವುದನ್ನಾದರೂ ಮಾಡುವುದು ಮತ್ತು ಆ ಕೆಲಸವನ್ನು ಪ್ರೀತಿಸುವುದು.

'ನಿಮ್ಮ ನಿವೃತ್ತಿಯ ಜೀವನವನ್ನು ಆನಂದದಿಂದ ಕಳೆಯಲು ಈಗಲೇ ಒಂದು ಜಮೀನು ಖರೀದಿಸಿ' ಎಂದು ಜಾಹೀರಾತುಗಳನ್ನು ನೀಡಲಾಗುತ್ತದೆ. ಮನುಷ್ಯರನ್ನು ಸೋಮಾರಿಯಾಗಿರಲು ಸೃಷ್ಟಿಸಲಾಗಿಲ್ಲ. ಮನುಷ್ಯರನ್ನು ಮಾತ್ರವಲ್ಲ, ಯಾವುದೇ ಜೀವಿಯನ್ನೂ ಸೋಮಾರಿಯಾಗಿರಲು ಸೃಷ್ಟಿಸಲಾಗಿಲ್ಲ. ಕೆಲಸವೇ ಜೀವನದ ಮಂತ್ರ. ಊಟಿ ಅಥವಾ ಕಾಶ್ಮೀರದಂತಹ ಪ್ರವಾಸೀ ತಾಣಗಳಿಗೆ ಹೋಗುವವರಿಗೆ ತಮ್ಮ ದೈನಂದಿನ ಕೆಲಸಗಳ ನೆನಪುಗಳು ಕಾಡುತ್ತವೆ. ಅವರು ಯೋಚಿಸುತ್ತಾರೆ, 'ಈ ರೀತಿ ಅಡುಗೆ ಮಾಡದೆಯೇ, ನಾವು ಊಟ ಮಾಡಿಕೊಂಡು ಪಟ್ಟಣದಲ್ಲಿ ಸುತ್ತಾಡಲು ಸಾಧ್ಯವಾದರೆ ಎಷ್ಟು ಸಂತೋಷವಾಗಿರುತ್ತದೆ' ಎಂದು. ಆದರೆ ಮೂರು ಅಥವಾ ನಾಲ್ಕು ದಿನಗಳ ನಂತರ ಆ ಪ್ರವಾಸಿ ಜೀವನವು ಬೇಸರವೆನಿಸತೊಡಗುತ್ತದೆ. 'ನಾವು ಯಾವಾಗ ಸಾಮಾನ್ಯ ಜೀವನಕ್ಕೆ ಮರಳುತ್ತೇವೆ?' ಎಂದು ಅವರು ತಮ್ಮ ಕೆಲಸ ಅಥವಾ ವೃತ್ತಿಯ ಬಗ್ಗೆ ಚಿಂತಿಸಲು ಪ್ರಾರಂಭಿಸುತ್ತಾರೆ.

ಮನೆಯಲ್ಲಿ ಇರುವ ನಿವೃತ್ತರನ್ನು ಕೇಳಿದರೆ, ಸುಮ್ಮನಿರುವುದು ಎಷ್ಟು ಕಷ್ಟಕರವಾದುದು ಎಂದು ನಿಮಗೆ ಅರ್ಥವಾಗುತ್ತದೆ. ಇಷ್ಟು ದಿನ ತಮ್ಮ ಗುರುತಾಗಿದ್ದ ಕೆಲಸ, ವೃತ್ತಿಯನ್ನು ಬಿಟ್ಟು, ಒರಗಿಕೊಳ್ಳುವ ಕುರ್ಚಿಯಲ್ಲಿ ಕುಳಿತು ಜೀವನ ಸಾಗಿಸುವುದು ಕಷ್ಟ. ಅದಕ್ಕಾಗಿಯೇ ಅನೇಕ ಜನರು 60 ವರ್ಷ ವಯಸ್ಸಿನ ನಂತರವೂ ದಣಿವರಿವಿಲ್ಲದೆ ಕೆಲಸ ಮಾಡುತ್ತಾರೆ.

ವಿಶ್ರಾಂತಿ ಮತ್ತು ಮನರಂಜನೆ ಅಗತ್ಯ. ಆಗ ಮಾತ್ರ ದೇಹ ಮತ್ತು ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ ಮತ್ತು ನಾವು ಉತ್ಸಾಹದಿಂದ ಕಾರ್ಯ ನಿರ್ವಹಿಸಬಹುದು. ಆದರೆ ಜೀವನವು ಕೇವಲ ವಿಶ್ರಾಂತಿ ಮತ್ತು ಮನರಂಜನೆಯಾಗಿದ್ದರೆ ಅದು ಉಚಿತ ಜೀವನವಲ್ಲ. ಅಂತಹ ಜೀವನವು ನಮಗೆ ಏನನ್ನೂ ನೀಡುವುದಿಲ್ಲ. ಕಠಿಣ ಪರಿಶ್ರಮವಿಲ್ಲದೆ, ಹಣ ಖಂಡಿತವಾಗಿಯೂ ಬರುವುದಿಲ್ಲ. ಸ್ವಾತಂತ್ರ್ಯದ ಅರ್ಥ ಉತ್ಸಾಹಭರಿತ ಕೆಲಸ ಎಂದು ನಾವು ಅರ್ಥ ಮಾಡಿಕೊಳ್ಳಬೇಕು!

Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL



Inners for Winners
RAMRAJ
VESTS
BRIEFS • TRUNKS
EVERYDAY ARMOUR FOR TODAY'S PERFORMERS
Shreyas Iyer - Cricketer
SCAN QR CODE FOR STORE LOCATION
SUKRA SUPER FINE COTTON VESTS
ROMEX SUPERIOR BANIANS
RISE-UP PREMIUM BANIANS
ACOSTE LUXURY INNERWEARS
Breeze Eye Let Vests
WinStripe STRIPED BANIANS
ARCHERY GYM VEST
COMPACT PREMIUM COTTON RIB VESTS
LITTLE STARS KIDS INNERWEARS
Available at Ramraj Showrooms and All Leading Textile Shops | Shop Online at www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-08-2025 Posted at Tirupur BPC on 5th of every month.